ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 20 ಸೋಮವಾರ 2023

ಸಂಪುಟ: 44 | ಸಂಚಿಕೆ: 213 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.cor..

₹4

6ನೇ ಬಾರಿ ಆಸ್ಟ್ರೇಲಿಯಾ ವಿಶ್ವಕಪ್ ಚಾಂಪಿಯನ್

■ಭಾರತ ರನ್ನರ್ ಅಪ್ ■ಕಪ್ ಗೆಲ್ಲುವ ಶತಕೋಟಿ ಭಾರತೀಯರ ಕನಸು ಭಗ್ನ ■ವಿರಾಟ್ ಕೊಹ್ಲಿ ಸರಣಿ ಶ್ರೇಷ್ಠ

ಅಹಮದಾಬಾದ್, ನ.19– ಕೋಟ್ಯಾಂತರ ಅಭಿಮಾನಿಗಳ ಪ್ರಾರ್ಥನೆ ಫಲಿಸಲಿಲ್ಲ. 20 ವರ್ಷಗಳ ಸೇಡು ತೀರಲಿಲ್ಲ. ಮೂರನೇ ಬಾರಿ ಟ್ರೋಫಿ ಗೆಲ್ಲುವ ಭಾರತದ ಕನಸು ಕೂಡ ಈಡೇರಲಿಲ್ಲ. ಕೋಚ್ ರಾಹುಲ್ ದ್ರಾವಿಡ್‌ಗೆ ಟ್ರೋಫಿ ಉಡುಗೊರೆ ನೀಡಲು ಟೀಮ್ ಇಂಡಿಯಾ ಸದಸ್ಯರಿಗೆ ಸಾಧ್ಯವಾಗಲಿಲ್ಲ.

ಹೌದು... ವಿಶ್ವಕಪ್ ಇತಿಹಾಸದಲ್ಲೇ ಕಂಡು ಕೇಳರಿಯದ ರೀತಿಯಲ್ಲಿ ಈ ಬಾರಿ ಸತತ ಹತ್ತು ಪಂದ್ಯಗಳಲ್ಲಿ ಸರ್ವಶ್ರೇಷ್ಠ ಪ್ರದರ್ಶನ ನೀಡಿದ್ದ ಭಾರತ, ಫೈನಲ್ ಪಂದ್ಯದಲ್ಲಿ ಮಾತ್ರ ಬ್ಯಾಟಿಂಗ್, ಬೌಲಿಂಗ್ ಮತ್ತು ಫೀಲ್ಡಿಂಗ್ ಮೂರರಲ್ಲೂ ಆಸ್ಟ್ರೇಲಿಯಾ ವಿರುದ್ಧ ಮುಗ್ಗರಿಸಿತು. ಹೀಗಾಗಿ ತವರಿನಲ್ಲಿ ಟ್ರೋಫಿ ಎತ್ತಿ ಹಿಡಿಯುವ ಹಾಗೂ 2003ರ ಫೈನಲ್ ಸೋಲಿಗೆ ಸೇಡು ತೀರಿಸಿಕೊಳ್ಳುವ ರೋಹಿತ್ ಶರ್ಮಾ ಬಳಗದ ಕನಸು ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನುಚ್ಚು ನೂರಾಯಿತು.

ಲೀಗ್ ಹಂತದ ಮೊದಲೆರೆಡು ಪಂದ್ಯಗಳಲ್ಲಿ ಸೋತರೂ ನಂತರ ಪುಟಿದೆದ್ದ ಆಸ್ಟ್ರೇಲಿಯಾ ತಂಡ, ಸಂಘಟಿತ ಹೋರಾಟದಿಂದಲೇ 2015ರ ನಂತರ ಹಾಗೂ ಒಟ್ಟಾರೆ ದಾಖಲೆಯ 6ನೇ ಬಾರಿ ವಿಶ್ವ ಚಾಂಪಿಯನ್ ಆಗಿ ಹೊರಹೊಮ್ಮಿತು. ಸಿರಾಜ್ ಬೌಲಿಂಗ್‌ನಲ್ಲಿ ಮ್ಯಾಕ್ಸ್‌ವೆಲ್ 2 ರನ್ ಕಲೆಹಾಕುತ್ತಿದ್ದಂತೆಯೇ ಡಗ್‌ಔಟ್‌ನಲ್ಲಿದ್ದ ಆಸೀಸ್ ಸದಸ್ಯರು ಸಂಭ್ರಮದಲ್ಲಿ ಮೈದಾನದತ್ತ ದೌಡಾಯಿಸಿದರೆ, ಕೆಎಲ್ ರಾಹುಲ್, ಸಿರಾಜ್ ಸೇರಿದಂತೆ ಟೀಮ್ ಇಂಡಿಯಾ ಸದಸ್ಯರು ಕಣ್ಣಲ್ಲಿ ನೀರು ತುಂಬಿಕೊಂಡು ಡಗ್ ಔಟ್‌ನತ್ತ ಭಾರದ ಹೆಜ್ಜೆ ಇಟ್ಟರು. 8ನೇ ಬಾರಿ ಫೈನಲ್ ತಲುಪಿದ್ದ ಆಸ್ಟ್ರೇಲಿಯಾ, 6ನೇ ಬಾರಿ ಪ್ರಶಸ್ತಿ ಗೆದ್ದು ಹೊಸ ಮೈಲುಗಲ್ಲು ಸ್ಥಾಪಿಸಿದರೆ, 2013 ರಿಂದಲೂ ಐಸಿಸಿ ಟ್ರೋಫಿ ಜಯಿಸಲು ಸಾಧ್ಯವಾಗದ ಟೀಮ್ ಇಂಡಿಯಾ, ಮತ್ತೊಮ್ಮೆ ನಾಕೌಟ್‌ನಲ್ಲಿ ಮುಗ್ಗರಿಸುವ ಚಾಳಿ ಮುಂದುವರಿಸಿತು. ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಮಿಚೆಲ್ ಸ್ಟಾರ್ಕ್ ಅವರ ಮಾರಕ ಬೌಲಿಂಗ್ ದಾಳಿ ಹಾಗೂ ಟ್ರಾವಿಸ್ ಹೆಡ್ ಅವರ ಶತಕದ ನೆರವಿನಿಂದ ಆಸ್ಟ್ರೇಲಿಯಾ ಭಾರತದ ವಿರುದ್ಧ 6 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿ ವಿಶ್ವಕಪ್ ಅನ್ನು ತನ್ನದಾಗಿಸಿಕೊಂಡಿತು. ಮತ್ತೊಂದೆಡೆ ಭಾರತ ರನ್ನರ್ ಅಪ್ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು. ಭಾರತ ನೀಡಿದ 241 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಆಸ್ಟ್ರೇಲಿಯಾ ಪರ ಡೇವಿಡ್ ವಾರ್ನರ್, ಟ್ರಾವಿಸ್ ಹೆಡ್ ಇನ್ನಿಂಗ್ಸ್ ಆರಂಭಿಸಿದರು. ಈ ವೇಳೆ ಬುಮ್ರಾ ಎಸೆದ ಮೊದಲ ಎಸೆತದಲ್ಲೇ ಡೇವಿಡ್ ವಾರ್ನರ್ ಔಟಾಗಬೇಕಿತ್ತು. ಬ್ಯಾಟ್ ತುದಿಗೆ ತಗುಲಿದ್ದ ಚೆಂಡು ಸ್ಲಿಪ್‌ನಲ್ಲಿದ್ದ ಕೊಹ್ಲಿ ಮತ್ತು ಶುಭಮನ್ ಮಧ್ಯೆ ತೂರಿ ಬೌಂಡರಿಗೆ ಹೋಗಿತ್ತು. ಜೀವದಾನ ಸಿಕ್ಕಿದರೂ ವಾರ್ನರ್ ಅವರನ್ನು ಶಮಿ ಔಟ್ ಮಾಡಿದರು. 7 ರನ್‌ಗಳಿಸಿದ ವಾರ್ನರ್ ಕೊಹ್ಲಿಗೆ ಸ್ಲಿಪ್‌ನಲ್ಲಿ ಕ್ಯಾಚ್ ನೀಡಿ ತೆರಳಿದರು. ಮಿಶೆಲ್ ಮಾರ್ಶ್ 15 ರನ್ ಗಳಿಸಿದರೆ, ಸ್ಟೀವ್ ಸ್ಮಿತ್ 4 ರನ್ ಗಳಿಸಿ ಬುಮ್ರಾಗೆ ಎಲ್‌ಬಿಡಬ್ಲ್ಯು ಆದರು. ●8ನೇ ಪುಟಕ್ಕೆ



ವಿಶ್ವಕಪ್ 2023 ಸಾರಾಂಶ

ಅತಿ ಹೆಚ್ಚು ರನ್: ವಿರಾಟ್ ಕೊಹ್ಲಿ (765)
ಗರಿಷ್ಠ ವೈಯಕ್ತಿಕ ಸ್ಕೋರ್: ಗ್ಲೆನ್ ಮ್ಯಾಕ್ಸ್‌ವೆಲ್ (201*)
ಹೆಚ್ಚಿನ ಶತಕಗಳು: ಕ್ವಿಂಟನ್ ಡಿ ಕಾಕ್ (4)
ಅತಿ ಹೆಚ್ಚು ಸಿಕ್ಸರ್‌ಗಳು: ರೋಹಿತ್ ಶರ್ಮಾ (31)
ಅತಿ ಹೆಚ್ಚು ಬೌಂಡರಿಗಳು: ವಿರಾಟ್ ಕೊಹ್ಲಿ (68)
ಹೆಚ್ಚು ವಿಕೆಟ್‌ಗಳು: ಮೊಹಮ್ಮದ್ ಶಮಿ (24)
ಬೆಸ್ಟ್ ಬೌಲಿಂಗ್: ಮೊಹಮ್ಮದ್ ಶಮಿ (7/57)
ಹೆಚ್ಚು ವಿಕೆಟ್ ಪಡೆದ ಕೀಪರ್: ಕ್ವಿಂಟನ್ ಡಿ ಕಾಕ್ (20)
ಹೆಚ್ಚಿನ ಔಟ್‌ಫೀಲ್ಡ್ ಕ್ಯಾಚ್‌ಗಳು: ಡ್ಯಾರಿಲ್ ಮಿಚೆಲ್ (11)

ಅಮೋಘ ವಿಜಯಕ್ಕಾಗಿ ಅಭಿನಂದನೆಗಳು

ಅಹ್ಮದಾಬಾದ್: ಭಾರತದ ಎದುರು ಅಧಿಕಾರಯುತವಾಗಿ ವಿಶ್ವಕಪ್ ಗೆದ್ದ ಆಸ್ಟ್ರೇಲಿಯ ತಂಡಕ್ಕೆ ಪ್ರಧಾನಿ ನರೇಂದ್ರ ಮೋದಿ ಅಬಿನುದನೆ ಸಲ್ಲಿಸಿದ್ದಾರೆ.

ಅಮೋಘ ವಿಶ್ವಕಪ್ ವಿಜಯಕ್ಕಾಗಿ ಆಸ್ಟ್ರೇಲಿಯಕ್ಕೆ ಅಭಿನಂದನೆಗಳು! ಪಂದ್ಯಾವಳಿಯಲ್ಲಿ ಅವರದು ಶ್ಲಾಘನೀಯ ಪ್ರದರ್ಶನ ಅದ್ಭುತವಾದ ವಿಜಯೋತ್ಸವದಲ್ಲಿ ಕೊನೆಗೊಂಡಿತು. ಟ್ರಾವಿಸ್ ಹೆಡ್ ಅವರ ಇಂದಿನ ಗಮನಾರ್ಹ ಆಟಕ್ಕೆ ಅಭಿನಂದನೆಗಳು ಎಂದು ಮೋದಿ ಎಕ್ಸ್ ಪೋಸ್ಟ್ ಮಾಡಿದ್ದಾರೆ.

ಇದೇ ವೇಳೆ ಫೈನಲ್‌ನಲ್ಲಿ ಎಡವಿದ ಭಾರತ ತಂಡಕ್ಕೂ ಧೈರ್ಯ ತುಂಬಿ ಆತ್ಮೀಯ ಟೀಮ್ ಇಂಡಿಯಾ, ವಿಶ್ವಕಪ್ ಮೂಲಕ ನಿಮ್ಮ ಪ್ರತಿಭೆ ಮತ್ತು ಸಂಕಲ್ಪ ಗಮನ ಸೆಳೆಯಿತು. ನೀವು ಉತ್ತಮ ಉತ್ಸಾಹದಿಂದ ಆಡಿದ್ದೀರಿ ಮತ್ತು ರಾಷ್ಟ್ರಕ್ಕೆ ಅಪಾರ ಹೆಮ್ಮೆ ತಂದಿದ್ದೀರಿ. ನಾವು ಇಂದು ಮತ್ತು ಯಾವಾಗಲೂ ನಿಮ್ಮೊಂದಿಗೆ ಇರುತ್ತೇವೆ ಎಂದು ಇನ್ನೊಂದು ಪೋಸ್ಟ್ ಮಾಡಿದ್ದಾರೆ

ಕಣ್ಣೀರಿಟ್ಟ ಇಂಡಿಯಾ ಆಟಗಾರರು

ಅಹಮದಾಬಾದ್: ಐಸಿಸಿ ವಿಶ್ವಕಪ್ ಟೂರ್ನಿಯಲ್ಲಿ ಅದ್ವಿತೀಯ ಪ್ರದರ್ಶನ ನೀಡಿದ್ದ ಭಾರತ, ಫೈನಲ್ ಪಂದ್ಯದಲ್ಲಿ ಆಸ್ಟ್ರೇಲಿಯಾ ವಿರುದ್ಧ ಮುಗ್ಗರಿಸಿ ಟ್ರೋಫಿ ಕೈಚೆಲ್ಲಿತು. ಇಡೀ ಟೂರ್ನಿಯಲ್ಲಿ ಚಾಂಪಿಯನ್ ಆಟ ಆಡಿದ್ದ ಭಾರತ ಫೈನಲ್ ಪಂದ್ಯದಲ್ಲಿ ಸೋಲಿನ ಶಾಕ್ ಟೀಂ ●8ನೇ ಪುಟಕ್ಕೆ

ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರರಿಗೆ ಮೈಸೂರಿನಲ್ಲಿ ಅದ್ದೂರಿ ಸ್ವಾಗತ



ಮೈಸೂರು, ನ.19(ಜಿಎ)–ಬಿಜೆಪಿ ರಾಜ್ಯಾಧ್ಯಕ್ಷರಾದ ಬಳಿಕ ಇದೇ ಮೊದಲ ಬಾರಿಗೆ ಮೈಸೂರಿಗೆ ಆಗಮಿಸಿದ ಬಿ.ವೈ.ವಿಜಯೇಂದ್ರ ಅವರಿಗೆ ಮೈಸೂರಿನ ಮಣಿಪಾಲ್ ಜಂಕ್ಷನ್ ಬಳಿ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಅದ್ದೂರಿ ಸ್ವಾಗತ ನೀಡಿದರು.

ಕರ್ನಾಟಕ ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಅವರು ವಿಜಯೇಂದ್ರ ಅವರಿಗೆ ಬೆಳ್ಳಿ ಗದೆ ನೀಡುವ ಮೂಲಕ ವಿಶೇಷವಾಗಿ ಸ್ವಾಗತಿಸಿದರು. ಈ ವೇಳೆ ಕಾರ್ಯಕರ್ತರು ಪುಷ್ಪವೃಷ್ಠಿ ಸುರಿಸಿ, ಕ್ರೇನ್ ಮೂಲಕ ಬೃಹತ್ ಸೇಬಿನ ಹಾರ ಹಾಕಿದರು. ಇದೇ ವೇಳೆ ಬಿಜೆಪಿ ನಗರಾಧ್ಯಕ್ಷರೂ ಆದ ಕೇ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ, ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ, ಕೊಳ್ಳೇಗಾಲ ಮಾಜಿ ಶಾಸಕ ಎನ್.ಮಹೇಶ್ ಇನ್ನಿತರರು ಪುಷ್ಪ ಗುಚ್ಛ ನೀಡಿ ಬರಮಾಡಿ ಕೊಂಡರು. ಕಾರ್ಯ ಕರ್ತರು ವಿಜಯೇಂದ್ರ ಮತ್ತು ಯಡಿಯೂರಪ್ಪ ಹಾಗೂ ಪಕ್ಷದ ಪರ ಘೋಷಣೆಗಳನ್ನು ಕೂಗಿದರು.

ಈ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ ಬಿ.ವೈ.ವಿಜಯೇಂದ್ರ, ಭಾರತ ಮತ್ತು ಆಸ್ಟ್ರೇಲಿಯಾ ನಡುವೇ ನಡೆಯುತ್ತಿರುವ ವಿಶ್ವಕಪ್ ಫೈನಲ್ ●8ನೇ ಪುಟಕ್ಕೆ

ಕಾವೇರಿ ಹಿನ್ನೀರಲ್ಲಿ ಮುಳುಗಿ ಮೂವರ ಸಾವು



ಶ್ರೀರಂಗಪಟ್ಟಣ, ನ.19– ಕೆಆರ್‌ಎಸ್ ಹಿನ್ನೀರಿನಲ್ಲಿ ಮುಳುಗಿ ಮೂವರು ಸಾವನ್ನಪ್ಪಿರುವ ಘಟನೆ ಇಲ್ಲಿನ ವೇಣುಗೋಪಾಲಸ್ವಾಮಿ ದೇವಾಲಯದ ಬಳಿ ಭಾನುವಾರ ನಡೆದಿದೆ.


ಮೈಸೂರಿನ ಕಾರುಣ್ಯ ಮನೆ ಟ್ರಸ್ಟ್ ಸಿಬ್ಬಂದಿ ಹರೀಶ್ (32), ಟ್ರಸ್ಟ್‌ನಲ್ಲಿ ಆಶ್ರಯ ಪಡೆದಿದ್ದ ಜ್ಯೋತಿ(18) ಹಾಗೂ ನಂಜುಂಡ (19) ಸಾವನ್ನಪ್ಪಿದವರು. ಮೈಸೂರಿನ ಬೋಗಾದಿ ಬಳಿಯ ರೂಪಾ ನಗರದಲ್ಲಿರುವ ಬಡಮಕ್ಕಳ ಆರೈಕೆ ಮಾಡುವ ಕಾರುಣ್ಯ ಟ್ರಸ್ಟ್‌ನಿಂದ ಒಟ್ಟು 25 ಮಂದಿ ಪ್ರವಾಸಕ್ಕಾಗಿ ಕೆಆರ್‌ಎಸ್ ಹಿನ್ನೀರಿನ ವೇಣುಗೋಪಾಲಸ್ವಾಮಿ ದೇವಾಲಯಕ್ಕೆ ಬಂದಿದ್ದರು. ಈ ವೇಳೆ ಕಾವೇರಿ ಹಿನ್ನೀರಿನಲ್ಲಿ ಆಟವಾಡುವ ವೇಳೆ ದಿವ್ಯಾ ಎಂಬಾಕೆ ನೀರಿನಲ್ಲಿ ಮುಳುಗುತ್ತಿದ್ದಳು. ಇದನ್ನು ಗಮನಿಸಿದ ಹರೀಶ್ ಹಾಗೂ ನಂಜುಂಡ ನೀರಿಗಿಳಿದು ಆಕೆಯನ್ನು ರಕ್ಷಿಸಿದ್ದಾರೆ.

ಈ ವೇಳೆ ಇವರಿಬ್ಬರೂ ನೀರಿನಿಂದ ಮೇಲೆ ಬರಲು ಸಾಧ್ಯವಾಗದೇ ಸಾವನ್ನಪ್ಪಿದ್ದಾರೆ. ಇವರನ್ನು ರಕ್ಷಿಸಲು ಹೋದ ಜ್ಯೋತಿ ಎಂಬಾಕೆಯೂ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾಳೆ. ಸ್ಥಳಕ್ಕಾಗಮಿಸಿದ ಕೆಆರ್‌ಎಸ್ ಪೊಲೀಸರು ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ನುರಿತ ಈಜುಗಾರರ ಸಹಾಯದಿಂದ ಶವಗಳನ್ನು ಮೇಲೆತ್ತಿ ಕೆ.ಆರ್.ಆಸ್ಪತ್ರೆಗೆ ರವಾನಿಸಿದ್ದಾರೆ. ನೀರಿನಲ್ಲಿ ಮುಳುಗುತ್ತಿದ್ದ ದಿವ್ಯಾಗೆ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ. ಕೆಆರ್‌ಎಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರತಿಯೊಬ್ಬರಲ್ಲೂ 'ತಾಯಿಗಿಂತ ದೇವರಿಲ್ಲ' ಎಂಬ ಪ್ರೀತಿ ಬರಬೇಕು

ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಶ್ರೀ ಸಲಹೆ

ಮೈಸೂರಲ್ಲಿ ನಡೆದ ನಾರೀ ಶಕ್ತಿ ಸಂಗಮದಲ್ಲಿ ಸಾವಿರಾರು ಮಹಿಳೆಯರು ಭಾಗಿ





ಮೈಸೂರು,ನ.19(ಬಿಎಲ್‌ಯು)– ಪ್ರತಿಯೊಬ್ಬ ವ್ಯಕ್ತಿಯಲ್ಲೂ ತಾಯಿಗಿಂತ ದೇವರಿಲ್ಲ ಎಂಬ ಪ್ರೀತಿ ಬರಬೇಕು ಎಂದು ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಸಲಹೆ ನೀಡಿದರು.

ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಇಂದು ರಾಷ್ಟ್ರ ಭಾರತಿ ಚಾರಿಟಬಲ್ ಟ್ರಸ್ಟ್‌ನ ಮೈಸೂರು ವಿಭಾಗದ ಮಹಿಳಾ ಸಮನ್ವಯ ಆಯೋಜಿಸಿದ್ದ ನಾರೀ ಶಕ್ತಿ ಸಂಗಮ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಎಲ್ಲ ರಿಗೂ ತಾಯಿಯೇ ದೇವರು ಹಾಗೂ ಮೊದಲ ಗುರು. ಇದು ನಮ್ಮ ಸಂಸ್ಕೃತಿ ಕೂಡ. ನೀನು ತಾಯಿಯನ್ನು ದೇವರಂತೆ ನೋಡು ಎಂದು ವೇದ, ಪುರಾಣ ಕೂಡ ಹೇಳುತ್ತದೆ ಎಂದು ಸ್ವಾಮೀಜಿ ತಿಳಿಸಿದರು.

ತಾಯಿಯನ್ನು ದೇವರಂತೆ ಕಾಣುವ ಪ್ರೀತಿಯನ್ನು ಆಚರಣೆಯಲ್ಲಿ ಮಾಡಿ ತೋರಿಸಬೇಕು. ಈ ಮೂಲಕ ತಾಯಿಯ ಮಹತ್ವವನ್ನು ಸಾರಿ ಹೇಳಬೇಕು. ಹೆಣ್ಣು ತನ್ನಲ್ಲಿರುವ ಶಕ್ತಿಯನ್ನು ತಾನೇ ಗುರುತಿಸಿಕೊಂಡು ಸಾಧನೆಯ ಹಾದಿಯಲ್ಲಿ ಸಾಗಬೇಕು. ಸಾಧಿಸಿ ತೋರಿಸಬೇಕು ಎಂದು ಸ್ವಾಮೀಜಿ ಸಲಹೆ ನೀಡಿದರು.

ಮನೆ, ಸಂಸಾರದ ಜೊತೆಗೆ ಬಹಳಷ್ಟು ಮಹಿಳೆಯರು ಸಮಾಜಮುಖಿ ಕಾರ್ಯದಲ್ಲಿ ತೊಡಗಿರುವುದು ಪ್ರಶಂಸನೀಯ ಎಂದು ಸ್ವಾಮೀಜಿ ಹೇಳಿದರು.

ಈ ವೇಳೆ ಮಾತನಾಡಿದ ಕರ್ನಾಟಕ ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿ ರತ್ನಪ್ರಭ, ಮಹಿಳೆಯರು ಮನೆಯ ಜವಾಬ್ದಾರಿಯ ಚಿಂತೆನೆಗೆ ತಮ್ಮನ್ನು ಸೀಮಿತಗೊಳಿಸಿಕೊಂಡಿರುತ್ತಾರೆ. ಆದರೆ ಇಂತಹ ಚರ್ಚಾ ಕಾರ್ಯಕ್ರಮಗಳಲ್ಲಿ ಭಾಗಿಯಾದರೆ ಬಹಳಷ್ಟು ವಿಚಾರನ್ನು ತಿಳಿಯಬಹುದು ಎಂದು ಅಭಿಪ್ರಾಯಪಟ್ಟರು.

ಹೆಣ್ಣು ಮತ್ತೊಬ್ಬರ ಅವಲಂಬನೆಯಲ್ಲಿ ಬದುಕಬಾರದು. ಸ್ವಾವಲಂಬಿ ಬದುಕು ಕಾಣಲು ಪ್ರಯತ್ನ ಮಾಡಬೇಕು. ಇದಕ್ಕಾಗಿ ಮಹಿಳೆಯರು ಮೊದಲು ಶಿಕ್ಷಿತರಾಗಬೇಕು ಎಂದು ತಿಳಿಸಿದರು.

ಸಮಾಜದಲ್ಲಿ ಹೆಣ್ಣು, ಗಂಡು ಎಂಬ ಬೇಧಭಾವ ಇರಬಾರದು. ಮೊದಲು ಮಹಿಳೆಯರು ಈ ಭಾವದಿಂದ ಹೊರಬರಬೇಕು. ತನಗೆ ಗಂಡು ಮಗುವೆ ಜನಿಸಬೇಕು ಎಂಬ ಭಾವನೆಯಿಂದ ಹೊರಬರಬೇಕು ಎಂದು ರತ್ನಪ್ರಭ ಸಲಹೆ ನೀಡಿದರು.

ಪ್ರತಿಯೊಬ್ಬ ಮಹಿಳೆಯಲ್ಲಿ ಬುದ್ಧಿವಂತಿಕೆ ಇದೆ. ಈ ಮೂಲಕ ಮಹಿಳೆ ಸಾಧನೆ ಮಾಡಲು ಸಮಾಜ ಪ್ರೋತ್ಸಾಹ ನೀಡಬೇಕು. ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ ನೀಡಬೇಕು ಎಂದರು.

ಮಹಿಳೆಯರಿಗೆ ಎಲ್ಲಾ ಕ್ಷೇತ್ರಗಳಲ್ಲಿ ಸವಾಲು ಇರುತ್ತದೆ. ಇದನ್ನು ಸಮರ್ಥವಾಗಿ ಎದುರಿಸಿ ಸಾಧನೆಯ ಹಾದಿಯಲ್ಲಿ ಸಾಗಬೇಕು. ಈ ಮೂಲಕ ತಾನು ಎಷ್ಟರ ಮಟ್ಟಿಗೆ ಶಕ್ತಿವಂತೆ ಎಂದು ಸಾಬೀತು ಮಾಡಬೇಕು. ಒಂದು ಹೆಣ್ಣಿಗೆ ಮತ್ತೊಬ್ಬ ಹೆಣ್ಣು ಸಹಾಯ ಮಾಡಬೇಕು. ಮಹಿಳೆಯರಲ್ಲಿ ಪರಸ್ಪರ ದ್ವೇಷ, ಅಸೂಯೆ ಇರಬಾರದು ಎಂದು ರತ್ನಪ್ರಭ ಸಲಹೆ ನೀಡಿದರು.

ದೇಶಾದ್ಯಂತ ನಡೆಯುತ್ತಿರುವ ನಾರೀ ಶಕ್ತಿ ಸಂಗಮ ಕಾರ್ಯಕ್ರಮದಲ್ಲಿ ಕೋಟ್ಯಾಂತರ ಮಹಿಳೆಯರು ಭಾಗವಹಿಸಿದ್ದಾರೆ. ಇಲ್ಲಿ ನಡೆಯುವ ಚಿಂತನ ಮಂಥನದ ಮೂಲಕ ಮಹಿಳೆಯರು ಬಹಳಷ್ಟು ಚಿಂತನೆಗಳನ್ನು ಮೈಗೂಡಿಸಿಕೊಳ್ಳಬಹುದು ಎಂದು ವಕೀಲರಾದ ಮೀರ ಫಡ್ಕೆ ಹೇಳಿದರು.

ಸಾವಿರಾರು ಮಹಿಳೆಯರು ಭಾಗವಹಿಸಿದ್ದ ಕಾರ್ಯಕ್ರಮದ ವೇದಿಕೆಯಲ್ಲಿ ಪತ್ರಕರ್ತೆ ಹೆಚ್.ಜಿ.ಶೋಭಾ, ಉದ್ಯಮಿ ಮಮತಾ ಕಿಣಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕವಿಗೋಷ್ಠಿಯಲ್ಲಿ ಮಕ್ಕಳ ಪ್ರತಿಭೆ ಅನಾವರಣ



ಮೈಸೂರು,ನ.19(ಎಂಟಿವೈ)–ಮೈಸೂರಿನ ವಿಜಯನಗರದಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ಭಾನುವಾರ ಏರ್ಪಡಿಸಿದ್ದ ಲೇಖಕಿ ಸಿ.ವಾಣಿ ರಾಘವೇಂದ್ರ ವಿರಚಿತ 'ಕಿರುಬೆರಳು' ಮಕ್ಕಳ ಸಾಮಾಜಿಕ ನಾಟಕ ಹಾಗೂ 'ಮಿನುಗುವ ತಾರೆಗಳು' ಮಕ್ಕಳ ಕವನ ಸಂಕಲನ (ಸಂಪಾದಿತ) ಕೃತಿಗಳ ಬಿಡುಗಡೆ ಸಮಾರಂಭದಲ್ಲಿ ಮಕ್ಕಳ ಕವಿಗೋಷ್ಠಿ ಗಮನ ಸೆಳೆಯಿತು.

ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ ಹಾಗೂ ಕಸಾಪ ಜಿಲ್ಲಾ ಘಟಕದ ಸಹಯೋಗದಲ್ಲಿ ಕಾರ್ಯಕ್ರಮದಲ್ಲಿ ವಿವಿಧ ಶಾಲೆಯ ವಿದ್ಯಾರ್ಥಿಗಳು ವಿವಿಧ ಸಂದೇಶ ಸಾರುವ, ತಾವೆ ರಚಿಸಿದ ಕವನ ವಾಚಿಸಿ ಗಮನ ಸೆಳೆದರು.

ಟುವಿಶ್ ಎಂಬ ವಿದ್ಯಾರ್ಥಿ 'ಎಷ್ಟು ಚೆಂದ ನಮ್ಮ ನಾಡು' ಶೀರ್ಷಿಕೆಯಲ್ಲಿ ಕವನ ವಾಚಿಸಿದರೆ, ಶ್ರೇಯಸ್ ಬಿ.ಆರ್–'ನನ್ನ ಗುರುಗಳು ಸರಿ', ಮೌಲ್ಯ ಎಂ.ಎಸ್.– 'ಗುರಿ' ಶೀರ್ಷಿಕೆಯಲ್ಲಿ ಮನುಷ್ಯನ ಜೀವನದಲ್ಲಿ ಗುರಿ ಇರಬೇಕು ಸಂದೇ ಸಾರುವ ಕವನ, ಸಿಂಧು–ನನ್ನ ಗುರುಗಳು, ನನ್ನ ಇಷ್ಟ, ದಕ್ಷಿಣ ಕನ್ನಡದ ಪಂಚ ನಿವಾಸಿಗಳಾದ ಜಸ್ಮಿತಾ–ಪರಿಸರ ರಕ್ಷಣೆ, ಕೃತಿಕಾ–ಪರಿಸರ ಕವನ, ಪೂಜಶ್ರೀ–ಅಮ್ಮ ಹಾಗೂ ತನ್ಮಯೀ–ಓ ನನ್ನ ಅಮ್ಮ ಶೀರ್ಷಿಕೆಯ ಕವನ ವಾಚಿಸಿ ಪ್ರಶಂಸೆಗೆ ಪಾತ್ರರಾದರು.

ಪುಸ್ತಕ ಬಿಡುಗಡೆ: ಇದಕ್ಕೂ ಮುನ್ನ ವಾಣಿ ರಾಘವೇಂದ್ರ ವಿರಚಿತ 'ಕಿರುಬೆರಳು' ಮಕ್ಕಳ ಸಾಮಾಜಿಕ ನಾಟಕ ಹಾಗೂ 'ಮಿನುಗುವ ತಾರೆಗಳು' ಮಕ್ಕಳ ಕವನ ಸಂಕಲನ (ಸಂಪಾದಿತ) ಕೃತಿಗಳ ಬಿಡುಗಡೆ ಕೌಟಿಲ್ಯ ವಿದ್ಯಾಲಯದ ಅಧ್ಯಕ್ಷ ಟಿ.ಬಾಬು ಬಿಡುಗಡೆ ಮಾಡಿದರು. ಬಳಿಕ ಮಾತನಾಡಿದ ಅವರು, ಎಲ್ಲದರೂ ಸಾಹಿತ್ಯ ಬಗ್ಗೆ ಅಭಿರುಚಿ ಬೆಳೆಸಿಕೊಳ್ಳಬೇಕು. ಅಲ್ಲದೆ, ಬರವಣಿಗೆಯಲ್ಲಿ ಆಸಕ್ತಿ ಬೆಳೆಸಿಕೊಂಡು ಸಮಾಜಕ್ಕೆ ಉತ್ತಮ ಸಂದೇಶ ಸಾರುವ ಕೃತಿ ರಚಿಸಬೇಕು. ಸಾಹಿತ್ಯ ಹಾಗೂ ಬರವಣಿಗೆಯು ಮನುಷ್ಯನ ಅಭಿರುಚಿಯನ್ನು ತಿಳಿಸುತ್ತವೆ. ಆದರೆ, ಇತ್ತೀಚಿನ ದಿನಗಳಲ್ಲಿ ಯುವಕರಿಗೆ ಬರವಣಿಗೆ ಮೇಲಿನ ಹಿಡಿತ ಕಡಿಮೆಯಾಗುತ್ತಿದೆ. ಕನ್ನಡ ಭಾಷೆ ನಮ್ಮ ಭಾವನೆಯಾಗಬೇಕು. ನಮ್ಮ ಸಂಸ್ಕೃತಿ ಹಾಗೂ ಕನ್ನಡ ಬಗ್ಗೆ ಹೆಚ್ಚು ಒಲವು ತೋರುವ ಮೂಲಕ ನಮ್ಮ ನಾಡು–ನುಡಿಯನ್ನು ಉಳಿಸಿ, ಬೆಳೆಸಿ ಸಮಾಜವನ್ನು ಕಟ್ಟಲು ಕಂಕಣಬದ್ಧರಾಗಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ಕು. ಸಂಜನಾ ಬುದಿಭಟ್ ಬಾಲಶ್ರೀ ಪ್ರಶಸ್ತಿ, ವಿದುಷಿ ಪನ್ನಗಾ ಎಸ್.ವಿ. ಅವರಿಗೆ ಗಾನ ಸರಸ್ವತಿ ಪ್ರಶಸ್ತಿ ಡಾ.ಎಂ.ಎಸ್.ಶರತ್‌ಕುಮಾರ್ ಶಿಕ್ಷಣ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಕವಯಿತ್ರಿ ಬಿ.ಶೋಭಾ, ಎನ್.ಆರ್.ರೂಪಶ್ರೀ, ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹೇಮಗಂಗಾ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ ಅಧ್ಯಕ್ಷ ಎ.ಹೇಮಗಂಗಾ, ಸಾಂಸ್ಕೃತಿಕ ಸಮಿತಿ ಅಧ್ಯಕ್ಷೆ ಸಿ.ವಾಣಿ ರಾಘವೇಂದ್ರ, ಸಂಸ್ಥಾಪಕ ಅಧ್ಯಕ್ಷ ಎಂ.ಬಿ.ಸಂತೋಷ್, ಪ್ರಧಾನ ಕಾರ್ಯದರ್ಶಿ ಬಿ.ಶೋಭಾ, ನೀತು ಇನ್ನಿತರರು ಪಾಲ್ಗೊಂಡಿದ್ದರು.




ಮೈಸೂರು ಮಹಾನಗರಪಾಲಿಕೆಯ ಮಾಜಿ ಸದಸ್ಯ ಎಂ.ಸತೀಶ್ ಹಾಗೂ ಸ್ನೇಹಿತರು ಭಾನುವಾರ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರನ್ನು ಬೆಂಗಳೂರಿನ ಅವರ ನಿವಾಸದಲ್ಲಿ ಅಭಿನಂದಿಸಿದರು.

ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು,ನ.19–ಶ್ರೀ ವಿದ್ಯಾಗಣಪತಿ ಹಾಗೂ ಮಹಾಲಕ್ಷ್ಮಿ ದೇವಸ್ಥಾನ ಟ್ರಸ್ಟ್, ಕನ್ನಡ ಕಲಾಭಿಮಾನಿಗಳ ಸಂಘದ ವತಿಯಿಂದ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ನ.20ರ ಸೋಮವಾರ 6ನೇ ಮುಖ್ಯರಸ್ತೆ (ಗಣಪತಿ ದೇವಸ್ಥಾನದ ಹತ್ತಿರ), ವಿನಾಯಕನಗರ (ಪಡುವಾರಹಳ್ಳಿ)ದಲ್ಲಿ ಬೆಳಗ್ಗೆ 10ರಿಂದ ಮಧ್ಯಾಹ್ನ 2ರವರೆಗೆ ಏರ್ಪಡಿಸಲಾಗಿದೆ. ಶಾಸಕ ಕೆ.ಹರೀಶ್‌ಗೌಡ, ಪಾಲಿಕೆ ಮಾಜಿ ಸದಸ್ಯೆ ಶ್ರೀಮತಿ ಭಾಗ್ಯ ಮಹದೇಶ್, ಮುಖಂಡರಾದ ಟಿ.ಸೋಮು ಉದ್ಘಾಟನೆ ನೆರವೇರಿಸಲಿದ್ದಾರೆ.

ಅವೈಜ್ಞಾನಿಕ ಬ್ಯಾರಿಕೇಡ್ ತೆರವಿಗೆ ಹೋಟೆಲ್ ಉದ್ಯಮಿಗಳ ಮನವಿ



ಮೈಸೂರು,ನ.19(ಎಸ್‌ಬಿಡಿ)–ಮೈಸೂರು ಗ್ರಾಮಾಂತರ ಬಸ್ ನಿಲ್ದಾಣದ ಎದುರು ಬಿ.ಎನ್.ರಸ್ತೆಯಲ್ಲಿ ಅಳವಡಿಸಿರುವ ಬ್ಯಾರಿಕೇಡ್ ತೆರವುಗೊಳಿಸಲು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ನಗರ ಪೊಲೀಸ್ ಆಯುಕ್ತರಿಗೆ ಮನವಿ ಸಲ್ಲಿಸಿದ್ದಾರೆ.

ಬಸ್ ನಿಲ್ದಾಣದ ಎದುರಿನ ಟ್ಯಾಕ್ಸಿ ನಿಲ್ದಾಣದ ಬಳಿ ರಸ್ತೆಯಲ್ಲಿ ಬ್ಯಾರಿಕೇಡ್ ಅಳವಡಿಸಲಾಗಿದೆ. ಸುಮಾರು 15 ಅಡಿ ರಸ್ತೆ ಸೇರಿಸಿಕೊಂಡಂತೆ 250 ಅಡಿ ಉದ್ದ ಅವೈಜ್ಞಾನಿಕವಾಗಿ ಬ್ಯಾರಿಕೇಡ್ ಅಳವಡಿಸಿರುವುದರಿಂದ ಸಾರ್ವಜನಿಕರಿಗೆ ಯಾವುದೇ ರೀತಿಯಲ್ಲೂ ಅನುಕೂಲವಾಗಿಲ್ಲ.

ಬಸ್‌ನಲ್ಲಿ ಬರುವ ಕುಟುಂಬದವರು, ಸಂಬಂಧಿಕರು, ಸ್ನೇಹಿತರಿಗಾಗಿ ಕಾಯುವವರು ರಸ್ತೆ ಬದಿಯಲ್ಲಿ ವಾಹನ ನಿಲ್ಲಿಸುತ್ತಿದ್ದರು. ಆದರೆ ಬ್ಯಾರಿಕೇಡ್ ಅಳವಡಿಸಿರುವುದರಿಂದ ಅನಿವಾರ್ಯವಾಗಿ ರಸ್ತೆ ಮಧ್ಯದಲ್ಲೇ ವಾಹನಗಳನ್ನು ನಿಲ್ಲಿಸುವಂತಾಗಿದೆ. ಪರಿಣಾಮ ಸಂಚಾರಕ್ಕೆ ತೀವ್ರ ಅಡ್ಡಿಯಾಗುತ್ತಿದೆ. ದಯಮಾಡಿ ಈ ಬಗ್ಗೆ ಪರಿಶೀಲಿಸಿ, ಅನಗತ್ಯವಾಗಿ ಅಳವಡಿಸಿರುವ ಬ್ಯಾರಿಕೇಡ್‌ಗಳನ್ನು ತೆರವುಗೊಳಿಸುವಂತೆ ಸಿ.ನಾರಾಯಣಗೌಡ ಮನವಿ ಮಾಡಿದ್ದಾರೆ.

ಮೈಸೂರಲ್ಲಿ ಕಟ್ಟಡ ಕೂಲಿ ಕಾರ್ಮಿಕರ ಸಂಘಟನೆಯಿಂದ ರಾಜ್ಯೋತ್ಸವ



ಮೈಸೂರು, ನ.19– ಮೈಸೂರಿನ ಏಕಲವ್ಯನಗರದಲ್ಲಿ ಶ್ರೀ ವಿನಾಯಕ ಕಟ್ಟಡ ಕೂಲಿ ಕಾರ್ಮಿಕರ ಸಂಘಟನೆ ವತಿಯಿಂದ ಅದ್ದೂರಿಯಾಗಿ 68ನೇ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು.

ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಧ್ವಜಾ ರೋಹಣ ನೇರವೇರಿಸಿ, ಭುವನೇಶ್ವರಿ ಭಾವಚಿತ್ರಕ್ಕೆ ಎಲ್ಲರೊಂದಿಗೆ ಪುಷ್ಪಾರ್ಚನೆ ಸಲ್ಲಿಸಿದರು. ಬಳಿಕ ರಾಜ್ಯೋತ್ಸವ ಪ್ರಯುಕ್ತ ಆಯೋಜಿಸಲಾಗಿದ್ದ ಕ್ರಿಕೆಟ್ ಪಂದ್ಯಾವಳಿಯ ವಿಜೇತ ತಂಡಗಳಿಗೆ ಶಾಸಕ ಹರೀಶ್ ಗೌಡ ಹಾಗೂ ನಟ, ಬಿಜೆಪಿ ಮುಖಂಡ ಜಯಪ್ರಕಾಶ್(ಜೆಪಿ) ಬಹುಮಾನ ನೀಡಿ ಅಭಿನಂದಿಸಿದರು. ಇದೇ ವೇಳೆ ಹಲವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಮೈಸೂರು ನಗರಪಾಲಿಕೆ ನಿಕಟಪೂರ್ವ ಸದಸ್ಯ ಎಸ್‌ಬಿಎಂ ಮಂಜು, ಏಕಲವ್ಯನಗರ ಗ್ರಾಮ ಸದಸ್ಯರಾದ ರೇವಣ್ಣ, ರಾಮಸ್ವಾಮಿ, ಮಂಗಳ ವೆಂಕಟೇಶ್, ಸಂಘಟನೆ ಪದಾಧಿಕಾರಿಗಳಾದ ದಿನೇಶ್, ನವೀನ್, ಪ್ರವೀಣ್, ಸುರೇಶ್, ಶಿವು, ಪುರುಷೋತ್ತಮ, ವಿಜಯ್ ಹಾಗೂ ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

ವರುಣಾ ವಿಧಾನಸಭಾ ಕ್ಷೇತ್ರದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರ



ಮೈಸೂರು,ನ.19(ಎಸ್‌ಪಿಎನ್)–ವರುಣಾ ವಿಧಾನಸಭಾ ವ್ಯಾಪ್ತಿಯ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪ್ರತಿಭಾವಂತ 86 ವಿದ್ಯಾರ್ಥಿಗಳನ್ನು ಮಾಜಿ ಶಾಸಕರೂ ಆದ ವರುಣ ವಿಧಾನಸಭಾ ಕ್ಷೇತ್ರದ ಆಶ್ರಯ ಸಮಿತಿಯ ಜಿಲ್ಲಾ ಅಧ್ಯಕ್ಷರು, ಕೆಡಿಪಿ ಜಿಲ್ಲಾ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಅಭಿನಂದಿಸಿದರು.

ಮೈಸೂರು ವಿವಿ ಲಲಿತಾ ಕಲಾಮಂದಿರದಲ್ಲಿ ಮೈಸೂರು ಸಾಂಸ್ಕೃತಿಕ, ಶೈಕ್ಷಣಿಕ ವಿಕಾಸ ವೇದಿಕೆ ಹಾಗೂ ಡಾ.ಯತೀಂದ್ರ ಸಿದ್ದರಾಮಯ್ಯ ಅಭಿಮಾನಿ ಬಳಗದ ಸಹಯೋಗದೊಂದಿಗೆ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳನ್ನು ಸಂಘ–ಸಂಸ್ಥೆಗಳು ಗುರುತಿಸಿ ಪ್ರೋತ್ಸಾಹಿಸಬೇಕು. ಇದರಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮುಂದಿನ ವ್ಯಾಸಂಗದಲ್ಲಿ ಏನಾದರು ಸಾಧಿಸಲು ಉತ್ಸಾಹ ಮೂಡುತ್ತದೆ. ಕೇವಲ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದರೆ ಸಾಲದು ಮುಂದಿನ ಉನ್ನತ ಶಿಕ್ಷಣದಲ್ಲೂ ಹೆಚ್ಚಿನ ಅಂಕಗಳಿಸಿ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಈಗಿನಿಂದಲೇ ತಯಾರಿ ನಡೆಸಬೇಕು ಎಂದು ಸಲಹೆ ನೀಡಿದರಲ್ಲದೆ, ವರುಣಾ ವ್ಯಾಪ್ತಿಯ ಪ್ರತಿಭಾ ವಂತ ವಿದ್ಯಾರ್ಥಿಗಳು ಸರ್ಕಾರದ ಸವಲತ್ತುಗಳನ್ನು ಬಳಸಿಕೊಂಡು ಉನ್ನತ ಶಿಕ್ಷಣ ಪದವಿ ಪಡೆಯುವಂತೆ ಸಲಹೆ ನೀಡಿದರು.

ಕರಾಮುವಿ ಕುಲಪತಿ ಡಾ.ಶರಣಪ್ಪ ಹಲಸೆ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸುವುದು ತೀರಾ ಕಡಿಮೆ. ಇಂತಹ ಪರಿಸ್ಥಿತಿಯಲ್ಲಿ ಮೈಸೂರು ಸಾಂಸ್ಕೃತಿಕ, ಶೈಕ್ಷಣಿಕ ವಿಕಾಸ ಸಂಸ್ಥೆಯ ಪದಾಧಿಕಾರಿಗಳು ಗುರುತಿಸಿ, ಅಭಿನಂದನೆ ಸಲ್ಲಿಸುತ್ತಿರುವುದು ಉತ್ತಮ ಸಂಗತಿ. ಅಲ್ಲದೆ, ಈ ಕಾರ್ಯಕ್ರಮದಲ್ಲಿ ವರುಣಾ ಮಹೇಶ್ ಅವರ ಕಾರ್ಯ ಶ್ಲಾಘನೀಯ ಎಂದರು.

ದ್ವಿತೀಯ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಾದ ವೈ.ತೇಜಸ್ವಿನಿ, ಜೆ.ಪೂರ್ವಿ, ಹೆಚ್.ಎಂ.ಪಲ್ಲವಿ, ಎಸ್.ಯಶವಂತ್, ಬಿ.ಎಂ. ಐಶ್ವರ್ಯ, ಎ.ಎಂ.ನಾಗಲಾಭಿಂಕಾ, ಆರ್.ಶರಣ್, ವೈ.ಎಸ್. ಸ್ನೇಹ, ಕೆ.ಪಿ.ಮಹೇಶ್‌ಕುಮಾರ್, ಪಿ.ಪ್ರಸನ್ನ, ಎಸ್.ಸೌಂದರ್ಯ, ವರ್ಷಿಣಿ, ಶೋಭಾರಾಣಿ, ಬಿ.ಜಿ. ರಾಜೇಶ್ವರಿ ಅವರಿಗೆ ನಗದು ಬಹುಮಾನ ಹಾಗೂ ಪ್ರಮಾಣ ಪತ್ರ ವಿತರಿಸಲಾಯಿತು. ಎಸ್‌ಎಸ್‌ಎಲ್‌ಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ 70ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ನಗದು ಬಹುಮಾನ ಮತ್ತು ಪ್ರಮಾಣ ಪತ್ರ ವಿತರಿಸಲಾಯಿತು. ಈ ವೇಳೆ ಕುಂದೂರು ಮಠದ ಶ್ರೀ ಶರತ್‌ಚಂದ್ರ ಸ್ವಾಮೀಜಿ, ಶಾಸಕ ಗಣೇಶ್ ಪ್ರಸಾದ್, ಡಿಸಿಸಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಶಿಕ್ಷಣ ತಜ್ಞ ಗಿರೀಶ್ ಬಾಗ ಉಪಸ್ಥಿತರಿದ್ದರು.

ಚಿತ್ರಕಲಾ ಸ್ಪರ್ಧೆ ವಿಜೇತರಿಗೆ ಬಹುಮಾನ



ಮೈಸೂರು,ನ.19–ಮೈಸೂರಿನ ಹೆಚ್.ವಿ. ರಾಜೀವ್ ಸ್ನೇಹ ಬಳಗದ ವತಿಯಿಂದ ಮಕ್ಕಳ ದಿನಾಚರಣೆ ಅಂಗವಾಗಿ 10ರಿಂದ 14 ವರ್ಷದ ಮಕ್ಕಳಿಗೆ ಪರಿಸರದ ಬಗ್ಗೆ ಚಿತ್ರಕಲಾ ಸ್ಪರ್ಧೆಯನ್ನು ಕುವೆಂಪುನಗರದ ಸುಮಸೋಪಾನ ಉದ್ಯಾನವನದಲ್ಲಿ ಆಯೋಜಿಸಲಾಗಿತ್ತು. ಸ್ಪರ್ಧೆಯಲ್ಲಿ 58 ಮಕ್ಕಳು ಭಾಗವಹಿಸಿದ್ದರು. ಸ್ಪರ್ಧೆಯಲ್ಲಿ ರುಶಾಲಿ ರೂ. 5000, ಧೃತಿ ವಿ. ರೂ. 3000, ತ್ರಿಶ್ವಿ ಸೋನಿ ರೂ. 2000 ನಗದು ಬಹುಮಾನ ಪಡೆದುಕೊಂಡರು. ಭಾಗವಹಿಸಿದ್ದ ಎಲ್ಲಾ ಮಕ್ಕಳಿಗೂ ಸಮಾಧಾನಕರ ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮಾಜಿ ಮೇಯರ್ ಬಿ.ಎಲ್.ಭೈರಪ್ಪ, ಹಿರಿಯ ನಾಗರಿಕರಾದ ವೆಂಕಟ ರಮಣ್, ಸುದರ್ಶನ್ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಿಸಿದರು. ಬಳಗದ ಸದಸ್ಯರಾದ ಅಶೋಕ್, ಆಟೋ ಕುಮಾರ್, ನಾಗೇಶ್, ಪುರುಷೋತ್ತಮ್ ಮತ್ತಿತರರು ಉಪಸ್ಥಿತರಿದ್ದರು.


ನ.24, ವುಡ್ ಇನ್ ಲೇ ಕರಕುಶಲ ಕೌಶಲ್ಯ ತರಬೇತಿ

ಮೈಸೂರು, ನ.19– ಕರ್ನಾಟಕ ರಾಜ್ಯ ಕರಕುಶಲ ವಸ್ತುಗಳ ಉತ್ಪಾದಕರ ಸಂಘ ಮೈಸೂರು, ಜಿಲ್ಲಾ ಕೌಶಲ್ಯಾಭಿವೃದ್ಧಿ ನಿಗಮ ಮೈಸೂರು ವತಿಯಿಂದ ವುಡ್ ಇನ್ ಲೇ ಕರಕುಶಲ ಕೌಶಲ್ಯ ತರಬೇತಿ ಉದ್ಘಾಟನಾ ಕಾರ್ಯಕ್ರಮವನ್ನು ನ.24 ರಂದು ಬೆಳಗ್ಗೆ 9:30ಕ್ಕೆ ಕರಕುಶಲನಗರ, ಮೇಟಗಳ್ಳಿ ಬಹುಕಲಾ ಸಂಕೀರ್ಣ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದ ಉದ್ಘಾಟನೆ ಮತ್ತು ಆಶೀರ್ವಚನವನ್ನು ಸುತ್ತೂರು ಮಠದ ಶ್ರೀಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ನೀಡಲಿದ್ದಾರೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ ವಹಿಸುವರು. ಮುಖ್ಯ ಅತಿಥಿಗಳಾಗಿ ಶಾಸಕ ತನ್ವೀರ್‌ಸೇಠ್, ಕರಕುಶಲ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಡಾ.ಜಿ.ವಿಶ್ವನಾಥ್, ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ವಿದ್ಯಾ ಹಾಗೂ ವಿಶೇಷ ಆಹ್ವಾನಿತರಾಗಿ ನಗರಪಾಲಿಕೆ ಸದಸ್ಯರಾದ ಆರ್.ನಾಗರಾಜು, ರಮಣಿ, ರಮೇಶ್, ಬಾಲರಾಜು ಭಾಗವಹಿಸುವರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

20.11.2023 ಭಾನುವಾರ, ಮಳೆ ನಕ್ಷತ್ರ: ಅನುರಾಧ, 20.11.2023ರಿಂದ 02.12.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತೀಕ ಮಾಸ, ಶುಕ್ಲ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಧನಿಷ್ಠ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್ :** ಕಾರ್ತಿಕ ಮಾಸದ ವಿಶೇಷ ಪೂಜಾ ಮಹೋತ್ಸವ, ಅಗ್ನಿ ಕೊಂಡೋತ್ಸವ ಮತ್ತು ಗಿರಿಜಾ ಕಲ್ಯಾಣ, ಬೆಳಗ್ಗೆ 7 ಗಂಟೆಗೆ ಮೊದಲ ಕಾರ್ತಿಕ ಸೋಮವಾರದ ಪ್ರಯುಕ್ತ ಶ್ರೀ ಸ್ವಾಮಿಗೆ ತೈಲಾಭಿಷೇಕ, ಪಂಚಾಮೃತ ಅಭಿಷೇಕ, ಮಹಾರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಮಹಾ ಮಂಗಳಾರತಿ, ಬೆಳಗ್ಗೆ 10.30ಕ್ಕೆ ಪೂಜ್ಯ ಶ್ರೀಗಳವರ ಪಾದ ಪೂಜೆ, ಸುಮಂಗಲಿಯರ ಪೂಜೆ, ಪ್ರಾಕಾರದ ಸುತ್ತಲೂ ಉತ್ಸವ, ಪ್ರಸಾದ ವಿನಿಯೋಗ, ಸಂಜೆ 7.30ಕ್ಕೆ ರಾಜ ಬೀದಿಗಳಲ್ಲಿ ನಂದಿ ಧ್ವಜದ ಜೊತೆಗೆ ಉತ್ಸವ, ಸ್ಥಳ: ದೇವಸ್ಥಾನದ ಆವರಣ, ಡಿ. ಬನುಮಯ್ಯ ರಸ್ತೆ, ಕೆ.ಆರ್. ಮೊಹಲ್ಲಾ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ.

■ **ಮೈಸೂರು ವಿಶ್ವವಿದ್ಯಾನಿಲಯ, ರಾಜ್ಯ ಉನ್ನತ ಶಿಕ್ಷಣ ಪರಿಷತ್ತು (ಬೆಂಗಳೂರು), ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ (ಬೆಂಗಳೂರು) :** ಪ್ರಥಮ ದರ್ಜೆ ಕಾಲೇಜುಗಳ ಬೋಧಕರಿಗಾಗಿ ಬೋಧನೆ ಕುರಿತು ಒಂದು ದಿನದ ಕಾರ್ಯಾಗಾರ, ಉದ್ಘಾಟನೆ: ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಉಪಾಧ್ಯಕ್ಷ ಪ್ರೊ. ಎಸ್.ಆರ್. ನಿರಂಜನ, ಅಧ್ಯಕ್ಷತೆ: ಕುಲಪತಿ ಪ್ರೊ. ಎನ್.ಕೆ ಲೋಕನಾಥ್, ಸ್ಥಳ: ಶತಮಾನೋತ್ಸವ ಭವನ, ಮಹಾರಾಜ ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಶ್ರೀ ರಾಘವೇಂದ್ರ ಸ್ವಾಮಿ ಸೇವಾ ಸಮಿತಿ:** ವಿದ್ವಾನ್ ಶ್ರೀ ಖೇಡ ವೇದ ವ್ಯಾಸಚಾರ್ಯ ಅವರಿಂದ ಉಪನಿಷದ್‌ಗಳ ಬಗ್ಗೆ ಪ್ರವಚನ, ಸ್ಥಳ: ಮಠದ ಆವರಣ, ಸಂಜೆ 5ರಿಂದ 6.30ರವರೆಗೆ.

■ **ಸಾರ್ವಜನಿಕ ಗ್ರಂಥಾಲಯ ಇಲಾಖೆ, ನಗರ ಕೇಂದ್ರ ಗ್ರಂಥಾಲಯ, ಕುವೆಂಪುನಗರ ಶಾಖಾ ಗ್ರಂಥಾಲಯ:** ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ–2023 ಸಮಾರೋಪ ಸಮಾರಂಭ, ಉದ್ಘಾಟನೆ: ಮಾಜಿ ಮೇಯರ್ ಪಿ. ಶಿವಕುಮಾರ್, ಮುಖ್ಯ ಅತಿಥಿಗಳು: ಹಿರಿಯ ಸಾಹಿತಿ ಡಾ. ಕೆ. ಲೀಲಾ ಪ್ರಕಾಶ್, ಸ್ಥಳ: ನಗರ ಕೇಂದ್ರ ಗ್ರಂಥಾಲಯ, ಕುವೆಂಪುನಗರ ಶಾಖೆ, ಸಂಜೆ 5 ಗಂಟೆಗೆ.

■ **ಶ್ರೀ ಸಂಗಮೇಶ್ವರ ದೇವಸ್ಥಾನ :** ಕಾರ್ತಿಕ ಮಾಸ–ವಿಶೇಷ ಪೂಜಾ ಮಹೋತ್ಸವ, ಧಾರ್ಮಿಕ ಉಪನ್ಯಾಸ ಕಾರ್ಯಕ್ರಮ, ದಿವ್ಯ ಸಾನಿಧ್ಯ: ಮೈಸೂರಿನ ಶ್ರೀ ಹೊಸಮಠದ ಶ್ರೀ ಚಿದಾನಂದ ಸ್ವಾಮಿಗಳು, ಉದ್ಘಾಟನೆ: ದೇವನೂರು ಶ್ರೀ ಗುರುಮಲ್ಲೇಶ್ವರ ಮಹಾಸಂಸ್ಥಾನ ಮಠದ ಶ್ರೀ ಮಹಾಂತ ಸ್ವಾಮಿಗಳು, ಮೆರವಣಿಗೆ ಉದ್ಘಾಟನೆ: ಶಾಸಕ ಟಿ.ಎಸ್. ಶ್ರೀವತ್ಸ, ಸ್ಥಳ: ಶ್ರೀ ನಟರಾಜ ಸಭಾ ಭವನ, ಶ್ರೀ ಹೊಸಮಠ, ಸಂಜೆ 7 ಗಂಟೆಗೆ.

■ **ಮೇಷ್ಟ್ರು ಶಿಷ್ಯರು, ಬಂಧುಗಳು :** ಪ್ರೊ. ಎನ್. ವೆಂಕೋಬರಾವ್ ಮೇಷ್ಟ್ರು ಮೆಲುಕು, ಮುಖ್ಯ ಅತಿಥಿಗಳು: ಸಂಸದ ಶ್ರೀನಿವಾಸಪ್ರಸಾದ್, ಮಾಜಿ ಶಾಸಕ ವಾಸು, ಪ್ರೊ. ಶಿವಾಜಿ ಜೋಯಿಸ್, ಸ್ಥಳ: ಮೌರ್ಯ ಪ್ಯಾಲೇಸ್, ಶ್ರೀ ಹರ್ಷ ರಸ್ತೆ, ಸಂಜೆ 7 ಗಂಟೆಗೆ.

ಸುತ್ತೂರು ಶ್ರೀ ಕ್ಷೇತ್ರದಲ್ಲಿಂದು, ನಂಜನಗೂಡು ತಾಲೂಕು

■ **ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠ :** ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು, ಸ್ಥಳ: ಸುತ್ತೂರು ಶ್ರೀಕ್ಷೇತ್ರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ: ಡಾ.ಬಿ.ಕೆ.ಶಿವರಶ್ಮಿ, 6.15 ಗೀತಾರಾಧನ, 6.35 ಹಾಗೂ 6.10 "ಅಂಚೆ–ಅಂಕನ" ಆಕಾಶವಾಣಿ ಅಂಕಣ: ಪ್ರಾಯೋಜಿತ ಬಾನುಲಿ ಸರಣಿ, 6.40 ಸಿರಿಗನ್ನಡಂ ಗೆಲ್ಗೆ: ಪ್ರಸ್ತುತಿ–ಜಿ.ಕೆ. ರವೀಂದ್ರಕುಮಾರ್, 6.45 ಕಲ್ಯಾಣ ಕರೆದಿದೆ ಕಲ್ಯಾಣ" ಪ್ರಾಯೋಜಿತ ಕಾರ್ಯಕ್ರಮ, 6.50 ರೈತರಿಗೆ ಸಲಹೆ, 7.15 "ಕುಟುಂಬ ಕಲ್ಯಾಣ": ಪ್ರಾಯೋಜಿತ ಕಾರ್ಯಕ್ರಮ, 9.00 ನೆನಪಿನಂಗಳ (ಧ್ವನಿ ಭಂಡಾರದಿಂದ ಖ್ಯಾತ ಪ್ರಾಕೃತ ಮತ್ತು ಜೈನ ಶಾಸ್ತ್ರದ ವಿದ್ವಾಂಸರಾದ ಡಾ.ಆದಿನಾಥ ನೆಮಿನಾಥ್ ಉಪಾಧ್ಯೆ ಅವರೊಂದಿಗೆ ಡಾ. ಹಾ.ಮಾ.ನಾಯಕ್ ಅವರು ನಡೆಸಿದ್ದ ಸಂವಾದ, 10.00 ಟಿ.ಕೆ.ಗೋವಿಂದರಾವ್: ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ:** 12.30 ದೇವರನಾಮ: ಎಸ್.ಜಾನಕಿ, ಬಾಂಬೆ ಸಹೋದರಿಯರು, 12.45 ನಮ್ಮ ಆರೋಗ್ಯ– Anti Microbial ರೆಸಿಸ್ಟೆಂಟ್ ಜಾಗೃತಿ ಸಪ್ತಾಹ ಕುರಿತು ಡಾ.ಎಂ.ಎಸ್.ಸುಮನಾ ಅವರೊಂದಿಗೆ ಮಾತುಕತೆ, 1.25 ಭಾವಗೀತೆಗಳು: ಅಮೃತಾ ನಿತಿನ್, 3.00 ಕೆ.ಗಾನ ಸರಸ್ವತಿ–ಹಾಡುಗಾರಿಕೆ. **ಸಂಜೆ:** 4.00 ಮಹಿಳಾ ರಂಗ: ಡಾಕ್ಟರ್ ಸಮಯ, ತುರ್ತು ಚಿಕಿತ್ಸೆ ಹಾಗೂ ತೆಗೆದುಕೊಳ್ಳಬೇಕಾದ, ಮುಂಜಾಗ್ರಾತಾ ಕ್ರಮಗಳು ಕುರಿತು ಮಾತನಾಡುತ್ತಾರೆ ಡಾ. ಐಶ್ವರ್ಯ, 4.45 ಹಿಂದಿ ಪಾಠ: ಡಾ. ಸ್ಮಿತಾ ಚಿಪ್ಳೂಣ್‌ಕರ್, 6.00 "ಅಂಚೆ–ಅಂಕನ ಆಕಾಶವಾಣಿ ಅಂಕಣ": ಪ್ರಾಯೋಜಿತ ಬಾನುಲಿ ಸರಣಿ, 6.50 ಕೃಷಿರಂಗ: "ಹಣ್ಣು ಹೊನ್ನು" ರೈತ ಉತ್ಪಾದಕ ಸಂಸ್ಥೆಯ ಕಾರ್ಯಚಟುವಟಿಕೆಗಳು ಕುರಿತ ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಭಾಗವಹಿಸುವವರು ಡಾ.ರಾಘವೇಂದ್ರ ಕೆ. ಮೆಸ್ತ, ಕ್ಷಮಾ ಪಾಟೀಲ್ ಹಾಗೂ ಎನ್. ಕೇಶವಮೂರ್ತಿ. **ರಾತ್ರಿ:** 9.30 ಮತ್ತೆ ಕೇಳಿ: "ಹಾದಿಯಲ್ಲಿ ಕಂಡ ಮುಖ", ಸಂತೆ ವ್ಯಾಪಾರಿ, ಟೂರಿಸ್ಟ್ ಗೈಡ್ ಕೆ.ಎನ್.ವೆಂಕಟಕೃಷ್ಣ ಅವರೊಂದಿಗೆ ಸಂದರ್ಶನ, ಸಂದರ್ಶಕರು– ಅಬ್ದುಲ್ ರಶೀದ್, 10.00 ನಾಟಕ.

ಮೈಸೂರು ಮಿತ್ರ ಸೋಮವಾರ 20 ನವೆಂಬರ್ 2023

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮೈಸೂರು ಪ್ರದಕ್ಷಿಣೆ

ಯತಿವರ್ಯರ ಆಶೀರ್ವಾದ ಪಡೆದು, ಪಕ್ಷ-ಸಂಘ ಪರಿವಾರದ ಹಿರಿಯರೊಂದಿಗೆ ಸಮಾಲೋಚನೆ



ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಚಾಮುಂಡೇಶ್ವರಿಯ ಉತ್ಸವ ಮೂರ್ತಿಯ ದರ್ಶನ ಪಡೆದರು. ಬಿಜೆಪಿ ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಮತ್ತಿತರರನ್ನು ಕಾಣಬಹುದು.



ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಸುತ್ತೂರು ಶಾಖಾ ಮಠದಲ್ಲಿ ಭಾನುವಾರ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರಿಂದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆಶೀರ್ವಾದ ಪಡೆದರು.

ಮೈಸೂರು,ನ.19(ಎಸ್‌ಪಿಎನ್, ಪಿಎಂ)– ಬಿಜೆಪಿ ರಾಜ್ಯಾಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳುತ್ತಿದ್ದಂತೆ ಪಕ್ಷ ಸಂಘಟನೆ ಚಟುವಟಿಕೆಗಳಲ್ಲಿ ಚುರುಕಾಗಿ ತೊಡಗಿಸಿಕೊಂಡಿರುವ ಶಿಕಾರಿಪುರ ಶಾಸಕರೂ ಆದ ಬಿ.ವೈ.ವಿಜಯೇಂದ್ರ, ಭಾನುವಾರ ಮೈಸೂರಿನಲ್ಲಿ ಸುತ್ತೂರು ಶ್ರೀಗಳು, ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ಆಶೀರ್ವಾದ ಪಡೆದರು.

ಅಲ್ಲದೆ, ಪಕ್ಷ ಮತ್ತು ಆರ್‌ಎಸ್‌ಎಸ್‌ನ ಹಿರಿಯರನ್ನು ಭೇಟಿ ಮಾಡಿ, ಸಮಾಲೋಚಿಸಿದರು. ಚಾಮುಂಡಿಬೆಟ್ಟಕ್ಕೆ ತೆರಳಿ, ತಾಯಿ ಚಾಮುಂಡೇಶ್ವರಿ ದರ್ಶನ ಪಡೆದು ಪ್ರಾರ್ಥನೆ ಸಲ್ಲಿಸಿದರು. ಬಿಜೆಪಿ ರಾಜ್ಯಾಧ್ಯಕ್ಷರಾದ ಬಳಿಕ ಪ್ರಥಮ ಬಾರಿಗೆ ಮೈಸೂರಿಗೆ ಭೇಟಿ ನೀಡಿದ ವಿಜಯೇಂದ್ರ ಅವರಿಗೆ ಪಕ್ಷದ ಮುಖಂಡರು, ಕಾರ್ಯಕರ್ತರು ಅದ್ಧೂರಿ ಸ್ವಾಗತ ಕೋರಿದರು.



ಭಾನುವಾರ ಮೈಸೂರಿಗೆ ಆಗಮಿಸಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಪಕ್ಷದ ವತಿಯಿಂದ ಸ್ವಾಗತಿಸಲಾಯಿತು. ಸಂಸದ ಪ್ರತಾಪ್ ಸಿಂಹ, ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ಮುಖಂಡರಾದ ಎಂ.ರಾಜೇಂದ್ರ, ಅರುಣ್‌ಕುಮಾರ್‌ಗೌಡ ಮತ್ತಿತರರನ್ನು ಚಿತ್ರದಲ್ಲಿ ಕಾಣಬಹುದು.

ಪ್ರಸಾದ್ ನಿವಾಸಕ್ಕೆ ಭೇಟಿ: ಬಿಜೆಪಿಯ ಹಿರಿಯ ನಾಯಕರೂ ಆದ ಚಾಮರಾಜನಗರ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರನ್ನು ಭೇಟಿ ಮಾಡಿದ ವಿಜಯೇಂದ್ರ, ಅವರೊಂದಿಗೆ ಪಕ್ಷ ಸಂಘಟನೆ ಕುರಿತು ಸಮಾಲೋಚನೆ ನಡೆಸಿದರು. ತಮ್ಮ ನಿವಾಸಕ್ಕೆ ಭೇಟಿ ನೀಡಿದ್ದ ವಿಜಯೇಂದ್ರರಿಗೆ ಶ್ರೀನಿವಾಸ ಪ್ರಸಾದ್ ಹೂಗುಚ್ಛ ನೀಡಿ ಅಭಿನಂದಿಸಿದರು. ಇದೇ ವೇಳೆ ವಿಜಯೇಂದ್ರ ಅವರೂ ಶ್ರೀನಿವಾಸ ಪ್ರಸಾದ್ ಅವರಿಗೆ ಹೂಗುಚ್ಛ ನೀಡಿ ಆಶೀರ್ವಾದ ಪಡೆದರು.

ಆರ್‌ಎಸ್‌ಎಸ್ ಕಚೇರಿಗೆ ಭೇಟಿ: ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಆರ್‌ಎಸ್‌ಎಸ್ ಕಚೇರಿಗೆ (ಮಾಧವ ಕೃಪಾ) ಇಂದು ಮಧ್ಯಾಹ್ನ ಭೇಟಿ ನೀಡಿದ ವಿಜಯೇಂದ್ರ ಅವರು, ಆರ್‌ಎಸ್‌ಎಸ್‌ನ ಹಿರಿಯ ಜೇಷ್ಠ ಪ್ರಚಾರಕ ಸು.ರಾಮಣ್ಣ ಸೇರಿದಂತೆ ಸಂಘಟನೆಯ ಹಿರಿಯ ಸ್ವಯಂ ಸೇವಕರೊಂದಿಗೆ ಸಮಾಲೋಚನೆ ನಡೆಸಿದರು. ಬಳಿಕ ಬಿಜೆಪಿ ಮುಖಂಡರು, ಕಾರ್ಯಕರ್ತರು ಹಾಗೂ ಅಭಿಮಾನಿಗಳು ವಿಜಯೇಂದ್ರ ಅವರಿಗೆ ಹೂ ಗುಚ್ಛ ನೀಡಿ ಅಭಿನಂದಿಸಿದರು.

ಗಣಪತಿ ಸಚ್ಚಿದಾನಂದ ಆಶ್ರಮ: ನಂತರ ನಂಜನಗೂಡು ರಸ್ತೆಯಲ್ಲಿರುವ ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮಕ್ಕೆ ಭೇಟಿ ನೀಡಿದ ವಿಜಯೇಂದ್ರ, ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದರು. ಬಳಿಕ ಅವರೊಂದಿಗೆ ಕುಶಲೋಪರಿ ಮಾತುಕತೆ ನಡೆಸಿದರು.


ಬೆಟ್ಟ, ಸುತ್ತೂರು ಮಠ: ತದನಂತರ ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನಕ್ಕೆ ತೆರಳಿ, ಚಾಮುಂಡೇಶ್ವರಿ ಉತ್ಸವ ಮೂರ್ತಿ ದರ್ಶನ ಪಡೆದರು. ಬಳಿಕ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಶಾಖಾ ಮಠಕ್ಕೆ ಭೇಟಿ ನೀಡಿ, ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಆಶೀರ್ವಾದ ಪಡೆದರು. 30 ನಿಮಿಷಕ್ಕೂ ಹೆಚ್ಚು ಕಾಲ ಶ್ರೀಗಳೊಂದಿಗೆ ಪ್ರತ್ಯೇಕವಾಗಿ ಕುಶಲೋಪರಿ ಮಾತುಕತೆ ನಡೆಸಿದರು.

ಸೆಲ್ಫಿಗೆ ಮುಗಿಬಿದ್ದರು: ಸುತ್ತೂರು ಶ್ರೀಗಳಿಂದ ಆಶೀರ್ವಾದ ಪಡೆದು ಹೊರಗಡೆ ಬಂದ ವಿಜಯೇಂದ್ರ, ನಂತರ ಮಠದ ಹೊರಭಾಗದಲ್ಲಿ ಯುವಕರೊಂದಿಗೆ ಸ್ವಲ್ಪ ಹೊತ್ತು ಸೆಲ್ಫಿಗೆ ಪೋಸ್ ಕೊಟ್ಟರು.

ಸಂಸದ ಪ್ರತಾಪ್ ಸಿಂಹ, ಮಾಜಿ ಸಂಸದ ಸಿ.ಎಚ್.ವಿಜಯಶಂಕರ್, ಮಾಜಿ ಸಚಿವ ಕೋಟೆ ಎಂ.ಶಿವಣ್ಣ, ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕರಾದ ಹರ್ಷವರ್ಧನ್, ನಿರಂಜನಕುಮಾರ್, ಎನ್.ಬಾಲರಾಜ್, ಎನ್.ಮಹೇಶ್, ಡಿ.ದೇವರಾಜ ಅರಸು ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ರಘು ಕೌಟಿಲ್ಯ, ವಿಧಾನ ಪರಿಷತ್ ಮಾಜಿ ಸದಸ್ಯ ಸಿದ್ದರಾಜು, ಪಕ್ಷದ ಮುಖಂಡರಾದ ಎಂ.ರಾಜೇಂದ್ರ, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಮಂಗಳಾ ಸೋಮಶೇಖರ್, ಜಯಪ್ರಕಾಶ್ (ಜೆಪಿ), ಜೋಗಿ ಮಂಜು, ಕೆ.ವಸಂತಕುಮಾರ್, ಕೇಬಲ್ ಮಹೇಶ್ ಮತ್ತಿತರರು ಹಾಜರಿದ್ದರು.



ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಭಾನುವಾರ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರಿಂದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆಶೀರ್ವಾದ ಪಡೆದರು.



ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಸಂಸದ ಶ್ರೀನಿವಾಸ ಪ್ರಸಾದ್ ಅವರ ನಿವಾಸಕ್ಕೆ ಭಾನುವಾರ ಭೇಟಿ ನೀಡಿದ್ದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಶ್ರೀನಿವಾಸ ಪ್ರಸಾದ್ ಹೂಗುಚ್ಛ ನೀಡಿ ಅಭಿನಂದಿಸಿದರು.

ಇತರರೊಂದಿಗೆ ತಮ್ಮ ಹೋಲಿಸಿಕೊಂಡು ಸಮಯ ವ್ಯರ್ಥ ಮಾಡಬೇಡಿ

ವಿದ್ಯಾರ್ಥಿಗಳಿಗೆ ನಗರ ಪಾಲಿಕೆಯ ಸಹಾಯಕ ಆಯುಕ್ತರಾದ ಎಂ.ಎಸ್. ಪ್ರತಿಭಾ ಕಿವಿಮಾತು



ಮೈಸೂರು, ನ. 19– ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಸ್ನಾತಕೋತ್ತರ ಕೇಂದ್ರದಲ್ಲಿ 2023–24ನೇ ಸಾಲಿನ ಪಿಜಿ ವಿದ್ಯಾರ್ಥಿಗಳ ವೇದಿಕೆಯನ್ನು ಮೈಸೂರು ನಗರ ಪಾಲಿಕೆಯ ಸಹಾಯಕ ಆಯುಕ್ತರಾದ ಶ್ರೀಮತಿ ಎಂ.ಎಸ್. ಪ್ರತಿಭಾ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ವಿದ್ಯಾರ್ಥಿಗಳು ವರ್ತಮಾನದ ಮಹತ್ವವನ್ನು ಅರಿತು, ಜೀವನದ ಪ್ರತಿ ಕ್ಷಣವನ್ನು ಆನಂದಿಸುವಂತೆ ಕಿವಿಮಾತು ಹೇಳಿದರು. ವಿದ್ಯಾರ್ಥಿಗಳು ಇಚ್ಛಾಶಕ್ತಿಗೆ ಅನುಗುಣವಾಗಿ ನಡೆಯುವಂತೆಯೂ, ಇತರರೊಂದಿಗೆ ಹೋಲಿಕೆ ಮಾಡಿಕೊಂಡು ಸಮಯವನ್ನು ವ್ಯರ್ಥ ಮಾಡದಂತೆ ಹಿತವಚನ ನೀಡಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ.ಎಸ್. ಮರೀಗೌಡ ಅವರು ಸ್ನಾತಕೋತ್ತರ ಕೇಂದ್ರದ ಆರಂಭ ಹಾಗೂ ಪಿಜಿ ಫೋರಂನ ಚಟುವಟಿಕೆಗಳ ಕುರಿತು ಮಾಹಿತಿ ನೀಡಿದರು.

ವಿದ್ಯಾವರ್ಧಕ ಸಂಘದ ಗೌರವ ಕಾರ್ಯದರ್ಶಿ ಪಿ.ವಿಶ್ವನಾಥ್ ಮಾತನಾಡಿ, ದೊಡ್ಡ ಕನಸು ಕಾಣಲು ಧೈರ್ಯ ಮಾಡಿ ಮತ್ತು ಪಠ್ಯಕ್ರಮದ ಕಲಿಕೆಯನ್ನು ಮೀರಿದ ಜ್ಞಾನವನ್ನು ಸಂಪಾದಿಸುವ ಮೂಲಕ ನಿಮ್ಮ ಗುರಿಯನ್ನು ಸಾಧಿಸಿ ಎಂದು ವಿದ್ಯಾರ್ಥಿಗಳಿಗೆ ತಿಳಿ ಹೇಳಿದರು. ವಿದ್ಯಾವರ್ಧಕ ಸಂಘದ ಗೌರವ ಖಜಾಂಚಿ ಶ್ರೀಶೈಲ ರಾಮಣ್ಣನವರ್ ಹಾಗೂ ಕಾಲೇಜಿನ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಟಿ.ನಾಗರಾಜು ಉಪಸ್ಥಿತರಿದ್ದರು.

ಸ್ನಾತಕೋತ್ತರ ಕೇಂದ್ರದ ಮುಖ್ಯಸ್ಥರಾದ ಡಾ.ಎಸ್.ಪೂರ್ಣಿಮ ಹಾಗೂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಯತೀಂದ್ರ ಭಾರೀ ಭ್ರಷ್ಟ': ಸಚಿವ ಲಾಡ್ ಯಡವಟ್ಟು



ಹುಬ್ಬಳ್ಳಿ, ನ.19– ಯತೀಂದ್ರ ಆಡಳಿತದಲ್ಲಿ ಹಸ್ತಕ್ಷೇಪ ಮಾಡುತ್ತಾರೆ ಅವರು ಭಾರೀ ಭ್ರಷ್ಟರಿದ್ದಾರೆ. ಯತೀಂದ್ರರನ್ನು ಯಾಕೆ ಅಧ್ಯಕ್ಷರನ್ನಾಗಿ ಮಾಡಿದ್ದಾರೆ ಅವರನ್ನೇ ಕೇಳಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರನ್ನು ಟೀಕಿಸುವ ಭರದಲ್ಲಿ ಯತೀಂದ್ರ ಅವರ ಹೆಸರನ್ನು ಉಲ್ಲೇಖಿಸಿ ಸಚಿವ ಸಂತೋಷ್ ಲಾಡ್ ಯಡವಟ್ಟು ಮಾಡಿಕೊಂಡಿದ್ದಾರೆ.

ಹುಬ್ಬಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿಜಯೇಂದ್ರ ಮತ್ತು ಯತೀಂದ್ರ ಹೆಸರನ್ನು ಗೊಂದಲ ಮಾಡಿಕೊಂಡಿದ್ದಾರೆ. ಬಳಿಕ ಎಚ್ಚೆತ್ತುಕೊಂಡ ಅವರು ವಿಜಯೇಂದ್ರ ಬಗ್ಗೆ ಮಾತನಾಡಿದೆ ಎಂದು ಸ್ಪಷ್ಟನೆ ನೀಡಿದ್ದಾರೆ.

ವಿಜಯೇಂದ್ರ ಆಡಳಿತದಲ್ಲಿ ಹಸ್ತಕ್ಷೇಪ ಮಾಡುತ್ತಾರೆ ಎಂದು ಯಡಿಯೂರಪ್ಪನವರನ್ನು ಸಿಎಂ ಸ್ಥಾನದಿಂದ ಕೆಳಗೆ ಇಳಿಸಲಾಗಿತ್ತು. ಆರೆಸ್ಎಸ್ ಮತ್ತು ಕೇಂದ್ರ ಸರ್ಕಾರ ವಿಜಯೇಂದ್ರರ ಹಸ್ತಕ್ಷೇಪಕ್ಕೆ ಬೇಸತ್ತು ಬಿಎಸ್‌ವೈ ಅವರನ್ನು ಕೆಳಗಿಸಿತ್ತು. ಈಗ ಅದೇ ವಿಜಯೇಂದ್ರರನ್ನು ಬಿಜೆಪಿ ಅಧ್ಯಕ್ಷರನ್ನಾಗಿ ಮಾಡಲಾಗಿದೆ. ಬಿಜೆಪಿ ನಾಯಕರು ಇದಕ್ಕೆ ಉತ್ತರ ನೀಡಬೇಕು ಎಂದು ಹೇಳಿದರು.

ಸುತ್ತೂರು ಜೆಎಸ್‌ಎಸ್‌ನಲ್ಲಿ ಕನ್ನಡ ರಾಜ್ಯೋತ್ಸವ; ಮಕ್ಕಳ ದಿನಾಚರಣೆ



ಸುತ್ತೂರು, ನ. 19– ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಆಶ್ರಯದಲ್ಲಿ ಮಕ್ಕಳ ದಿನಾಚರಣೆ ಮತ್ತು ಕನ್ನಡ ರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮೈಸೂರು ವಿಶ್ವವಿದ್ಯಾನಿಲಯದ ಹಿರಿಯ ಲೇಖಕರು, ಸಂದರ್ಶಕ ಪ್ರಾಧ್ಯಾಪಕರು ಹಾಗೂ ಈ ಸಾಲಿನ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಪಾತ್ರರಾದ ಡಾ. ಸಿ. ನಾಗಣ್ಣ ಮಾತನಾಡಿ, ಕನ್ನಡ ನಾಡಿನ ಕಲೆ, ಸಾಹಿತ್ಯ, ಸಂಸ್ಕೃತಿ ವಿಶಿಷ್ಟವಾಗಿದೆ ಎಂದು ಸರ್ದಾರ್ ವಲ್ಲಭ ಬಾಯಿ ಪಟೇಲ್ ಅವರು ಬಣ್ಣಿಸಿದ್ದ ಮಾತನ್ನು ಸ್ಮರಿಸುತ್ತಾ, ಕರ್ನಾಟಕವು ಸುದೀರ್ಘವಾದ ಪರಂಪರೆಯನ್ನು, ಸಂಸ್ಕೃತಿಯನ್ನು ಹೊಂದಿದೆ ಎಂದರು.


ಕನ್ನಡಿಗರು 'ಒಲ್ಮೆ' 'ಬಲ್ಮೆ' ಮತ್ತು 'ಜಾಣ್ಮೆ'ಗೆ ಹೆಸರಾದವರು. ಕರ್ನಾಟಕ ಏಕೀರಣದ ಮಹತ್ವ, ಕರ್ನಾಟಕ ಸಾಹಿತ್ಯ ಪರಿಷತ್ತಿನ ಸ್ಥಾಪನೆ ಮತ್ತು ಭಾಷಾವಾರು ಪ್ರಾಂತ್ಯದ ವಿಂಗಡಣೆಯ ಬಗ್ಗೆ ಮಕ್ಕಳಿಗೆ ತಿಳಿಸಿಕೊಟ್ಟರು. ಚಾಚಾ ನೆಹರುರವರು ಮಕ್ಕಳ ಮೇಲೆ ಇಟ್ಟಿದ್ದ ಮಮಕಾರವನ್ನು ಬಣ್ಣಿಸಿದರು. ಇದೇ ಸಂದರ್ಭದಲ್ಲಿ ಸುತ್ತೂರು ಶ್ರೀಮಠವು ಲಕ್ಷಾಂತರ ವಿದ್ಯಾರ್ಥಿಗಳಿಗೆ ತ್ರಿವಿಧ ದಾಸೋಹ ನೀಡಿ, ಪ್ರತಿಯೊಂದು ಮಗುವಿನ ಶೈಕ್ಷಣಿಕ ಸರ್ವತೋಮುಖ ಅಭಿವೃದ್ಧಿಗೆ ಸಹಕರಿಸುತ್ತಿರುವುದನ್ನು ಶ್ಲಾಘಿಸಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ ಆರ್. ಮಹೇಶಪ್ಪ ಮಾತನಾಡಿ, ಇಂದಿನ ಮಕ್ಕಳಲ್ಲಿ ಎಂಥ ಶಕ್ತಿ ಇದೆ ಎಂಬುದು ತಿಳಿದಿರುವುದಿಲ್ಲ. ಅವರಿಗೆ ಸೂಕ್ತ ಮಾರ್ಗದರ್ಶನ ಮಾಡಿದರೆ ಉತ್ತಮ ಪ್ರಜೆಗಳಾಗಿ ರೂಪುಗೊಳ್ಳುತ್ತಾರೆ. ಅಂತಹ ಮಾರ್ಗದರ್ಶಕರನ್ನು ಸುತ್ತೂರು ಜೆಎಸ್‌ಎಸ್ ಸಂಸ್ಥೆಯು ಹೊಂದಿದೆ ಎಂದು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಂಯೋಜನಾಧಿಕಾರಿ ಜಿ. ಎಲ್. ತ್ರಿಪುರಾಂತಕ ಮಾತನಾಡಿ, ಕಲಿಯೋಕೆ ಕೋಟಿ ಭಾಷೆ ಇದ್ದರು ಆಡೋಕೆ ಒಂದೇ ಭಾಷೆ, ಅದು ಕನ್ನಡ. ಜೀವನಕ್ಕಾಗಿ ನೂರು ಭಾಷೆ ಕಲಿತರು, ಹೃದಯದ ಭಾಷೆ ಕನ್ನಡವೇ ಆಗಿರಲಿ. ಕನ್ನಡಿಗರು ಕನ್ನಡವನ್ನು ಉಳಿಸಿ–ಬೆಳೆಸಿ, ಕಲಿಸಬೇಕು ಎಂದರು.

ಇದೇ ಸಂದರ್ಭದಲ್ಲಿ ಏರ್ಪಡಿಸಿದ್ದ ವಿವಿಧ ಆಟೋಟ ಸ್ಪರ್ಧೆಗಳಲ್ಲಿ ವಿಜೇತರಾದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಬಹುಮಾನವನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಸಂಸ್ಥೆಯ ಮುಖ್ಯಸ್ಥರಾದ ಸಂಪತ್ತು, ವೀರಭದ್ರಯ್ಯ, ಡಾ. ಹೆಚ್.ಎಂ. ಮಹೇಶ್, ಎಸ್. ಶಿವಸ್ವಾಮಿ, ಜಿ.ಶಿವಮಲ್ಲು, ಎಂ.ಜಿ. ಬಸವಣ್ಣ, ಜಿ.ಎಂ. ಷಡಕ್ಷರಿ, ಶ್ರೀಮತಿ ಪಿ. ಸುಶೀಲ ಹಾಗೂ ಮಹದೇವಪ್ರಸಾದ್ ಉಪಸ್ಥಿತರಿದ್ದರು.

ಮೈಸೂರಲ್ಲಿ ಅದ್ದೂರಿಯಾಗಿ ಕನಕದಾಸರ ಜಯಂತಿ ಆಚರಿಸಲು ನಿರ್ಧಾರ



ಮೈಸೂರು, ನ.19(ಎಸ್‌ಬಿಡಿ)– ಮೈಸೂರಿನಲ್ಲಿ ಸಂತ ಶ್ರೇಷ್ಠ ಭಕ್ತ ಕನಕದಾಸರ ಜಯಂತ್ಯೋತ್ಸವವನ್ನು ಅದ್ಧೂರಿಯಾಗಿ ಆಚರಿಸಲು ತೀರ್ಮಾನಿಸಲಾಗಿದೆ.

ಸಂತ ಶ್ರೀ ಕನಕದಾಸರ ಜಯಂತ್ಯೋತ್ಸವ ಸಮಿತಿ ವತಿಯಿಂದ ಮೈಸೂರಿನ ಸಿದ್ದಾರ್ಥ ಬಡಾವಣೆಯ ಕನಕ ಭವನದಲ್ಲಿ ನ.30ರಂದು ಕನಕದಾಸರ ಜಯಂತ್ಯೋತ್ಸವ ಹಮ್ಮಿಕೊಂಡಿರುವ ಹಿನ್ನೆಲೆಯಲ್ಲಿ ಸಮಿತಿ ಅಧ್ಯಕ್ಷ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ನಡೆಸಿ, ಈ ತೀರ್ಮಾನ ಕೈಗೊಳ್ಳಲಾಯಿತು.

ಕನಕದಾಸರ ಜಯಂತ್ಯೋತ್ಸವದ ದಿವ್ಯ ಸಾನಿಧ್ಯ ವಹಿಸಲು ಕಾಗಿನೆಲೆ ಕನಕಗುರು ಪೀಠದ ಸ್ವಾಮೀಜಿ ಹಾಗೂ ಉರಿಲಿಂಗಿ ಪೆದ್ದಿ ಮಠದ ಶ್ರೀ ಜ್ಞಾನ ಪ್ರಕಾಶ್ ಸ್ವಾಮೀಜಿ ಅವರನ್ನು ಮತ್ತು ಮುಖ್ಯ ಭಾಷಣಕಾರರನ್ನಾಗಿ ವಿದ್ವಾಂಸರಾದ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಅವರನ್ನು ಆಹ್ವಾನಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

ಮಿನಿ ದಸರಾ ಮಾದರಿ: ಈ ಬಾರಿ ಮೈಸೂರು ನಗರ ಹಾಗೂ ಜಿಲ್ಲೆಯ ಎಲ್ಲೆಡೆಯಿಂದ ಹೆಚ್ಚು ಸಂಖ್ಯೆಯ ಜನರನ್ನು ಸಮಾರಂಭಕ್ಕೆ ಆಹ್ವಾನಿಸಿ, ಮಿನಿ ದಸರಾ ಮಾದರಿಯಲ್ಲಿ ಕನಕದಾಸರ ಜಯಂತ್ಯೋತ್ಸವ ಆಚರಿಸಬೇಕು. ಜಾನಪದ ಕಲಾತಂಡಗಳ ಜೊತೆ ಸ್ತಬ್ದಚಿತ್ರ ಮೆರವಣಿಗೆ ಆಯೋಜಿಸುವುದು. ವಿಶೇಷವಾಗಿ ಸಮಾಜ ಸುಧಾರಕರು, ಮಹಾನ್ ನಾಯಕರು, ದಾರ್ಶನಿಕರ ಸಂದೇಶ ಸಾರುವ ಹಾಗೂ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳ ಮಹತ್ವ ತಿಳಿಸುವ ಸ್ತಬ್ದಚಿತ್ರಗಳನ್ನು ರೂಪಿಸಲು ಸರ್ವಾನುಮತದಿಂದ ನಿರ್ಣಯಿಸಲಾಯಿತು.

ಪ್ರತಿಭಾ ಪುರಸ್ಕಾರ: ಎಂದಿನಂತೆ ಕನಕದಾಸರ ಜಯಂತ್ಯೋತ್ಸವದ ಅಂಗವಾಗಿ ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಪುರಸ್ಕರಿಸುವುದರ ಜೊತೆಗೆ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾದವರನ್ನು ಅಭಿನಂದಿಸಲು ನಿರ್ಧರಿಸಲಾಯಿತು. ಒಟ್ಟಾರೆ ಸಚಿವರು, ಶಾಸಕರು ಸೇರಿದಂತೆ ಮೈಸೂರು ನಗರ ಮತ್ತು ಜಿಲ್ಲೆಯ ಎಲ್ಲಾ ಜನಪ್ರತಿನಿಧಿಗಳು ಹಾಗೂ ಸಮಾಜದ ಮುಖಂಡರುಗಳ ಉಪಸ್ಥಿತಿಯಲ್ಲಿ ಅದ್ಧೂರಿ ಹಾಗೂ ಅರ್ಥಪೂರ್ಣವಾಗಿ ಕಾರ್ಯಕ್ರಮ ನಡೆಸಲು ಪೂರ್ವಭಾವಿ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ಸಭೆಯಲ್ಲಿ ಸಮಿತಿಯ ಕಾರ್ಯದರ್ಶಿ ಬ್ಯಾಂಕ್ ಎಂ.ಪುಟ್ಟಸ್ವಾಮಿ, ಸಂಚಾಲಕ ಎಂ.ಶಿವಣ್ಣ, ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯ ಬಿ.ಎಂ.ರಾಮು, ಕುರುಬರ ಸಂಘದ ಮಾಜಿ ಅಧ್ಯಕ್ಷ ಸುಬ್ರಮಣ್ಯ, ಮಾಜಿ ಮೇಯರ್ ಟಿ.ಬಿ.ಚಿಕ್ಕಣ್ಣ, ಮುಖಂಡರಾದ ಸಿದ್ದ ನಾಗೇಂದ್ರ, ಎಂ.ಮಹಾದೇವಗೌಡ, ನಾಡನಹಳ್ಳಿ ರವಿ, ರಮೇಶ್ ರಾಮಪ್ಪ, ಬಸವರಾಜು, ಪವನ್ ಸಿದ್ದರಾಮು, ವಿಶ್ವ, ಕುರುಬಾರಳ್ಳಿ ಅಪ್ಪುಗೌಡ, ಪ್ರಕಾಶ್, ಮಾಜಿ ಕಾರ್ಪೊರೇಟರ್ ಶಂಕರ್, ರಮೇಶ್, ಕನ್ನಡ ಪರ ಹೋರಾಟಗಾರ ಬಾಲಕೃಷ್ಣ, ಕಂಸಾಳೆ ರವಿ, ಕ್ಯಾಂಟಿನ್ ರವಿ, ಧರ್ಮೇಂದ್ರ, ಶೇಖರ್ ಮತ್ತಿತರರು ಭಾಗವಹಿಸಿದ್ದರು.

ಆರ್‌ಬಿಐ ಮಾಜಿ ಗವರ್ನರ್ ಎಸ್. ವೆಂಕಟರಾಮನ್ ನಿಧನ

ಚೆನ್ನೈ, ನ.19– ಅನಾರೋಗ್ಯದಿಂದ ಬಳಲುತ್ತಿದ್ದ ಭಾರತೀಯ ರಿಸರ್ವ್ ಬ್ಯಾಂಕ್‌ನ ಮಾಜಿ ಗವರ್ನರ್ ಎಸ್. ವೆಂಕಟರಾಮನ್ ನಿಧನರಾಗಿದ್ದಾರೆ. ಅವರಿಗೆ 92 ವರ್ಷ ವಯಸ್ಸಾಗಿತ್ತು.

ವೆಂಕಟರಾಮನ್ ಭಾರತೀಯ ಆಡಳಿತ ಸೇವೆಯ ಸದಸ್ಯರಾಗಿದ್ದರು ಮತ್ತು ಆರ್‌ಬಿಐ ಗವರ್ನರ್ ಪಾತ್ರ ವಹಿಸಿಕೊಳ್ಳುವ ಮೊದಲು ಅವರು ಹಣಕಾಸು ಕಾರ್ಯದರ್ಶಿಯಾಗಿ ಮತ್ತು ನಂತರ ಕರ್ನಾಟಕ ಸರ್ಕಾರದ ಸಲಹೆಗಾರರಾಗಿ ಸೇವೆ ಸಲ್ಲಿಸಿದ್ದರು.

ವೆಂಕಟರಾಮನ್ ಡಿಸೆಂಬರ್ 1990 ಮತ್ತು ಡಿಸೆಂಬರ್ 1992ರ ನಡುವೆ ಆರ್‌ಬಿಐಗೆ ಸೇವೆ ಸಲ್ಲಿಸಿದ್ದರು. ಇದರ ಬಿಕ್ಕಟ್ಟಿನ ಸಂದರ್ಭದಲ್ಲಿ ಅವರ ಕೊಡುಗೆಗಳನ್ನು ಸ್ಮರಿಸಿರುವ ಆರ್‌ ಬಿಐ ಗವರ್ನರ್ ಶಕ್ತಿಕಾಂತ ದಾಸ್, ವೆಂಕಟರಾಮನ್ ಅದ್ಭುತ ವ್ಯಕ್ತಿತ್ವವುಳ್ಳ, ಜನರ ಸೇವಕ ಎಂದು ಬಣ್ಣಿಸಿದ್ದಾರೆ. ಅವರ ಅವಧಿಯಲ್ಲಿ ಭಾರತ ಐಎಂಎಫ್‌ನ ಸ್ಥಿರೀಕರಣ ಕಾರ್ಯಕ್ರಮವನ್ನು ಅಳವಡಿಸಿಕೊಂಡು, ರೂಪಾಯಿ ಅಪಮೌಲ್ಯೀಕರಣ ಮತ್ತು ಆರ್ಥಿಕ ಸುಧಾರಣೆ ಕಾರ್ಯಕ್ರಮ ಪ್ರಾರಂಭಿಸಿತು ಎಂದು ಆರ್‌ಬಿಐ ತನ್ನ ವೆಬ್‌ಸೈಟ್‌ನಲ್ಲಿ ತಿಳಿಸಿದೆ.

22 ಕೋಟಿ ರೂ.ಗೆ ಮಾರಾಟವಾಯ್ತು ಬಾಟಲಿ ವಿಸ್ಕಿ

ಬ್ರಿಟನ್, ನ.19– ಲಂಡನ್‌ನಲ್ಲಿರುವ ಪ್ರಸಿದ್ಧ ಅಂತಾರಾಷ್ಟ್ರೀಯ ಹರಾಜು ಸಂಸ್ಥೆ ಸೋಥೆಬೈಸ್ ನಡೆಸಿದ ಹರಾಜಿನಲ್ಲಿ ಮಕಲನ್ ಕಂಪನಿ ತಯಾರಿಸಿದ ಸಿಂಗಲ್ ಮಾಲ್ಟ್ ವಿಸ್ಕಿ 22 ಕೋಟಿ ರೂ.ಗೆ ಮಾರಾಟವಾಗಿ ದಾಖಲೆ ನಿರ್ಮಿಸಿದೆ.

2019ರಲ್ಲಿ ಇದೇ ಕಂಪನಿ ತಯಾರಿಸಿದ್ದ ವಿಸ್ಕಿಯು 15 ಕೋಟಿ ರೂ. ಮಾರಾಟವಾಗಿತ್ತು. ಆ ದಾಖಲೆಯನ್ನು 'ದಿ ಮಕಲನ್ ಅದಾಮಿ 1926' ಹೆಸರಿನ ವಿಸ್ಕಿ ಮುರಿದಿದೆ. ಮಕಲನ್ ಕಂಪನಿಯು 1926ರಲ್ಲಿ ಈ ವಿಸ್ಕಿಯನ್ನು ತಯಾರಿಸಿತ್ತು. ಅದನ್ನು 60 ವರ್ಷಗಳ ವರೆಗೆ ಉಳಿಸಿಕೊಂಡಿತ್ತು.

ಸೋಥೆಬೈಸ್‌ನಲ್ಲಿ ವಿಸ್ಕಿಯನ್ನು ಹರಾಜಿಗೆ ಇಡಲಾಗಿತ್ತು. ಇದು 22 ಲಕ್ಷ ಪೌಂಡ್ (22.48 ಕೋಟಿ ರೂ.)ಗೆ ಹರಾಜಾಗಿ ಹೊಸ ದಾಖಲೆ ಬರೆದಿದೆ.

ಕಾಂಗ್ರೆಸ್ ಭವನದಲ್ಲಿ ಇಂದಿರಾಗಾಂಧಿ ಜನ್ಮ ದಿನಾಚರಣೆ

ಮೈಸೂರು, ನ.19(ಜಿಎ)–ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಜಿಲ್ಲಾ ಮತ್ತು ನಗರ ಕಾಂಗ್ರೆಸ್ ವತಿಯಿಂದ ಭಾನುವಾರ ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರ 106ನೇ ಜನ್ಮ ದಿನವನ್ನು ಆಚರಿಸಲಾಯಿತು.



ಲಿಂಗತ್ವ ಅಲ್ಪಸಂಖ್ಯಾತ ಹೋರಾಟಗಾರ್ತಿ ಪ್ರೀತಿ ಪ್ರಕಾಶ್, ಆದರ್ಶ ರೈತ ಮಹಿಳೆ ವಸಂತಕುಮಾರಿ, ಸೋಲಿಗ ಸಮುದಾಯದ ವಿದ್ಯಾವಂತ ಮಹಿಳೆ ಡಾ.ರತ್ನಮ್ಮ, ಪೌರಕಾರ್ಮಿಕ ಸೇನಾನಿ ನರಸಮ್ಮ, ಪ್ರಶಸ್ತಿ ವಿಜೇತ ಶುಶ್ರೂಶಕಿ ನಂದಿನಿ, ಆಶಾ ಕಾರ್ಯಕರ್ತೆ ಮಹದೇವಮ್ಮ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಈ ವೇಳೆ 'ಇಂದಿರಾ ಇಂಡಿಯಾ ರಾಜಕೀಯ ಸವಾಲುಗಳ' ಬಗ್ಗೆ ಕನ್ನಡ ಪ್ರಾಧ್ಯಾಪಕರು ಹಾಗೂ ಸಂಸ್ಕೃತಿ ಚಿಂತಕರಾದ ಪ್ರೊಫೆಸರ್ ಕೆಎನ್. ಲೋಲಾಕ್ಷಿ ಅವರು ಮಾತನಾಡಿ, ಇಂದಿರಾ ಗಾಂಧಿ ಅವರು ದೇಶದ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡಾಗ ಭಾರತ ಸಮೃದ್ಧವಾಗಿರಲಿಲ್ಲ, ಬಡತನದಲ್ಲಿ ನಲುಗಿತ್ತು, ಬ್ರಿಟೀಷರು ನಮ್ಮ ಸಂಪತ್ತನ್ನು ಲೂಟಿ ಮಾಡಿ ದೇಶ ಖಾಲಿ ಮಾಡಿದ್ದರು. ಭಾರತ ಪುರುಷ ಪ್ರಧಾನ ರಾಷ್ಟ್ರವಾಗಿತ್ತು. ಸಂಪ್ರದಾಯವಾದಿಗಳು ಇಂದಿರಾ ಪ್ರಧಾನಿಯಾಗಲು ಇಷ್ಟಪಡುತ್ತಿರಲಿಲ್ಲ. ಇವೆಲ್ಲವನ್ನು ದಿಟ್ಟತನದಿಂದ ಎದುರಿಸಿ ಇಂದಿರಾಗಾಂಧಿ ಪ್ರಧಾನಿಯಾಗಿ ಭಾರತವನ್ನು ಹಸಿವಿನಿಂದ ಮುಕ್ತಿಗೊಳಿಸಿ ಬಡತನ ನಿರ್ಮೂಲನೆಗೆ ಮುಂದಾದರು ಎಂದು ವಿವರಿಸಿದರು.

ಪುರುಷ ಪ್ರಧಾನ ಸಮಾಜದಲ್ಲಿ ಸಾಕಷ್ಟು ಕ್ರಾಂತಿಕಾರಿ ಸುಧಾರಣೆಗಳು ಮತ್ತು ಯೋಜನೆಗಳ ಮೂಲಕ ಇಂಡಿಯಾ ದೇಶವನ್ನು ಇಂದಿರಾ ಗಾಂಧಿ ಮೂಲಕ ಗುರುತಿಸುವಂತೆ ಮಾಡಿದ ಉಕ್ಕಿನ ಮಹಿಳೆ ಇಂದಿರಾ ಗಾಂಧಿ ಅವರು ಪಕ್ಷಾತೀತ, ಜಾತ್ಯತೀತ, ದೇಶಾತೀತ ಹಾಗೂ ಧರ್ಮಾತೀತ ರಾಜಕಾರಣಿಯಾಗಿ ಇಂದಿಗೂ ಜನ ಮಾನಸದಲ್ಲಿ ಉಳಿದಿದ್ದಾರೆ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಲಿಂಗತ್ವ ಅಲ್ಪಸಂಖ್ಯಾತರಿಗೆ ಗುರುತಿನ ಪತ್ರ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಜಿಪಂ ಮಾಜಿ ಅಧ್ಯಕ್ಷ ಮರೀಗೌಡ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಿ.ಜೆ.ವಿಜಯಕುಮಾರ್, ನಗರ ಕಾಂಗ್ರೆಸ್ ಅಧ್ಯಕ್ಷ ಮೂರ್ತಿ, ಮುಖಂಡರಾದ ಶಿವಣ್ಣ ಈಶ್ವರ್ ಚಕ್ಕಡಿ, ಶಿವಪ್ರಸಾದ್, ಮಾಜಿ ಮೇಯರ್ ಪುಷ್ಪಲತಾ ಚಿಕ್ಕಣ್ಣ, ಮೋದಾಮಣಿ, ಟಿ.ಬಿ.ಚಿಕ್ಕಣ್ಣ, ಶಿವಮಾದು, ಪ್ರದೀಪ್, ಎಂ.ಸಿ.ಚಿಕ್ಕಣ್ಣ, ರಮೇಶ್, ಬಿ.ಎಂ.ರಾಮು ಮತ್ತಿತರರು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಅವ್ವ : ಹೋಗಿ ಕೂದಲ ಕಟ್ ಮಾಡಿಸ್ಕೊಂಡ್ ಬಾರೋ... ಅದೆಷ್ಟು ಉದ್ದ ಬೆಳೆಸಿದ್ದಿ...

ಮಗ : ಅವ್ವ ಇದು ಲೇಟೆಸ್ಟ್ ಫ್ಯಾಶನ್..

ಅವ್ವ : ಏನ್ ಫ್ಯಾಶನ್ನೋ ಮೂದೇವಿ, ನಿನ್ನ ತಂಗೀನ ನೋಡಾಕ್ ಬಂದಿದ್ದ ಗಂಡು ನಿನ್ನ ಒಪ್ಕೊಂಡ್ ಹೋಗ್ಯಾನ!

ಮೈಸೂರು ಮಿತ್ರ

ಸೋಮವಾರ, 20 ನವೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

"ಜಗದಲಿ ಎಲ್ಲರನ್ನೂ ಸಮಾನವಾಗಿ ಕಾಣುವುದು ಗಡಿಯಾರ ಮಾತ್ರ, ಬಡವನಿಗೂ ಒಂದೇ , ಶ್ರೀಮಂತನಿಗೂ ಒಂದೇ, ಯಾರಿಗಾಗಿಯೂ ನಿಲ್ಲೋದಿಲ್ಲ.."

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ಹುಣಸೆ ಮರ ಮುಪ್ಪಾದರೂ ಹುಳಿ ಮುಪ್ಪೇ?'

ನಿಮ್ಮ ಪತ್ರಗಳು

ಡೀಪ್ ಫೇಕ್ ಕಡಿವಾಣ ಅಗತ್ಯ

ಮಾನ್ಯರೆ,

ವಿಜ್ಞಾನ ಜಗತ್ತಿನಲ್ಲಿ ಹೊಸ ಹೊಸ ಆವಿಷ್ಕಾರವಾದಂತೆ, ಇಂತಹ ಅವಿಷ್ಕಾರಗಳನ್ನು ಜನರ ಹಿತಕ್ಕೆ ಬಳಸುವುದಕ್ಕಿಂತ ಸಮಾಜದ ಅಹಿತಕ್ಕೆ ಬಳಕೆಯಾಗುತ್ತಿರುವುದು ದುರದೃಷ್ಟಕರವಾಗಿದೆ. ಇತ್ತೀಚೆಗೆ ಖ್ಯಾತ ನಟಿ ರಶ್ಮಿಕಾ ಮಂದಣ್ಣನವರ ಫೋಟೋವನ್ನು ಡೀಪ್ ಫೇಕ್ ಬಳಸಿ ಇನ್ನೊಬ್ಬ ನಟಿಯ ದೇಹಕ್ಕೆ ಹೋಲುವಂತೆ ನಕಲು ಮಾಡಿರುವುದು ಬೆಳಕಿಗೆ ಬಂದಿರುವುದು ತಂತ್ರಜ್ಞಾನದ ದುರುಪಯೋಗಕ್ಕೆ ಸಾಕ್ಷಿಯಾಗಿದೆ.

ಡೀಪ್ ಫೇಕ್ ತಂತ್ರಜ್ಞಾನ ಕೃತಕ ಬುದ್ಧಿಮತ್ತೆಯ ಒಂದು ಭಾಗವಾಗಿದ್ದು, ಅಲ್ಗಾರಿದಮ್‌ಗಳ ಮೂಲಕ ಇನ್ನೊಬ್ಬರ ಮುಖ ಭಾವಗಳನ್ನು ಆಳಪದರಗಳಲ್ಲಿ ವಿಶ್ಲೇಷಿಸಿ, ನಕಲಿ ರಚನೆಯನ್ನು ಮಾಡಲು ಈ ತಂತ್ರಜ್ಞಾನವನ್ನು ಬಳಸಲಾಗುತ್ತದೆ. ಈ ತಂತ್ರಜ್ಞಾನದ ಸಹಾಯದಿಂದ ವ್ಯಕ್ತಿಯ ಮೂಲ ಮುಖ ಮತ್ತು ಧ್ವನಿಯನ್ನು ಬದಲಿಸಿ ನೈಜ ಎಂಬಂಥ ವೀಡಿಯೋ, ಆಡಿಯೋ ಮತ್ತು ಫೋಟೋಗಳನ್ನು ರಚಿಸಲು ಈ ತಂತ್ರಜ್ಞಾನ ಸಹಾಯ ಮಾಡುತ್ತದೆ.

ಡೀಪ್ ಪೇಕ್ ತಂತ್ರಜ್ಞಾನವನ್ನು ಪ್ರಾರಂಭದಲ್ಲಿ ಮನರಂಜನೆ ಮತ್ತು ವಿಡಂಬನಾತ್ಮಕ ವಿಷಯಗಳ ರಚನೆಗೆ ಬಳಸಲಾಗುತ್ತಿತ್ತು. ಆದರೆ ಪ್ರಸ್ತುತ ಡೀಪ್ ಫೇಕ್ ತಂತ್ರಜ್ಞಾನವನ್ನು ತಪ್ಪು ಮಾಹಿತಿ ರವಾನೆ, ರಾಜಕೀಯ ದುರುದ್ದೇಶ ಸಾಧನೆಗೆ, ಬ್ಲಾಕ್‌ಮೇಲ್, ಚಾರಿತ್ರ್ಯಹರಣ ಮುಂತಾದ ಸಮಾಜಘಾತಕ ಕೆಲಸಗಳಿಗೆ ಬಳಕೆಯಾಗುತ್ತಿರುವುದು ತಂತ್ರಜ್ಞಾನದ ದುರುಪಯೋಗವನ್ನು ತೆರೆದಿಡುತ್ತದೆ.

ಡೀಪ್ ಪೇಕ್ ತಂತ್ರಜ್ಞಾನವನ್ನು ಬಳಸಿಕೊಳ್ಳಲು ಪ್ಲೇ ಸ್ಟೋರ್, ಆ್ಯಪ್ ಸ್ಟೋರ್‌ಗಳಲ್ಲಿ ಹಲವಾರು ಆ್ಯಪ್‌ಗಳಿದ್ದು ಇವು ಉಚಿತವಾಗಿ ದೊರೆಯುತ್ತದೆ. ಈ ಆ್ಯಪ್‌ಗಳಲ್ಲಿ 15 ಸೆಕೆಂಡ್ ವಿಡಿಯೋವನ್ನು ಉಚಿತವಾಗಿ ಮಾಡಲು ಅವಕಾಶವಿರುತ್ತದೆ. 2023ರ ಅಂಕಿ ಅಂಶಗಳ ಪ್ರಕಾರ 1.43 ಲಕ್ಷ ಡೀಪ್ ಫೇಕ್ ವಿಡಿಯೋಗಳು ಅಂತರ್ಜಾಲದಲ್ಲಿ ಸಂಗ್ರಹಣೆಯಾಗಿರುವುದು ತಿಳಿದು ಬಂದಿದೆ.

ಈ ತಂತ್ರಜ್ಞಾನದಿಂದ ಜನಪ್ರಿಯ ವ್ಯಕ್ತಿಗಳ ಅಶ್ಲೀಲ ವಿಡಿಯೋ, ಫೋಟೋಗಳನ್ನು ಸೃಷ್ಟಿಸುವ ಮೂಲಕ ಅವರ ಚಾರಿತ್ರ್ಯಹರಣ ಮಾಡಲಾಗುತ್ತದೆ. ಈ ತಂತ್ರಜ್ಞಾನ ಸಮಾಜಕ್ಕೆ ತುಂಬಾ ಮಾರಕವಾಗಿದ್ದು, ಇದರ ಬಳಕೆಗೆ ನಿಯಮಗಳನ್ನು ಹೇರುವುದು ಅಗತ್ಯವಾಗಿದೆ.

ಡೀಪ್ ಫೇಕ್ ಮಾಡುವ ಅಪರಾಧಿಗಳಿಗೆ ಭಾರತದಲ್ಲಿ ಮಾಹಿತಿ ತಂತ್ರಜ್ಞಾನ ಕಾಯ್ದೆ 2000 ಸೆಕ್ಷನ್ 66ರ ಪ್ರಕಾರ ಗುರುತು ಕಳುವು ಮಾಡಿ ಅದನ್ನು ದುರುಪ ಯೋಗ ಪಡಿಸಿಕೊಂಡರೆ 3 ವರ್ಷ ಜೈಲು ಶಿಕ್ಷೆ ಮತ್ತು 1 ಲಕ್ಷದವರೆಗೆ ದಂಡವನ್ನು ವಿಧಿಸಬಹುದಾಗಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇಂತಹ ಅಂತರ್ಜಾಲ ಅಪರಾಧವನ್ನು ಗಂಭೀರವಾಗಿ ಪರಿಗಣಿಸಿ, ತಂತ್ರಜ್ಞಾನ ದುರುಪಯೋಗಕ್ಕೆ ಕಠಿಣ ಕಾನೂನು ಜಾರಿ ಮಾಡಬೇಕೆಂದು ಜನತೆಯ ಪರವಾಗಿ ಅಗ್ರಹಿಸೋಣ.

–ರಾಸುಮ ಭಟ್, ಸಂಶೋಧನಾ ವಿದ್ಯಾರ್ಥಿ, ಚಿಕ್ಕಮಗಳೂರು.

ಮುಡಾ ಅವಿಶ್ವಾಸ ಪ್ರಾಧಿಕಾರವಾಗಿದೆ

ಮಾನ್ಯರೆ,

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಮುಡಾ), ಕೆಲವು ಅಧಿಕಾರಿಗಳು ಮತ್ತು ನೌಕರರು ಬ್ಯಾಂಕ್‌ನೊಂದಿಗೆ ಶಾಮೀಲಾಗಿ, ಬ್ಯಾಂಕ್ ಸೀಲ್ ಮತ್ತು ಚಲನ್‌ಗಳನ್ನು ದುರುಪಯೋಗಪಡಿಸಿಕೊಂಡು, ನಿವೇಶನದಾರರಿಗೆ ಸಾವಿರಾರು ಕೋಟಿ ರೂಪಾಯಿ ವಂಚನೆ ಆಗಿರುವುದಾಗಿ ಮಾಧ್ಯಮಗಳು ವರದಿ ಮಾಡಿವೆ.

ಹಿಂದೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವನ್ನು ನಗರ ವಿಶ್ವಸ್ಥ ಮಂಡಳಿ ಎಂದು ಕರೆಯಲಾಗುತ್ತಿತ್ತು ಆದರೆ ಈಗ ನಗರಾಭಿವೃದ್ಧಿ ಅವಿಶ್ವಾಸ ಪ್ರಾಧಿಕಾರ ಎನ್ನುವಂತಾಗಿದೆ, ಈಗಾಗಲೇ ಮಂಜೂರಾಗಿರುವ ಒಂದು ಸಾವಿರ ನಿವೇಶನಗಳನ್ನು ಪ್ರಾಧಿಕಾರ ರದ್ದುಮಾಡಿ ಆದೇಶ ಹೊರಡಿಸಿದೆ.

ಕೆಲವು ಮೂಡಾ ಅಧಿಕಾರಿಗಳು ಹೇಳುವಂತೆ, ಇದಕ್ಕಿಂತಲೂ ಪ್ರಾಧಿಕಾರದಲ್ಲಿ ನಡೆದಿರುವ ದೊಡ್ಡ ಪ್ರಮಾಣದ ಹಗರಣವೆಂದರೆ, ಬದಲಿ ನಿವೇಶನಗಳ ಮಂಜೂರಾತಿಯಲ್ಲಿ ಸಾವಿರಾರು ಕೋಟಿ ರೂಪಾಯಿಗಳ ಭ್ರಷ್ಟಾಚಾರ, ಅರ್ಜಿದಾರರಿಗೆ ರಾಜೀವ್‌ನಗರದಲ್ಲಿ ಮಂಜೂರಾದ ನಿವೇಶನಕ್ಕೆ ಬದಲಾಗಿ ವಿಜಯ ನಗರದಲ್ಲಿ ಬದಲಿ ನಿವೇಶನ ನೀಡುವುದು, ರಾಜೀವ್‌ನಗರದ ನಿವೇಶನದ ಬೆಲೆಗಿಂತ, ನಾಲ್ಕು ಪಟ್ಟು ಹೆಚ್ಚು ವಿಜಯ ನಗರದಲ್ಲಿದೆ, ಹೀಗೆ ಬದಲಿ ನಿವೇಶನ ನೀಡಿದಾಗ, ಮೂಲ ನಿವೇಶನಗಳು ಏನಾದವು? ಈ ಬಗ್ಗೆ ಸರ್ಕಾರ ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ.

– ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

ಮೈಸೂರಿಗೆ ಸಬ್ ವೇ ಅತ್ಯಂತ ಅಗತ್ಯ

ಮಾನ್ಯರೆ,

ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿರುವ ಕೇಂದ್ರ ಬಸ್ ನಿಲ್ದಾಣಕ್ಕೆ ಒಂದು ಕಡೆಯಿಂದ ಬಸ್‌ಗಳು ಒಳಗೆ ಬಂದು ಮತ್ತೊಂದು ಕಡೆ ಹೊರಡುವ ರಸ್ತೆಯ ಮುಂಭಾಗದಲ್ಲಿ ಕನಿಷ್ಠ ಟ್ರಾಫಿಕ್ ಪೊಲೀಸ್ ಚೌಕಿಗಳಿಲ್ಲದೆ ಟ್ರಾಫಿಕ್ ಪೊಲೀಸರು ಬಿಸಿಲಿನಲ್ಲಿ ಕರ್ತವ್ಯ ನಿರ್ವಹಿಸುವಂತಾಗಿದೆ. ಮತ್ತೆ ಈ ಬಸ್ ನಿಲ್ದಾಣಕ್ಕೆ ರಾಜ್ಯ ಮತ್ತು ಅಂತರ ರಾಜ್ಯದ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಬರುವುದರಿಂದ ಬಸ್ ನಿಲ್ದಾಣದಿಂದ ಹೊರಕ್ಕೆ ಬರುವಾಗ ರಸ್ತೆಯಲ್ಲಿ ಸಿಗ್ನಲ್ ಲೈಟ್ ಸಹ ಇಲ್ಲದಿರುವುದರಿಂದ ಬಸ್‌ಗಳು, ದ್ವಿಚಕ್ರ ಮತ್ತು ನಾಲ್ಕು ಚಕ್ರದ ವಾಹನಗಳು ರಸ್ತೆಯ ನಿಯಮವನ್ನು ಪಾಲಿಸದೆ ಬೇಜವಾಬ್ದಾರಿತನದಿಂದ ಅಡ್ಡಾದಿಡ್ಡಿ ಚಲಾಯಿಸುವುದರಿಂದ ಮತ್ತು ಆಟೋ ನಿಲ್ದಾಣ ಇಲ್ಲದ ಸ್ಥಳಗಳಲ್ಲಿ ಆಟೋಗಳು ಹೆಚ್ಚಾಗಿ ನಿಲ್ಲುವುದರಿಂದ ಅಪಘಾತ ಮತ್ತು ಇನ್ನಿತರ ಸಮಸ್ಯೆಗಳು ಆಗುವ ಸಂಭವ ಹೆಚ್ಚು, ನಿಲ್ದಾಣದಿಂದ ಹೊರಕ್ಕೆ ಮತ್ತು ಒಳಗೆ ಉಪಯೋಗಿಸುವ ಸಾರ್ವಜನಿಕರಿಗೆ ಅಂಡರ್ ಗ್ರೌಂಡ್ (ಸಬ್ ವೇ) ಅಥವಾ ರಾಜಧಾನಿ ಬೆಂಗಳೂರಿನಲ್ಲಿ ನಿರ್ಮಿಸಿರುವಂತೆ ಕಬ್ಬಿಣ ಮೆಟ್ಟಿಲುಗಳನ್ನು ನಿರ್ಮಿಸಿ ಪಾದಚಾರಿ ಸಾರ್ವಜನಿಕರು ಈ ರಸ್ತೆಯಿಂದ ಆ ಕಡೆ ರಸ್ತೆಗೆ ಅಲ್ಲಿಂದ ಇಲ್ಲಿಗೆ ಬರುವುದಕ್ಕೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಶಾಸಕರು, ಸಾರಿಗೆ ಸಚಿವರು ಸೇರಿದಂತೆ ಮೈಸೂರು ಕೇಂದ್ರ ಬಸ್ ನಿಲ್ದಾಣದ ಅಧಿಕಾರಿಗಳು ಈಸ್ಥಳಗಳನ್ನು ಪರಿಶೀಲಿಸಿ ಸಬ್ ವೇ ನಿರ್ಮಿಸಲು ಕ್ರಮ ಕೈಗೊಳ್ಳುವಂತೆ ಮನವಿ.


– ನಾಗೇಶ್, ಮಾನಸಗಂಗೋತ್ರಿ, ಮೈಸೂರು.



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866-77284

ಬೆರಗು

ಬದುಕೊಂದು ಸುಂದರ ಲೋಕ; ಅದರೊಳಗೆ ದ್ವೀಪ ಅನೇಕ !



> "ಸಂಬಂಧಗಳಲ್ಲಿ ಹೋಲಿಕೆ ಹಾಗೂ ಸ್ಪರ್ಧಾ ಮನೋಭಾವ ಹೆಚ್ಚಾದ ಕಾರಣ ಹತ್ತಿರವಿದ್ದರೂ ದೂರ ನಿಲ್ಲುವ ಪರಿಸ್ಥಿತಿ ನಿರ್ಮಾಣವಾಗಿದೆ. ಸಹೋದರ-ಸಹೋದರಿಯರಲ್ಲಿ ಸಹಿಷ್ಣುತೆ ಕಡಿಮೆಯಾಗಿದೆ. ಒಂದೇ ಮನೆಯಲ್ಲಿ ವಾಸಿಸುತ್ತಿದ್ದರೂ ತಮ್ಮ ತಮ್ಮ ಕೊಠಡಿ ಎಂಬ ದ್ವೀಪದಲ್ಲಿ ಬಂಧಿಯಾಗಿ ಸಂತೋಷದಷ್ಟೇ ಯಾತನೆಯನ್ನೂ ಅನುಭವಿಸುತ್ತಿರುವುದನ್ನು ಕಾಣಬಹುದು. ಇಂದು ವಿಭಕ್ತ ಕುಟುಂಬದಲ್ಲಿ ಇರುವ ಮೂರು ನಾಲ್ಕು ಜನರೇ ಒಂದೊಂದು ದಿಕ್ಕಿನಲ್ಲಿ ಮುಖ ಮಾಡಿ ಬದುಕುತ್ತಿರುವುದು ವಿಶೇಷ ಎನಿಸುತ್ತಿಲ್ಲ. ಮನುಷ್ಯ ಮನಸ್ಸು ಮಾಡಿದರೆ ತನ್ನ ಬದುಕನ್ನು ಸ್ವರ್ಗಮಯವಾಗಿಸಿ ಬಿಡಬಹುದು. ಸ್ವರ್ಗಸದೃಶವಾದ ಬದುಕನ್ನು ನರಕಯಾತನೆ ಮಾಡಿಕೊಂಡು ನರಳುವುದು ಅನೇಕರಿಗೆ ಒಂದು ವ್ಯಾಧಿಯಾಗಿದೆ. ಇಲ್ಲಸಲ್ಲದ ವಿಷಯಗಳಿಗೆ ಇರುವ ನೆಮ್ಮದಿ ಕಳೆದುಕೊಂಡು, ನೆಮ್ಮದಿ ಅರಸಿ ಗುಡಿಗೋಪುರಗಳಿಗೆ ಅಲೆಯುತ್ತಿರುವುದು ಹಾಸ್ಯಾಸ್ಪದ ಎನಿಸುತ್ತದೆ. ಮನೆಯ ಒಬ್ಬ ಸದಸ್ಯನ ಪ್ರಯತ್ನದಿಂದ ಮನಸ್ಸು ಮಾಡಿದರೆ ಮನೆಯನ್ನು ಮಂತ್ರಾಲಯವನ್ನಾಗಿ ಮಾಡಬಹುದು, ಅದೇ ಸದಸ್ಯ ಮನಸ್ಸು ಕೆಡಿಸಿಕೊಂಡರೆ ಅದನ್ನೇ ಸ್ಮಶಾನವಾಗಿಸಿಬಿಡಬಹುದು.

ಮನುಷ್ಯ ಮೂಲಭೂತವಾಗಿ ಸಂಘಜೀವಿ. ಹುಟ್ಟಿದಾಗಿನಿಂದ ಸಾಯುವವರೆಗೂ ಸಂಬಂಧಗಳ ಸಂಕೋಲೆಯಲ್ಲಿಯೇ ಬದುಕ ಬೇಕಾದುದು ಅನಿವಾರ್ಯವಾಗಿರುತ್ತದೆ. ಯಾರ ಅಗತ್ಯವೂ ನನಗೆ ಬೇಕಿಲ್ಲ ಎಂದು ಯೌವನಾವಸ್ಥೆಯಲ್ಲಿ ಹೇಳಬಹುದಾದ ಮನುಷ್ಯ, ಬಾಲ್ಯದಿಂದ ಯೌವನದವರೆಗೆ ಹತ್ತಾರು ಜನರ ಮೇಲೆ ಅವಲಂಭಿತರಾಗಿಯೇ ಇರಬೇಕಾಗುತ್ತದೆ. ಅಷ್ಟೇ ಅಲ್ಲ ಜೀವನದ ಸಂಧ್ಯಾಕಾಲದಲ್ಲಿಯೂ ಪರಾವಲಂಭನೆ ಅಗತ್ಯವಾಗುತ್ತದೆ. ಅಷ್ಟಾಗಿಯೂ ಬಂಧು–ಬಳಗ, ಸ್ನೇಹ–ಸಂಬಂಧದ ವಿಚಾರದಲ್ಲಿ ಒಬ್ಬೊಬ್ಬರದು ಒಂದೊಂದು ರೀತಿಯ ಮನೋಭಾವವಿದೆ. ಕೆಲವರು ಸಂಬಂಧಗಳಿಗೆ ಬೆಲೆ ಕೊಟ್ಟು, ಸಮಯ ಕೊಟ್ಟು, ಕಷ್ಟಸುಖಗಳಲ್ಲಿ ಭಾಗಿಯಾಗಿ 'ಕೂಡಿ ಬಾಳಿದರೆ ಸ್ವರ್ಗಸುಖ' ಎಂದು ಭಾವಿಸಿದರೆ, ಮತ್ತೆ ಕೆಲವರು 'ಯಾರಿಂದಲೂ ಏನೂ ಆಗಬೇಕಿಲ್ಲ, ನನ್ನ ಬದುಕು ನನ್ನದು, ನನಗೆ ಯಾರ ನೆರವು ಬೇಕಿಲ್ಲ, ನನ್ನದೇ ಪ್ರಪಂಚದಲ್ಲಿ ಸ್ವತಂತ್ರವಾಗಿ ತಿರುಗಾಡುತ್ತೇನೆ' ಎಂದು ಭಾವಿಸುತ್ತಾರೆ. ಕೆಲವರು ಕಾಗೆಗಳ ಹಾಗೆ ತನ್ನ ಪರಿವಾರದೊಂದಿಗೆ ನಲಿವನ್ನು ಕಂಡರೆ, ಮತ್ತೆ ಕೆಲವರು ಗೂಬೆಗಳ ರೀತಿ ಯಾರೊಂದಿಗೂ ಬೆರೆಯದೇ ಒಂಟಿ ಬದುಕಿನಲ್ಲಿ ಆನಂದವನ್ನು ಕಂಡುಕೊಂಡಿರುತ್ತಾರೆ. ಇಲ್ಲಿ ಯಾರು ಸರಿ ಯಾರು ತಪ್ಪು ಎಂದು ಹೇಳಲಾಗದು. ಸ್ನೇಹ ಸಂಬಂಧಗಳು ಒಮ್ಮೊಮ್ಮೆ ಜೇನು ಸವಿದಂತೆ ಅನುಭವ ನೀಡಿದರೆ, ಮತ್ತೆ ಕೆಲವೊಮ್ಮೆ ಜೇನು ಹುಳು ಕಚ್ಚಿದ ಅನುಭವವನ್ನೂ ನೀಡಿರುತ್ತವೆ. ಹಾಗಾಗಿ ಒಬ್ಬೊಬ್ಬರು ಒಂದೊಂದು ರೀತಿ ಸ್ನೇಹ ಸಂಬಂಧಗಳ ಕುರಿತು ಅಭಿಪ್ರಾಯ ಹೊಂದಿರುತ್ತಾರೆ.

ಸಂಬಂಧಗಳಲ್ಲಿ ಹೋಲಿಕೆ ಹಾಗೂ ಸ್ಪರ್ಧಾ ಮನೋಭಾವ ಹೆಚ್ಚಾದ ಕಾರಣ ಹತ್ತಿರವಿದ್ದರೂ ದೂರ ನಿಲ್ಲುವ ಪರಿಸ್ಥಿತಿ ನಿರ್ಮಾಣವಾಗಿದೆ. ಒಂದೇ ಮನೆಯಲ್ಲಿ ವಾಸಿಸುತ್ತಿದ್ದರೂ ತಮ್ಮ ತಮ್ಮ ಕೊಠಡಿ ಎಂಬ ದ್ವೀಪದಲ್ಲಿ ಬಂಧಿಯಾಗಿ ಸಂತೋಷದಷ್ಟೇ ಯಾತನೆಯನ್ನೂ ಅನುಭವಿಸುತ್ತಿರುವುದನ್ನು ಕಾಣಬಹುದು. ಇಂದು ವಿಭಕ್ತ ಕುಟುಂಬದಲ್ಲಿ ಇರುವ ಮೂರು ನಾಲ್ಕು ಜನರೇ ಒಂದೊಂದು ದಿಕ್ಕಿನಲ್ಲಿ ಮುಖ ಮಾಡಿ ಬದುಕುತ್ತಿರುವುದು ವಿಶೇಷ ಎನಿಸುತ್ತಿಲ್ಲ. ಮನುಷ್ಯ ಮನಸ್ಸು ಮಾಡಿದರೆ ತನ್ನ ಬದುಕನ್ನು ಸ್ವರ್ಗಮಯವಾಗಿಸಿಬಿಡಬಹುದು. ಸ್ವರ್ಗಸದೃಶವಾದ ಬದುಕನ್ನು ನರಕಯಾತನೆ ಮಾಡಿಕೊಂಡು ನರಳುವುದು ಅನೇಕರಿಗೆ ಒಂದು ವ್ಯಾಧಿಯಾಗಿದೆ. ಇಲ್ಲಸಲ್ಲದ ವಿಷಯಗಳಿಗೆ ಇರುವ ನೆಮ್ಮದಿ ಕಳೆದುಕೊಂಡು, ನೆಮ್ಮದಿ ಅರಸಿ ಗುಡಿ–ಗೋಪುರಗಳಿಗೆ ಅಲೆಯುತ್ತಿರುವುದು ಹಾಸ್ಯಾಸ್ಪದ ಎನಿಸುತ್ತದೆ. ಮನೆಯ ಒಬ್ಬ ಸದಸ್ಯನ ಪ್ರಯತ್ನದಿಂದ ಮನಸ್ಸು ಮಾಡಿದರೆ ಮನೆಯನ್ನು ಮಂತ್ರಾಲಯವನ್ನಾಗಿ ಮಾಡಬಹುದು, ಅದೇ ಸದಸ್ಯ ಮನಸ್ಸು ಕೆಡಿಸಿಕೊಂಡರೆ ಅದನ್ನೇ ಸ್ಮಶಾನವಾಗಿಸಿಬಿಡಬಹುದು.

ಇಂದಿನ ಆಧುನಿಕ ಯುಗದಲ್ಲಿ ವಿಭಕ್ತ ಕುಟುಂಬದಲ್ಲೂ ಸಹ ಸಂತೋಷ ಮಾಯವಾಗಿದೆ. ಮನೆಯಲ್ಲಿನ ಮಾಯಾಪೆಟ್ಟಿಗೆಗಳಾದ ಟಿ.ವಿ. ಹಾಗೂ ಮೊಬೈಲ್‌ನಿಂದ ಸದಸ್ಯರು ಮನೆಯ ಒಳಗೇ ಇದ್ದರೂ ಮನೆಯ ಹೊರಗಿನ ವ್ಯಕ್ತಿಗಳೊಂದಿಗೆ ಸದಾ ಸಂಪರ್ಕದಲ್ಲಿದ್ದು, ದೈಹಿಕವಾಗಿ ಹತ್ತಿರವಿದ್ದರೂ ಮಾನಸಿಕವಾಗಿ ದೂರವಿರುವ ಪರಿಸ್ಥಿತಿ ನಿರ್ಮಾಣವಾಗಿದೆ. ಮನೆಯ ಸದಸ್ಯರು ಒಟ್ಟಿಗೆ ಕುಳಿತು ಟಿ.ವಿ.ನೋಡುವ, ಊಟ–ತಿಂಡಿ ಮಾಡುವ ಪರಿಪಾಠ ಕ್ರಮೇಣ ಮರೆಯಾಗುತ್ತಿದೆ. ಒಂದೇ ಮನೆಯಲ್ಲಿ ಹಲವು ಕಿರುಮನೆಗಳು ಸೃಷ್ಟಿಯಾಗಿವೆ. ಪ್ರತಿ ಕೊಠಡಿಗೂ ಟಿ.ವಿ. ಹಾಕಿಸುವ, ಇಲ್ಲವೇ ಅವರದೇ ಕೊಠಡಿಗಳಲ್ಲಿ ಮೊಬೈಲ್‌ನಲ್ಲಿ ಮುಳುಗಿ ಹೋಗಿರುವ ದೃಶ್ಯಗಳು ಸಾಮಾನ್ಯವಾಗಿವೆ. ಮಕ್ಕಳನ್ನು ಹಾಸ್ಟೆಲ್‌ಗಳಲ್ಲಿ ಇಟ್ಟು ಓದಿಸುವಷ್ಟೇ ಸಹಜವಾಗಿ ಹಿರಿಯರನ್ನು ವೃದ್ಧಾಶ್ರಮಗಳಲ್ಲಿ ಇರಿಸಲಾಗುತ್ತಿರುವುದು ಸಹಜವಾಗಿಬಿಟ್ಟಿದೆ. ಇಂದು ಸಂಬಂಧಗಳಿಗೆ ಸಮಯ ಕೊಡಲು ಯಾರಿಗೂ ಸಂಯಮವಿಲ್ಲ. ಆದರೆ ಹಣ ಬೇಕಾದರೂ ಕೊಟ್ಟು ಬಿಟ್ಟಾರು. ದಂಪತಿಗಳ ಬಾಂಧವ್ಯವೂ ಸಹ ಬಹಳ ಸಂಕೀರ್ಣವಾಗುತ್ತಿದೆ. ಹಿಂದೆ ಮದುವೆಯಾಗುವುದು ಸುಲಭವಿತ್ತು, ವಿಚ್ಛೇದನ ಪಡೆದುಕೊಳ್ಳುವುದು ಕಷ್ಟವಾಗುತ್ತಿತ್ತು. ಆದರೆ ಇಂದು ಮದುವೆಯಾಗುವುದು ಅಷ್ಟು ಸುಲಭದ ಮಾತಲ್ಲ. ಸೂಕ್ತ ವಧು/ವರನ ಆಯ್ಕೆಯಲ್ಲಿ ಅನೇಕ ಹೊಸ ಮಾನದಂಡಗಳು ಸೃಷ್ಟಿಯಾಗಿವೆ. ಆದರೆ ವಿಚ್ಛೇದನವನ್ನು ಬಹಳ ಸುಲಭವಾಗಿ ಪಡೆಯುವ ಸಾಧ್ಯತೆ ಇದೆ.

ಮನುಷ್ಯ ಸಹಜವಾಗಿ ಬದುಕಿದರೆ ಇಡೀ ಬದುಕು ಸಹಜವಾಗಿಯೇ ಕಾಣುತ್ತದೆ. ಮನುಷ್ಯನಲ್ಲಿರುವ ಸ್ವಾರ್ಥ, ಲೋಭ, ಮದ, ಕ್ರೋಧ, ಮತ್ಸರ ಇವುಗಳಿಂದ ಅನೇಕರು ಸಹಜವಾಗಿ ಬದುಕುವುದರಿಂದ ದೂರವಿರುತ್ತಾರೆ. ಈರ್ಷೆ ಒಂದು ಮನೋರೋಗವಾಗಿ ಕಾಡುತ್ತಿರುತ್ತದೆ. ಸಹಿಷ್ಣುತೆ ಇಲ್ಲದೆ, ಸಂಕುಚಿತ ಮನೋಭಾವದಿಂದ ವಿಕೃತಾನಂದ ಹೊಂದುವ ಜನರು ಅನೇಕರಿದ್ದಾರೆ. ತಮ್ಮ ಬದುಕು ಮಾತ್ರ ಸುಂದರವಾಗಿರಬೇಕು, ಅನ್ಯರದು ಹಾಳಾಗಬೇಕು ಎಂದು ಭಾವಿಸುವ, ಹಾರೈಸುವ ಮಂದಿ ಅನೇಕರು ನಮ್ಮ ಸುತ್ತಲೇ ಇರುತ್ತಾರೆ. ತಮ್ಮ ಸ್ನೇಹಿತರು ಹಾಗೂ ಬಂಧುಗಳ ಏಳಿಗೆಯನ್ನು ಸಹಿಸದೆ ಅವರಿಗೆ ಕೆಟ್ಟದ್ದನ್ನು ಬಯಸುವವರೂ ಅನೇಕರಿದ್ದಾರೆ. ಇನ್ನೂ ಕೆಲವರು ಒಂದು ಹೆಜ್ಜೆ ಮುಂದೆ ಹೋಗಿ ವಾಮಾಚಾರದ ಮೂಲಕ ತಮ್ಮ ಹತ್ತಿರದವರಿಗೆ ತೊಂದರೆ ಕೊಟ್ಟು ಖುಷಿ ಪಡುವ ವಿಘ್ನಸಂತೋಷಿಗಳು ಇಲ್ಲದಿಲ್ಲ. ಅನ್ಯರ ಖುಷಿಯಲ್ಲಿ ತಮ್ಮ ಖುಷಿ ಕಂಡುಕೊಳ್ಳುವ ಒಳ್ಳೆಯ ಮನಸ್ಸು ಇಲ್ಲದೇ ಇರುವುದು ಇದಕ್ಕೆ ಕಾರಣ. ಅನ್ಯರ ಸೋಲನ್ನು ಸಂಭ್ರಮಿಸುವ ವಿಕೃತ ಮನಸ್ಸಿನವರು ನಮ್ಮೊಟ್ಟಿಗೆ ಒಳ್ಳೆಯತನದ ಮುಖವಾಡ ಧರಿಸಿ ನಗುನಗುತ್ತಲೇ ಇರುತ್ತಾರೆ. ಒಳ್ಳೆಯತ ಎಲ್ಲರಿಗೂ ಸಹ್ಯವಾಗುವುದಿಲ್ಲ, ಕೇವಲ ಒಳ್ಳೆಯವರಿಗೆ ಅದು ಚೆನ್ನಾಗಿ ಕಾಣುತ್ತದೆ, ದುಷ್ಟರಿಗೆ ಒಳ್ಳೆಯತನವನ್ನು ಸಹಿಸುವಷ್ಟು ವಿಶಾಲ ಹೃದಯವಿರುವುದಿಲ್ಲ, ಅವರಿಗೆ ದುಷ್ಟರೇ ಇಷ್ಟವಾಗುತ್ತಾರೆ.

'ಸಜ್ಜನರ ಸಂಗವದು ಹೆಜ್ಜೇನ ಸವಿದಂತೆ, ದುರ್ಜನರ ಸಂಗದೊಡನಾಟ ಬಚ್ಚಲಿನ ರೊಚ್ಚಿನಂತಿಕ್ಕು ಸರ್ವಜ್ಞ' ಎಂದು ಸರ್ವಜ್ಞರು ತಮ್ಮ ತ್ರಿಪದಿಯಲ್ಲಿ ಸರಳವಾಗಿ ಹಾಗೂ ನೇರವಾಗಿ ಸಜ್ಜನ ಹಾಗೂ ದುರ್ಜನರ ಗುಣವನ್ನು ವರ್ಣಿಸಿದ್ದಾರೆ. ಮನುಷ್ಯ ತನ್ನ ಸಂಗಡಿಗರನ್ನು ಆಯ್ಕೆ ಮಾಡುವಾಗ ಎಚ್ಚರ ವಹಿಸಬೇಕು. 'ಶತೃಗಳು ಎಲ್ಲಿದ್ದಾರೆ ಎಂದರೆ, ಪಕ್ಕದಲ್ಲಿಯೇ ಇದ್ದಾರೆ' ಎಂಬ ಹಿಂದಿಯ ನಾಣ್ಣುಡಿಯಂತೆ ಕೆಲವರು ಮಿತ್ರರಂತೆ ಕಂಡರೂ ಹಿತಶತೃಗಳಾಗಿರುತ್ತಾರೆ. ಎಷ್ಟೇ ಆಪ್ತತೆ ತೋರಿದರೂ ಒಳಗೊಳಗೆ ಅಸಮಾಧಾನದಿಂದ ಕುದಿಯುತ್ತಿರುತ್ತಾರೆ. ತಮ್ಮ ಹತ್ತಿರದವರು ತಮಗಿಂದ ಆಸ್ತಿ ಅಂತಸ್ತಿನಲ್ಲಿ ಮೇಲೇರಿದರು ಎಂದರೆ ವೃಥಾ ಅವರು ತಮ್ಮ ನೆಮ್ಮದಿಯನ್ನು ಹಾಳು ಮಾಡಿಕೊಳ್ಳುತ್ತಾರೆ. ಪಕ್ಕದ ಮನೆಯವರು ಬ್ರಾಂಡೆಡ್ ಕಾರು ಕೊಂಡರೆ ಸಹಿಸಕೊಳ್ಳದೆ ಅವರೊಂದಿಗೆ ಕಾಲು ಕೆರೆದು ಜಗಳ ಮಾಡುವವರು ಇಲ್ಲದಿಲ್ಲ. ಜೀವನದಲ್ಲಿ ನಾವು ಏಳಿಗೆ ಹೊಂದಲು ಏನು ಮಾಡಬಹುದು ಎಂದು ಆಲೋಚಿಸುವ ಬದಲು ಏಳಿಗೆ ಹೊಂದಿರುವವರ ಕಾಲನ್ನು ಹೇಗೆ ಎಳೆಯಬೇಕು ಎಂದು ಚಿಂತಿಸುತ್ತಿರುತ್ತಾರೆ. ಇಂತಹ ಹಿತಶತೃಗಳ ಸಂಚಿಗೆ ಬಲಿಯಾಗಿ ಅನೇಕ ಕುಟುಂಬಗಳು ದುಸ್ಥಿತಿಯನ್ನು ತಲುಪಿವೆ. ನಂಬಿಕೆ ಎಂಬುದು ಮರೀಚಿಕೆ ಎಂಬುದನ್ನು ಅವರು ನಿರೂಪಿಸಿಬಿಡುತ್ತಾರೆ. ತಮ್ಮವರಿಂದ ಅನೇಕ ನೆರವನ್ನು ಪಡೆದಿದ್ದರೂ, 'ಉಪ್ಪು ತಿಂದ ಮನೆಗೆ ದ್ರೋಹ ಬಗೆಯುವಂತೆ, ಉಂಡ ಮನೆಯ ಗಳ ಎಣಿಸುವಂತೆ' ಅನ್ನದಾತರ ಅಪಯಶಸ್ಸಿಗಾಗಿ ಹಾತೊರೆಯುತ್ತಿರುತ್ತಾರೆ.

ಜನರ ಆದ್ಯತೆಗಳೇ ವಿಚಿತ್ರವಾಗಿರುತ್ತದೆ. ಹಣ ಹಾಗೂ ಗುಣದ ವಿಚಾರದಲ್ಲಿ ವಿಭಿನ್ನವಾದ ಮನೋಭಾವ ಹೊಂದಿರುತ್ತಾರೆ. ಹಣದಿಂದ ಎಲ್ಲವನ್ನೂ ಖರೀದಿಸಬಹುದು ಎಂದು ಹಣವಂತರು ಭಾವಿಸಿದರೆ, ಹಣದಿಂದ ಗುಣವಂತರನ್ನು ಕೊಳ್ಳಲಾಗದು ಎಂದು ಗುಣವಂತರು ಭಾವಿಸುತ್ತಾರೆ. ಹಣವಿದ್ದರೆ ಗುಣ ಗೌಣ ಎಂದು ಒಂದು ಗುಂಪಿನವರು ವಾದಿಸಿದರೆ, ಗುಣಕ್ಕೆ ಬೆಲೆಯನ್ನೇ ಕಟ್ಟಲಾಗದು ಎಂದು ಮತ್ತೊಂದು ವರ್ಗ ಹೇಳುತ್ತದೆ. ಏನೇ ಆಗಲಿ ಮನುಷ್ಯನ ವರ್ತನೆಗೆ ಹಣ ಮುಖ್ಯ ನಿರ್ಣಾಯಕ ಅಂಶವಾಗುತ್ತದೆ. ಹಣದ ವಿಚಾರಕ್ಕೆ ಅನೇಕ ರಕ್ತ ಸಂಬಂಧಗಳು ಕ್ಷಣ ಮಾತ್ರದಲ್ಲಿ ಮುರಿದು ಬಿದ್ದ ಉದಾಹರಣೆಗಳು ಅಗಣಿತವಾಗಿವೆ. ಹುಟ್ಟುತ್ತಾ ಅಣ್ಣ–ತಮ್ಮ ಬೆಳೆಯುತ್ತಾ ದಾಯಾದಿಗಳು ಎಂಬ ಮಾತಿನಂತೆ ಪ್ರೀತಿ ವಿಶ್ವಾಸ ಹಂಚಿಕೊಂಡು ಬದುಕುತ್ತಿದ್ದ ಸಹೋದರ ಸಹೋದರಿಯರು ಆಸ್ತಿ ವಿಚಾರಕ್ಕೆ ಒಬ್ಬರ ಮುಖ ಒಬ್ಬರು ನೋಡದಷ್ಟು ದೂರಾಗಿಬಿಡುವುದು ದುರದೃಷ್ಟಕರ. ಜೇನಿನಗೂಡಿನಂತೆ ಒಂದೇ ಮನೆಯಲ್ಲಿ ಒಗ್ಗಾಟ್ಟಾಗಿ ನೋವು ನಲಿವುಗಳನ್ನು ಹಂಚಿಕೊಂಡು ನಂದನವನ ಸೃಷ್ಟಿಮಾಡಿದ ಕುಟುಂಬದ ಸದಸ್ಯರು ಆಸ್ತಿ ವಿಚಾರಕ್ಕೆ ಅದೇ ನಂದನವನವನ್ನು ರಣಾಂಗಣ ಮಾಡಿ ಕುರುಕ್ಷೇತ್ರ ಯುದ್ಧ ಮಾಡಿ ಬಿಡುವುದು ಮಾತ್ರ ವಿಷಾದನೀಯ.

ಬಾಲ್ಯದಲ್ಲಿ ಒಂದೇ ತಟ್ಟೆಯಲ್ಲಿ ಅನ್ನ ಹಂಚಿಕೊಂಡು ಖುಷಿ ಪಡುತ್ತಿದ್ದ ಸಹೋದರ, ಸಹೋದರಿಯರು ಬೆಳೆದ ಮೇಲೆ ಮನಸ್ತಾಪ ಮಾಡಿಕೊಂಡು ಒಂದೇ ಕೋರ್ಟಿನಲ್ಲಿ ಆಸ್ತಿ ಹಂಚಿಕೆಗೋಸ್ಕರ ಹೋರಾಡುವುದು ವಿಡಂಬನೆ ಎನಿಸುತ್ತದೆ. ಸೋತು ಗೆಲ್ಲುವುದು ಒಬ್ಬರಿಗೂ ಬೇಕಿರುವುದಿಲ್ಲ. ಪ್ರತಿಷ್ಠೆಗೆ ಬಿದ್ದು ಒಂದು ಅಡಿ ಜಮೀನಿನ ವಿಚಾರಕ್ಕೆ ಹಲವು ದಶಕಗಳ ಸಂಬಂಧಗಳನ್ನು ಕಿತ್ತು ಬೀಸಾಕಿಬಿಡುವುದು ಆಶ್ಚರ್ಯ ಎನಿಸಿದರೂ ಸತ್ಯವಾಗಿದೆ. ಇದೇ ಕಾರಣಕ್ಕೆ ಒಂದು ಕಾಲದಲ್ಲಿ ಅವಿಭಕ್ತ ಕುಟುಂಬದಲ್ಲಿ ಸಂತೋಷ ಕಾಣುತ್ತಿದ್ದವರು ಇಂದು ವಿಭಕ್ತ ಕುಟುಂಬದಲ್ಲಿ ಸಂತೋಷ ಹುಡುಕಿ ಹೊರಡುತ್ತಿದ್ದಾರೆ. ಸಂಬಂಧಗಳು ಮೌಲ್ಯವನ್ನು ಕಳೆದುಕೊಂಡು ಚಿಕ್ಕಪ್ಪ, ದೊಡ್ಡಪ್ಪ, ಸೋದರತ್ತೆ, ಸೋದರ ಮಾವ ಇವೆಲ್ಲಾ ಸಂಬಂಧಗಳು ಕೇವಲ ಹೆಸರಿಗೆ ಮಾತ್ರ ಇದ್ದು, ಸಂಬಂಧಗಳು ಜೀವಂತಿಕೆಯನ್ನು ಕಳೆದುಕೊಂಡಿವೆ.

ಮನುಷ್ಯನಿಗೆ ಕೆಟ್ಟದ್ದನ್ನು ಗುರುತಿಸಿ ಪ್ರಚಾರ ಮಾಡುವಷ್ಟು ಒಳ್ಳೆಯದನ್ನು ಗುರುತಿಸಿ ನಾಲ್ಕು ಜನರಿಗೆ ತಿಳಿಸುವಷ್ಟು ಹೃದಯವಂತಿಕೆ ಇರುವುದಿಲ್ಲ. ಪರಿಚಿತರ ಯಶಸ್ಸು ಅವರ ಬಾಯಲ್ಲಿ ಐಸ್‌ಕ್ರೀಂನಂತೆ ಬೇಗ ಕರಗಿ ಹೋಗುತ್ತದೆ, ಆದರೆ ಪರಿಚಿತರ ಸೋಲು ಮಾತ್ರ ಚ್ಯುಯಿಂಗ್ ಗಮ್‌ನಂತೆ ಅದರ ಸ್ವಾದ ಹೋದರೂ ಮತ್ತೆ ಮತ್ತೆ ಜಗಿದು ಆನಂದ ಪಡುತ್ತಾರೆ. ಎಲ್ಲರ ಬದುಕಿನಲ್ಲಿ ಏರುಪೇರುಗಳಿರುತ್ತವೆ, ಸೋಲು–ಗೆಲುವುಗಳಿರುತ್ತವೆ. ಇಂದು ಅನ್ಯರನ್ನು ಆಡಿಕೊಂಡು ಬದುಕುವವರ ಮನೆಯಲ್ಲಿ ಮುಂದೆ ಏನು ಅನಾಹುತಗಳಾಗುತ್ತವೆಯೋ ಯಾರಿಗೂ ಗೊತ್ತಿಲ್ಲ. ತಮ್ಮ ಮನೆಯಲ್ಲಿಯೇ ಒಂದು ಕಾದಂಬರಿಗೆ ಆಗುವಷ್ಟು ಕಥೆ ಇದ್ದರೂ, ಬೇರೆಯವರ ಸಣ್ಣ ಕಥೆಯನ್ನು ಹೆಚ್ಚಾಗಿ ಬಿಂಬಿಸುತ್ತಾರೆ. ಇವೆಲ್ಲವನ್ನು ಬಿಟ್ಟು ನಾವು ಬದುಕುವ ಪರಿಸರದ ಜನರೊಂದಿಗೆ, ಬಂಧುಬಳಗದೊಂದಿಗೆ ಸಾಮರಸ್ಯ ಬೆಳೆಸಿಕೊಂಡು, ಸಹಕಾರ ಮನೋಭಾವದಿಂದ ಬದುಕಿದರೆ ಜೀವನ ರಸಮಯವಾಗಿರುತ್ತದೆ, ಪ್ರತಿಷ್ಠೆಗೆ ಬಿದ್ದು ಹೋರಾಟ ಮಾಡಿದರೆ ಜೀವನದಲ್ಲಿ ರಸ ಮಾಯವಾಗಿರುತ್ತದೆ. ಏನಂತೀರಿ?

ಪದ ತಾಂಬೂಲ :

ನಾನು ಎಂದರೆ ನರಕ, ನಾವು ಎಂದರೆ ಸ್ವರ್ಗ !

ಲಿಂಗತ್ವ ಅಲ್ಪಸಂಖ್ಯಾತರಿಗೆ ರಾಜಕೀಯ ಮೀಸಲಾತಿ ಅಗತ್ಯ: ನ್ಯಾ.ನಾಗಮೋಹನ್ ದಾಸ್



ಬೆಂಗಳೂರು, ನ.19– ದೇಶದಲ್ಲಿ ಲಿಂಗತ್ವ ಅಲ್ಪ ಸಂಖ್ಯಾತರಿಗೆ ರಾಜಕೀಯ ಮೀಸಲು ಕಲ್ಪಿಸಬೇಕು. ಆ ಮೂಲಕ ಅವರ ಹಕ್ಕುಗಳಿಗೆ ಬಲ ತುಂಬುವ ಕೆಲಸ ಮಾಡಬೇಕಿದೆ ಎಂದು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಹೇಳಿದರು.

ಲಿಂಗತ್ವ ಅಲ್ಪಸಂಖ್ಯಾತರ ಹಕ್ಕುಗಳಿಗಾಗಿ ಕಾರ್ಯನಿರ್ವಹಿಸುತ್ತಿರುವ 'ಒಂದೆಡೆ' ಸಂಘಟನೆಯ ದಶಮಾನೋತ್ಸವದ ಅಂಗವಾಗಿ ನಗರದ ಗಾಂಧಿ ಭವನದಲ್ಲಿ ಭಾನುವಾರ ನಡೆದ 'ಭಾರತದ ಸಂವಿಧಾನ ಹಾಗೂ ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ರಾಜಕೀಯ ಪ್ರಾತಿನಿಧ್ಯ' ಕುರಿತ ವಿಚಾರಸಂಕಿರಣದಲ್ಲಿ ಅವರು ಮಾತನಾಡಿದರು.

ಮಹಿಳಾ ಮೀಸಲಾತಿ ಮಸೂದೆಯು ಸಂಸತ್ತಿನಲ್ಲಿ ಮಂಡನೆಯಾದ 28 ವರ್ಷಗಳ ಬಳಿಕ ಅನುಮೋದನೆ ದೊರಕಿದೆ. ಅದೂ, ಮುಂದೆಂದೋ ಜಾರಿಯಾಗುವ ಷರತ್ತಿನೊಂದಿಗೆ. 2011ರ ಜನಗಣತಿಯ ದತ್ತಾಂಶಗಳ ಆಧಾರದಲ್ಲೇ ಮಹಿಳಾ ಮೀಸಲಾತಿ ಅನುಷ್ಠಾನಕ್ಕೆ ಬರಲಿ. ಅದರ ಜೊತೆಯಲ್ಲೇ ಲಿಂಗತ್ವ ಅಲ್ಪ ಸಂಖ್ಯಾತರಿಗೂ ರಾಜಕೀಯ ಮೀಸಲಾತಿ ದೊರಕಲಿ ಎಂದು ಆಗ್ರಹಿಸಿದರು.

ನಿಖರ ದತ್ತಾಂಶ ಅಗತ್ಯ: ನಿವೃತ್ತ ಪ್ರಾಧ್ಯಾಪಕ ಪುರುಷೋತ್ತಮ ಬಿಳಿಮಲೆ ಮಾತನಾಡಿ, ಲಿಂಗತ್ವ ಅಲ್ಪ ಸಂಖ್ಯಾತರಿಗೆ ಸಂಬಂಧಿಸಿದಂತೆ ಭಾರತದಲ್ಲಿ ನಿಖರವಾದ ದತ್ತಾಂಶಗಳ ಕೊರತೆ ಇದೆ. ಬಹುತೇಕ ಸಂದರ್ಭಗಳಲ್ಲಿ ಇಂತಹ ದತ್ತಾಂಶಗಳು ಬಂಡವಾಳಶಾಹಿಗಳ ಪ್ರಭಾವದಿಂದ ರೂಪುಗೊಂಡಿರುತ್ತವೆ. ಈಗ ರಾಜಕೀಯ ಮೀಸಲಾತಿ ಪಡೆಯುವುದಕ್ಕೆ ಪೂರಕವಾಗಿ ನಿಖರವಾದ ದತ್ತಾಂಶಗಳನ್ನು ಸಂಗ್ರಹಿಸುವ ಅಗತ್ಯವಿದೆ ಎಂದರು.

ವಿಧಾನ ಪರಿಷತ್ ಮತ್ತು ರಾಜ್ಯಸಭೆಗಳಲ್ಲಿ ನಾಮನಿರ್ದೇಶನದ ಮೂಲಕ ಲಿಂಗತ್ವ ಅಲ್ಪಸಂಖ್ಯಾತರಿಗೆ ಪ್ರಾತಿನಿಧ್ಯ ಕಲ್ಪಿಸಬೇಕು. ಈಗ ಅಧಿಕಾರ ಹಿಡಿದವರ ಸುತ್ತ ಠಳಾಯಿಸುವ ಸಾಹಿತಿಗಳು, ಬರಹಗಾರರು ಸೇರಿದಂತೆ ನಮ್ಮ ಸ್ನೇಹಿತರೇ ಆ ಹುದ್ದೆ ಪಡೆಯಲು ನಡೆಸುತ್ತಿರುವ ಕಸರತ್ತು ನೋಡಿದರೆ ಮುಜುಗರವಾಗುತ್ತದೆ ಎಂದು ಹೇಳಿದರು.

ಸಂವಾದ ನಿರ್ವಹಣೆ ಮಾಡಿದ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ಎಂ.ಎಸ್. ಆಶಾದೇವಿ, ಲಿಂಗತ್ವ ಅಲ್ಪಸಂಖ್ಯಾತರ ಕುರಿತು ಸಮರ್ಪಕವಾಗಿ ಅರಿವು ಮೂಡಿಸುವಲ್ಲಿ ನಾವು ಇನ್ನೂ ಸಫಲವಾಗಿಲ್ಲ. ಲಿಂಗತ್ವ ಅಲ್ಪಸಂಖ್ಯಾತರ ಸ್ಥಿತಿ ಶೋಚನೀಯವಾಗಿದೆ ಎಂದರು.

ರಾಜ್ಯ ಅಂತರ್ಲಿಂಗಿ ಅಸೋಸಿಯೇಷನ್‌ನ ಅಬೇದಾ ಬೇಗಂ ಮತ್ತು ಶೈನಾಜ್ ಬೇಗಂ ಸಭೆಯನ್ನು ಉದ್ಘಾಟಿಸಿದರು. ಒಂದೆಡೆ ಸಂಘಟನೆಯ ಟ್ರಸ್ಟಿ ಮಾಳವಿಕಾ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಘಟನೆಯ ಪ್ರಮುಖರಾದ ಅಕ್ಕೈ ಪದ್ಮಶಾಲಿ ಉಪಸ್ಥಿತರಿದ್ದರು.

ಎಂ.ಪಿ.ಶಶಿಕಲಾಗೆ ಪಿಹೆಚ್.ಡಿ ಪದವಿ



ಮೈಸೂರು: ಡಾ. ವಿ. ಷಣ್ಮುಗಂ ಅವರ ಮಾರ್ಗದರ್ಶನದಲ್ಲಿ ಎಂ.ಪಿ. ಶಶಿಕಲಾ ಅವರು ಅರ್ಥಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ವಚನಸಾಹಿತ್ಯ ರಸಪ್ರಶ್ನೆ: ಶಿವಾನಂದಪ್ಪರಿಗೆ ಬಹುಮಾನ



ಮೈಸೂರು: ಶರಣು ವಿಶ್ವವಚನ ಫೌಂಡೇಷನ್ ವತಿಯಿಂದ ವಚನ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಅಂತರ್ಜಾಲದ ಮೂಲಕ ನಡೆದ ಥಟ್ ಅಂತ ಉತ್ತರಿಸಿ 77ನೇ ವಚನ ಸಾಹಿತ್ಯ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾ.ಸ.ಹಿ.ಪ್ರಾ.ಶಾಲೆ ಹರಗುವಳ್ಳಿ ಶಿಕ್ಷಕ ಬಿ.ಶಿವಾನಂದಪ್ಪ ಅವರು ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸುವುದರ ಮೂಲಕ ಬಹುಮಾನಕ್ಕೆ ಭಾಜನರಾಗಿದ್ದಾರೆ ಎಂದು ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕಿ ರೂಪಾಕುಮಾರಸ್ವಾಮಿ ತಿಳಿಸಿದ್ದಾರೆ.

ಪುತ್ರ ವ್ಯಾಮೋಹ; ಧೃತರಾಷ್ಟ್ರನಿಗೂ ಸಿದ್ದರಾಮಯ್ಯಗೂ ವ್ಯತ್ಯಾಸವಿಲ್ಲ

ಬಿಜೆಪಿ ಟೀಕೆ

ಬೆಂಗಳೂರು, ನ.19– ಪುತ್ರ ವ್ಯಾಮೋಹದಲ್ಲಿ ಸಿದ್ದರಾಮಯ್ಯ ಅವರಿಗೂ ಧೃತರಾಷ್ಟ್ರನಿಗೂ ಯಾವುದೇ ವ್ಯತ್ಯಾಸ ಇಲ್ಲ ಎಂದು ಬಿಜೆಪಿ ಹೇಳಿದೆ.

'ಎಕ್ಸ್' ಮೂಲಕ ಸಿದ್ದರಾಮಯ್ಯ ಅವರನ್ನು ತರಾಟೆಗೆ ತೆಗೆದುಕೊಂಡಿರುವ ಬಿಜೆಪಿ, ವರ್ಗಾವಣೆಗೆ ಫೋನ್ ಕರೆ ಮಾಡಿ 'ಹಲೋ ಅಪ್ಪಾ' ಎಂದ ಡಾ.ಯತೀಂದ್ರ ಅವರನ್ನು ಸಿದ್ದರಾಮಯ್ಯ ಸಮರ್ಥನೆ ಮಾಡುತ್ತಿರುವ ಪರಿ ಅಚ್ಚರಿ ಹುಟ್ಟಿಸುತ್ತಿದೆ ಎಂದು ಕಾಲೆಳೆದಿದೆ.

ಸ್ವಾತಂತ್ರ್ಯ ಇಲ್ವಾ? ಅಧಿಕಾರ ಇಲ್ವಾ? ಮುಖ್ಯಮಂತ್ರಿ ಮಗ ಅಲ್ವಾ? ಕ್ಷೇತ್ರ ನೋಡಿಕೊಳ್ಳಬಾರದಾ? ನನಗೆ ಕ್ಷೇತ್ರ ಬಿಟ್ಟು ಕೊಟ್ಟಿಲ್ವಾ? ಹೀಗೆ ಪ್ರಶ್ನಿಸುವ ಸಿದ್ದರಾಮಯ್ಯಗೂ ಧೃತರಾಷ್ಟ್ರನಿಗೂ ಏನಾದರೂ ವ್ಯತ್ಯಾಸ ಇದೆಯೆ ಎಂದು ಪ್ರಶ್ನಿಸಿದೆ.

ನಿಮ್ಮ ಭ್ರಷ್ಟ ಆಡಳಿತಕ್ಕೆ ಬೇಸತ್ತು ರಾಜೀನಾಮೆ ನೀಡುತ್ತೇನೆ ಎಂದು ಹೇಳುತ್ತಿರುವ ಕಾಂಗ್ರೆಸ್ ಶಾಸಕರ ಪಟ್ಟಿಗೆ ಜಗಳೂರು ಶಾಸಕ ದೇವೇಂದ್ರಪ್ಪ ಹೊಸ ಸೇರ್ಪಡೆ ಎಂದು ಟೀಕಿಸಿದೆ.

ಆಡಳಿತ ಪಕ್ಷದ ಶಾಸಕರು ತಮ್ಮದೇ ಸರ್ಕಾರದ ವಿರುದ್ಧ ಈ ರೀತಿ ರಾಜೀನಾಮೆ ನೀಡುವಷ್ಟರ ಮಟ್ಟಿಗೆ ಅಸಹಾಯಕರಾಗಿರುವುದು ಕರ್ನಾಟಕದ ಇತಿಹಾಸದಲ್ಲಿ ಇದೇ ಮೊದಲು ಎಂದು ಹೇಳಿದೆ.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೇ, ಕಲೆಕ್ಷನ್ ಮತ್ತು ಪಂಚ ರಾಜ್ಯಗಳಿಗೆ ಕಳುಹಿಸಿದ ಕಾಂಚಾಣದ ಲೆಕ್ಕವನ್ನು ಡೈರಿಯಲ್ಲಿ ಬರೆದಿಟ್ಟುಕೊಳ್ಳುವ ರೀತಿ, ರಾಜೀನಾಮೆ ನೀಡಲು ಸಿದ್ಧ ಎಂದಿರುವ ನಿಮ್ಮದೇ ಪಕ್ಷದ ಶಾಸಕರ ಹೆಸರನ್ನೂ ಬರೆದಿಟ್ಟುಕೊಳ್ಳಿ, ಭವಿಷ್ಯದಲ್ಲಿ ನಿಮಗೆ ಪ್ರಯೋಜನಕ್ಕೆ ಬಂದರೂ ಬರಬಹುದು ಅಲ್ಲವೇ ಎಂದು ಲೇವಡಿ ಮಾಡಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಶ್ರೀಲಂಕಾ ನೌಕಾ ಪಡೆಯಿಂದ 22 ಭಾರತೀಯ ಮೀನುಗಾರರ ಬಂಧನ

ರಾಮನಾಥಪುರಂ, ನ.19– ಐಎಂಬಿಎಲ್ ಉಲ್ಲಂಘಿಸಿದ ಆರೋಪದ ಮೇಲೆ ರಾಮನಾಥಪುರಂನ ಪಂಬನ್ ಪ್ರದೇಶದಿಂದ ಬಂದ ಎರಡು ದೋಣಿಗಳಲ್ಲಿದ್ದ 22 ಭಾರತೀಯ ಮೀನುಗಾರರನ್ನು ಶ್ರೀಲಂಕಾ ನೌಕಾಪಡೆಯು ಬಂಧಿಸಿದೆ.

ಮುಂದಿನ ಕಾನೂನು ಕ್ರಮಗಳಿಗಾಗಿ ಬಂಧಿತ ಮೀನುಗಾರರನ್ನು ಮತ್ತು ಅವರ ದೋಣಿಗಳನ್ನು ವಶಕ್ಕೆ ಪಡೆಯಲಾಗಿದೆ. ಚಂಡಮಾರುತದ ಎಚ್ಚರಿಕೆಯಿಂದಾಗಿ ಹಲವು ದಿನಗಳ ನಂತರ ಶನಿವಾರ ಮೀನುಗಾರರು ಸಮುದ್ರಕ್ಕೆ ಇಳಿದಿದ್ದಾರೆ ಎಂಬುದು ಗಮನಿಸಬೇಕಾದ ಸಂಗತಿ.

ನವೆಂಬರ್ 15ರಂದು ನಾಡದೋಣಿ ಮೀನುಗಾರರು ಸಮುದ್ರಕ್ಕೆ ಇಳಿದಿದ್ದರು. ದೋಣಿಗಳು ಐಎಂಬಿಎಲ್ ಬಳಿ ಮೀನುಗಾರಿಕೆಯಲ್ಲಿ ತೊಡಗಿದ್ದಾಗ, ಶ್ರೀಲಂಕಾ ನೌಕಾಪಡೆಯು ಭಾರತೀಯ ಮೀನುಗಾರರಿದ್ದ ದೋಣಿಗಳನ್ನು ಅಲ್ಲಿಂದ ಓಡಿಸಿತು. ಆದರೆ, ಅವುಗಳ ಪೈಕಿ ಎರಡು ದೋಣಿಗಳು ಶ್ರೀಲಂಕಾದ ಸಮುದ್ರದಲ್ಲಿ ಮೀನುಗಾರಿಕೆ ಮುಂದುವರಿಸಿವೆ ಎಂದು ಆರೋಪಿಸಲಾಗಿದೆ.

ಇದರ ಪರಿಣಾಮವಾಗಿ, ಉತ್ತರ ನೌಕಾ ಕಮಾಂಡ್ ಪಾಯಿಂಟ್ ಪೆಡ್ರೊ ಲಂಕಾದ ನೀರಿನಲ್ಲಿ ಮೀನುಗಾರಿಗೆ ಮಾಡಿದ ಆರೋಪದ ಮೇಲೆ 22 ಮೀನುಗಾರರನ್ನು ಬಂಧಿಸಿದೆ. ಒಂದು ದೋಣಿ 10 ಜನರನ್ನು ಹೊತ್ತೊಯ್ದರೆ, ಇನ್ನೊಂದು 12 ಜನರನ್ನು ಹೊತ್ತೊಯ್ದಿತ್ತು. ದೋಣಿಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಬಂಧಿತ ಮೀನುಗಾರರನ್ನು ಜಾಫ್ನಾ ಬಂದರಿಗೆ ಕರೆದೊಯ್ಯಲಾಗಿದೆ. ಅಲ್ಲಿ ಅವರನ್ನು ಮುಂದಿನ ಕ್ರಮಗಳಿಗಾಗಿ ಮೀನುಗಾರಿಕೆ ಇಲಾಖೆಗೆ ಹಸ್ತಾಂತರಿಸಲಾಯಿತು.

ಈ ವರ್ಷ ದ್ವೀಪ ರಾಷ್ಟ್ರದಿಂದ ಸೆರೆ ಸಿಕ್ಕ ಭಾರತೀಯ ಮೀನುಗಾರರ ಸಂಖ್ಯೆ 196ಕ್ಕೆ ತಲುಪಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ. ಮೀನುಗಾರರ ಬಿಡುಗಡೆಗೆ ಕೇಂದ್ರ ಕ್ರಮ ಕೈಗೊಳ್ಳಬೇಕು ಎಂದು ಮೀನುಗಾರರ ಸಂಘಗಳು ಒತ್ತಾಯಿಸಿವೆ.

ಕ್ರಿಕೆಟ್ ವಿಶ್ವಕಪ್ ಫೈನಲ್ ಪಂದ್ಯದಲ್ಲಿ ಭದ್ರತೆ ಉಲ್ಲಂಘನೆ, ಕೊಹ್ಲಿಯತ್ತ ಧಾವಿಸಿದ ಪ್ಯಾಲೆಸ್ತೇನ್ ಅಭಿಮಾನಿ



ಅಹ್ಮದಾಬಾದ್, ನ.19– ಅಹ್ಮದಾಬಾದ್‌ನಲ್ಲಿ ನಡೆಯುತ್ತಿರುವ ಐಸಿಸಿ 2023 ವಿಶ್ವಕಪ್ ಪಂದ್ಯದಲ್ಲಿ ಭದ್ರತಾ ಉಲ್ಲಂಘನೆಯಾಗಿದೆ. ಪ್ಯಾಲೆಸ್ತೇನ್ ಅಭಿಮಾನಿಯೋರ್ವ ಬಿಗಿ ಭದ್ರತೆಯ ನಡುವೆಯೂ ಕ್ರಿಕೆಟ್ ಮೈದಾನಕ್ಕೆ ನುಗ್ಗಿ ಕೊಹ್ಲಿಯತ್ತ ಧಾವಿಸಿದ ಘಟನೆ ವರದಿಯಾಗಿದೆ.

ಮೊದಲ ವಿರಾಮಕ್ಕೂ ಮುನ್ನ ಈ ಆತಂಕಕಾರಿ ಘಟನೆ ವರದಿಯಾಗಿದೆ. ಭದ್ರತಾ ಸಿಬ್ಬಂದಿಗಳು ಆ ವ್ಯಕ್ತಿಯನ್ನು ವಶಕ್ಕೆ ಪಡೆದಿದ್ದು, ಆತನನ್ನು ಚೀನಾ–ಫಿಲಿಪಿನೋ ಮೂಲದ ಆಸ್ಟ್ರೇಲಿಯಾ ವ್ಯಕ್ತಿ ವೇಯ್ನ್ ಜಾನ್ಸನ್ ಎಂದು ಗುರುತಿಸಲಾಗಿದೆ.

ವೇಯ್ನ್ ಜಾನ್ಸನ್‌ನ್ನು ಬಂಧಿಸಿ ಚಾಂದ್ ಖೇಡಾ ಪೊಲೀಸ್ ಠಾಣೆಗೆ ಕರೆದೊಯ್ಯಲಾಗಿದೆ. ಕ್ರಿಕೆಟ್ ಆಟಗಳಲ್ಲಿ ರಾಜಕೀಯ ಘೋಷಣೆಗಳು ಅಪರಾಧವಾಗಿದೆ. ಆದರೆ ಜಾನ್ಸನ್ ವಿದೇಶಿ ಪ್ರಜೆಯಾಗಿರುವುದರಿಂದ ಅವರ ವಿರುದ್ಧ ಯಾವ ರೀತಿಯ ಕ್ರಮ ತೆಗೆದುಕೊಳ್ಳಲಾಗುವುದು ಎಂಬುದು ಇನ್ನೂ ತಿಳಿದಿಲ್ಲ.

ಜಾನ್ಸನ್ ಪ್ಯಾಲೆಸ್ತೀನ್ ಧ್ವಜದ ವಿನ್ಯಾಸದ ಮಾಸ್ಕ್ ಮತ್ತು ಎರಡೂ ಬದಿಗಳಲ್ಲಿ ಸ್ಲೋಗನ್‌ಗಳನ್ನು ಹೊಂದಿದ್ದ ಟಿ–ಶರ್ಟ್‌ನ್ನು ಧರಿಸಿದ್ದರು. ಟೀ–ಶರ್ಟ್‌ನ ಮುಂಭಾಗದಲ್ಲಿ, 'ಪ್ಯಾಲೆಸ್ಟೈನ್ ಬಾಂಬ್ ಸ್ಫೋಟವನ್ನು ನಿಲ್ಲಿಸಿ' ಎಂದು ಮತ್ತು ಹಿಂಭಾಗದಲ್ಲಿ, 'ಪ್ಯಾಲೆಸ್ತೀನ್ ಉಳಿಸಿ' ಎಂದು ಬರೆಯಲಾಗಿತ್ತು. ಆತ ಹಠಾತ್ ಒಳನುಗ್ಗಿದ್ದು, ಭದ್ರತಾ ಸಿಬ್ಬಂದಿಗಳು ಆತನನ್ನು ತ್ವರಿತವಾಗಿ ಬಂಧಿಸಿದ್ದಾರೆ.

ಐಸಿಸಿ ತನ್ನ ಈವೆಂಟ್‌ನಲ್ಲಿ ಯಾವುದೇ ರಾಜಕೀಯ ಘೋಷಣೆಗಳನ್ನು ಅನುಮತಿಸುವುದಿಲ್ಲ ಮತ್ತು ಅಂತಹ ಯಾವುದೇ ಕಾರ್ಯವನ್ನು ಭಾರತದಲ್ಲಿ ಸಹ ಅನುಮತಿಸಲಾಗುವುದಿಲ್ಲ.

ಇಸ್ರೇಲ್ ಮತ್ತು ಪ್ಯಾಲೆಸ್ಟೈನ್ ಉಗ್ರಗಾಮಿ ಗುಂಪು ಹಮಾಸ್ ಅಕ್ಟೋಬರ್ 7 ರಿಂದ ಯುದ್ಧದಲ್ಲಿ ತೊಡಗಿಸಿಕೊಂಡಿದೆ, ಹಮಾಸ್ ಕಿಬ್ಬುಟ್ಜ್ ರೀಮ್‌ನಲ್ಲಿ ಸಂಗೀತ ಉತ್ಸವದ ಮೇಲೆ ದಾಳಿ ಮಾಡಿತ್ತು.

ವರುಣಾ ಕ್ಷೇತ್ರವನ್ನು ಹೊರ ಗುತ್ತಿಗೆಗೆ ಕೊಟ್ಟಿದ್ದೀರಾ: ಎಚ್.ಡಿ.ಕುಮಾರಸ್ವಾಮಿ



ಬೆಂಗಳೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ವರುಣಾ ಕ್ಷೇತ್ರದ ಜನರು ನಿಮ್ಮನ್ನು ಶಾಸಕರನ್ನಾಗಿ ಆಯ್ಕೆ ಮಾಡಿಕೊಂಡಿದ್ದರು. ಈಗ ನಿಮ್ಮ ಮಗ ಡಾ. ಯತೀಂದ್ರ ಅವರಿಗೆ ಕ್ಷೇತ್ರವನ್ನು ಹೊರಗುತ್ತಿಗೆಗೆ ನೀಡಿದ್ದೀರಾ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

'ಕ್ಯಾಶ್ ಫಾರ್ ಪೋಸ್ಟಿಂಗ್' ಹ್ಯಾಷ್ ಟ್ಯಾಗ್‌ನೊಂದಿಗೆ ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಭಾನುವಾರವೂ ಟೀಕಾಪ್ರಹಾರ ಮುಂದುವರಿಸಿರುವ ಅವರು, ಕ್ಷೇತ್ರವನ್ನು ಹೊರಗುತ್ತಿಗೆ ನೀಡುವುದರ ಜತೆಯಲ್ಲೇ ಮಗನನ್ನು ಆಶ್ರಯ ಸಮಿತಿ ಅಧ್ಯಕ್ಷನನ್ನಾಗಿ ಮಾಡಿದ್ದೀರಿ. ಕೆಡಿಪಿ ಸದಸ್ಯರನ್ನಾಗಿ ಮಾಡಿ, ಸರ್ಕಾರದ ಅಧಿಕಾರಿಗಳ ಸಭೆ ನಡೆಸುವ ಅಧಿಕಾರವನ್ನೂ ನೀಡಿದ್ದೀರಿ. ಇದಕ್ಕೆ ಕಾನೂನಿನಲ್ಲಿ ಅವಕಾಶ ಇದೆಯೆ ಎಂದು ಕೇಳಿದ್ದಾರೆ.

ನೀವು ಮತ್ತು ನಿಮ್ಮ ಮಗ ದೂರವಾಣಿ ಸಂಭಾಷಣೆಯಲ್ಲಿ ಮಾತನಾಡಿದ್ದು ವರ್ಗಾವಣೆ ದಂಧೆ ಕುರಿತು ಎನ್ನುವುದರಲ್ಲಿ ಅನುಮಾನವಿಲ್ಲ. ನೀವು ಆರೂವರೆ ಕೋಟಿ ಕನ್ನಡಿಗರ ಪ್ರತಿನಿಧಿ. ವಿಷಯಾಂತರ ಮಾಡಬೇಡಿ. ನೇರವಾಗಿ ಉತ್ತರ ಕೊಡಿ. ಬೌನ್ಸರುಗಳಂತೆ ಸಚಿವರನ್ನು ಛೂಬಿಟ್ಟರೆ ನಾನು ಹೆದರಿ ಓಡುತ್ತೇನೆ ಎಂದು ಭಾವಿಸಿದರೆ ಅದು ನಿಮ್ಮ ಪೆದ್ದುತನ ಎಂದು ಮುಖ್ಯಮಂತ್ರಿಯವರ ಸಚಿವಾಲಯದಲ್ಲಿ ಆರ್. ಮಹದೇವ್ ಅವರನ್ನು ವಿಶೇಷ ಕರ್ತವ್ಯಾಧಿಕಾರಿಯಾಗಿ ನೇಮಿಸಿ ಜವಾಬ್ದಾರಿ ಹಂಚಿಕೆ ಮಾಡಿರುವ ಪಟ್ಟಿಯನ್ನೂ ಸಂದೇಶದೊಂದಿಗೆ ಲಗತ್ತಿಸಿದ್ದಾರೆ.

ಸಿಎಸ್‌ಆರ್ ಎಂದರೆ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿ ಎಂದರ್ಥ. ಈಗ ಅದು ಕರಪ್ಷನ್ ಆಫ್ ಸಿದ್ದರಾಮಯ್ಯ ಎಂದಾಗಿದೆ. ಸಿಎಸ್‌ಆರ್ ನಿಧಿಯ ಮೇಲೂ ಕಣ್ಣು ಹಾಕಿ ವಸೂಲಿಗೆ ಮಗನನ್ನು ಬಿಟ್ಟಿದ್ದೀರಾ ಎಂದು ಕೇಳಿದ್ದಾರೆ.

ಮೊದಲ ಬಾರಿಗೆ 4 ಟ್ರಿಲಿಯನ್ ಡಾಲರ್ ದಾಟಿದ ಭಾರತದ ಜಿಡಿಪಿ



ನವದೆಹಲಿ: ಭಾರತದ ಆರ್ಥಿಕತೆಗೆ ಸಂಬಂಧಿಸಿದಂತೆ ಇಂದು ಬಹಳ ಒಳ್ಳೆಯ ಸುದ್ದಿ ಬಂದಿದೆ. ಇಂದು ದೇಶದ ಆರ್ಥಿಕತೆಯು ಮೊದಲ ಬಾರಿಗೆ ನಾಲ್ಕು ಟ್ರಿಲಿಯನ್ ಡಾಲರ್‌ಗಳನ್ನು ದಾಟಿದೆ.

ಇದರೊಂದಿಗೆ ಭಾರತದ ಆರ್ಥಿಕತೆಯು ಈಗ ವಿಶ್ವದ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗುವ ಸಮೀಪದಲ್ಲಿದೆ. ದೇಶವನ್ನು ನಾಲ್ಕನೇ ಅತಿದೊಡ್ಡ ಆರ್ಥಿಕತೆಯನ್ನಾಗಿ ಮಾಡಲು ಕೇಂದ್ರ ಸರ್ಕಾರ ಮಾರ್ಗಸೂಚಿಯನ್ನು ಸಿದ್ಧಪಡಿಸಿದೆ. ದೇಶವು ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಬೇಕಾದರೆ, ಜಿಡಿಪಿ ಐದು ಟ್ರಿಲಿಯನ್ ತಲುಪಬೇಕು. 2027ರ ವೇಳೆಗೆ ದೇಶವು ಐದು ಟ್ರಿಲಿಯನ್ ಆರ್ಥಿಕತೆಯನ್ನು ಹೊಂದಬೇಕು ಎಂಬುದು ಸರ್ಕಾರದ ಗುರಿಯಾಗಿದೆ.

2027ರ ವೇಳೆಗೆ ಜಪಾನ್ ಮತ್ತು ಜರ್ಮನಿಯನ್ನು ಬಿಟ್ಟು ಭಾರತ 5 ಟ್ರಿಲಿಯನ್ ಡಾಲರ್ ಆರ್ಥಿಕತೆ ಹೊಂದಿರುವ ದೇಶವಾಗಲಿದೆ ಎಂದು ವಿತ್ತಸಚಿವೆ ನಿರ್ಮಲಾ ಸೀತಾರಾಮನ್ ಇತ್ತೀಚೆಗೆ ಹೇಳಿದ್ದರು. ಅಲ್ಲದೆ, ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಲಿದೆ. ಇದಕ್ಕೂ ಮೊದಲು ಅಂತರಾಷ್ಟ್ರೀಯ ಹಣಕಾಸು ನಿಧಿಯು ಅಂತಹ ಅಂದಾಜುಗಳನ್ನು ನೀಡಿದೆ. ಭಾರತದ ಈ ಸಾಧನೆಯು ದೇಶವನ್ನು ಐದು ಟ್ರಿಲಿಯನ್ ಡಾಲರ್ ಆರ್ಥಿಕತೆ ಯನ್ನಾಗಿ ಮಾಡುವಲ್ಲಿ ಒಂದು ಮೆಟ್ಟಿಲು ಎಂದು ಸಾಬೀತುಪಡಿಸುತ್ತದೆ ಎಂದು ತಿಳಿದುಬಂದಿದೆ.

ಕಳೆದ ರಾತ್ರಿ ಮೈಲಿಗಲ್ಲು ಸಾಧಿಸಿದೆ: ಲೈವ್ ಜಿಡಿಪಿ ಅಂಕಿಅಂಶಗಳ ಪ್ರಕಾರ, ಭಾರತವು ಶನಿವಾರದಂದು ಮೈಲಿಗಲ್ಲನ್ನು ಸಾಧಿಸಿದೆ. ರಾತ್ರಿ 10.30ಕ್ಕೆ ದೇಶದ ಆರ್ಥಿಕತೆಯು ಮೊದಲ ಬಾರಿಗೆ 4 ಟ್ರಿಲಿಯನ್ ಡಾಲರ್‌ಗಳನ್ನು ದಾಟಿದೆ ಎಂದು ಹೇಳಲಾಗುತ್ತಿದೆ. ಇದಾದ ಬಳಿಕ ನಾಲ್ಕನೇ ಸ್ಥಾನದಲ್ಲಿರುವ ಜರ್ಮನಿ ಮತ್ತು ಭಾರತ ನಡುವಿನ ಅಂತರ ಗಣನೀಯವಾಗಿ ತಗ್ಗಿದೆ. ಅಮೆರಿಕವು ಇದೀಗ ವಿಶ್ವದ ಅತಿದೊಡ್ಡ ಆರ್ಥಿಕತೆಯಾಗಿದೆ.

ಇದರ ಪ್ರಸ್ತುತ ಗಾತ್ರ 26.7 ಟ್ರಿಲಿಯನ್ ಡಾಲರ್. ಚೀನಾದ ಆರ್ಥಿಕತೆ ಎರಡನೇ ಸ್ಥಾನದಲ್ಲಿದೆ. ಇದರ ಗಾತ್ರ 19.24 ಟ್ರಿಲಿಯನ್ ಡಾಲರ್. ವಿಶ್ವದ ಮೂರನೇ ಸ್ಥಾನದಲ್ಲಿ ಜಪಾನ್ ಮತ್ತು ನಾಲ್ಕನೇ ಸ್ಥಾನದಲ್ಲಿ ಜರ್ಮನಿ ಇದೆ. ಜಪಾನ್ ಆರ್ಥಿಕತೆಯು 4.39 ಟ್ರಿಲಿಯನ್ ಡಾಲರ್ ಮೌಲ್ಯದ್ದಾಗಿದೆ. ಆದರೆ, ಜರ್ಮನಿಯ ಆರ್ಥಿಕತೆಯು 4.28 ಟ್ರಿಲಿಯನ್ ಡಾಲರ್ ಮೌಲ್ಯದ್ದಾಗಿದೆ. ಅಂತಹ ಪರಿಸ್ಥಿತಿಯಲ್ಲಿ, ಭಾರತ ಸರ್ಕಾರವು ತನ್ನ ಮಾರ್ಗಸೂಚಿಯ ಪ್ರಕಾರ, ಭಾರತವು 2027ರ ವೇಳೆಗೆ ಜಪಾನ್ ಮತ್ತು ಜರ್ಮನಿ ಎರಡನ್ನೂ ಹಿಂದಿಕ್ಕಲಿದೆ ಎಂದು ಹೇಳಿಕೊಂಡಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ಟೆಲಿ ಕಾಲಿಂಗ್ ಮಾಡಿ ಅನುಭವ ಇರುವ ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದರೆ.
9916913984

HOUSE FOR RENT
(Vegetarians Only) 2BHK House First Floor available for Rent at Krishnamurthypuram, Mysore Near Krishnamurthypuram Post Office. *Contact:*
9448939404, 9353561720

ಗೌರಿಶಂಕರ ಟ್ರಾವೆಲ್ಸ್
17–12–23 (1 ದಿನ): ಇಶಾ ಫೌಂಡೇಷನ್, ಘಾಟಿ ಸುಬ್ರಮಣ್ಯ. 25–12–23 (6 ದಿನ): ಗುರುವಾಯೂರು, ಮುನ್ನಾರ್, ತ್ರಿವೇಂಡ್ರಂ, ಆಲಪ್ಪಿ, ಕೊಚ್ಚಿನ್ ಇತ್ಯಾದಿ. 26–1–24 (4 ದಿನ): ಶಿರಡಿ, ಭೀಮಶಂಕರ, ಘೃಷ್ಣೇಶ್ವರ, ಎಲ್ಲೋರ, ತ್ರಯಂಬಕೇಶ್ವರ ಇತ್ಯಾದಿ. (ವಿಮಾನ, ಬಸ್, ಊಟ, ರೂಂ)
Mob: 9620002114

WANTED
ಟೆಕ್ನಿಷಿಯನ್ ಹುಡುಗರು
ಐಟಿಐ ಎಲೆಕ್ಟ್ರಿಕಲ್ಸ್ ಆದವರಿಗೆ ಆದ್ಯತೆ ದ್ವಿಚಕ್ರ ವಾಹನ ಹೊಂದಿರಬೇಕು ವಯಸ್ಸು 18–25 ವರ್ಷ
ಸರಸ್ವತಿಪುರಂ, ಮೈಸೂರು
98808 28999

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 9108566022

DTCP SITES FOR SALE
DTCP Sites Rs. 699 per sq.ft., Near Jayapura, H.D. Kote Road, Mysore.
9590491194,9606783264

ಸುವರ್ಣ ಯಾತ್ರ
1) 30–11–23 ನೇಪಾಳ ಪ್ರವಾಸ 9 ದಿನಗಳು (ಮುಕ್ತಿನಾಥ, ಪಶುಪತಿನಾಥ, ಕಠ್ಮಂಡು, ಮನೋಕಾಮನ, ಲುಂಬಿನಿ, ಪೊಕ್ರ, ಜನಕಪುರ). 2) ಭೂತಾನ್ ಪ್ರವಾಸ 7 ದಿನಗಳು 23–12–23 (ಬಾಗ್ದೋಗ್ರಾ, ಸಿಲಿಗುರಿ, ಥಿಂಪು, ಡೋಚುಲಾ ಪಾಸ್, ಪುನಖಾ, ಪರೋ). ಸಂಪರ್ಕಿಸಿ:
8660233673, 9008381022

40×60 SITE for SALE
MUDA APPROVED
East Facing
Rajeev Nagar 2nd Stage Near Gupta Store, MYSORE
Rs. 1 Crore
Call : 9845286583

ಉಚಿತ ತರಬೇತಿ
ಮನೆಯಿಂದಲೇ ಬತ್ತಿಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಶೀನ್, ಮೈಕ್ರೋ ವೋವೆನ್, LED, LCD, AC Sales & Service
Contact: Srinivas
9379699229

SITE FOR SALE
1. Kesare II nd Stage 40x60 East Face
2. Kesare III rd Stage 40x60 West Face
3. 59x70 West Face Fully Commercial Opp. KSRTC Bus Stand
Call After 10.30 AM
9986731199

Aquaguard & Kent Sales and Service
Service Charge : 300/-
9901200444

ಉತ್ತಮ ಅವಕಾಶ
ಮನೆಯಲ್ಲಿ ಬಟ್ಟೆ ವ್ಯಾಪಾರ ಮಾಡಲು ನಮ್ಮಲ್ಲಿ ಹೋಲ್ ಸೇಲ್ ದರದಲ್ಲಿ ಎಲ್ಲಾ ರೀತಿಯ ಸೀರೆಗಳು ಮತ್ತು ಎಲ್ಲಾ ರೀತಿಯ ಬಟ್ಟೆಗಳು ಸಿಗುತ್ತದೆ ಒಮ್ಮೆ ಭೇಟಿ ನೀಡಿ
Call After 10.30 AM
9986731199

ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಸೇಲ್ ಮ್ಯಾನ್ ಕೆಲಸ ಮಾಡಲು ಅನುಭವವುಳ್ಳ ಹುಡುಗ, ಹುಡುಗಿಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ESI+PF ಮತ್ತು ಇನ್ಸೆಂಟೀವ್ ಸೌಲಭ್ಯದೊಂದಿಗೆ
ಗಾಂಧಿಸರ್ಕಲ್, ಮೈಸೂರು
Call After 10.30 AM
9980620678

ವಿಕೇರ್ ಹೋಮ್ ನರ್ಸಿಂಗ್ ಮೈಸೂರು
ಮೈಸೂರಿನಲ್ಲಿ ರೋಗಿಯ ಆರೈಕೆಯ ಕೆಲಸಕ್ಕೆ ಮಹಿಳಾ ಹೋಮ್ ನರ್ಸ್ ಬೇಕಾಗಿದ್ದಾರೆ.
ವೇತನ 16,000 – 23,000/–
ಸಂಪರ್ಕಿಸಿ:
+91 9380 04 3696
+91 6364 48 1333

HOME LOANS
CORPORATION, MUDA, KHB GRAMATHANA PROPERTY
Site Purchase, Site Construction
House Purchase
Site Mortgage, house Mortgage
Contact: 9108416410

ಬೋಳು ತಲೆಯ ಸಮಸ್ಯೆಯೇ?

SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಹೊಸ ಮನೆ ಮಾರಾಟಕ್ಕಿದೆ
ಹಾಗೂ ಸೈಟುಗಳು ಮಾರಾಟಕ್ಕಿವೆ, ಶ್ರೀರಾಂಪುರ ರಿಂಗ್ ರೋಡ್ ಶ್ರೀನಗರ ಹಿಂಭಾಗ, ಮೈಸೂರು
8050345574

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ+ಓಟಿ 15,200/- to 86,000/-
9740733021, 9535028750

Sudarshan Saur
SOLAR WATER HEATER


SUNZONE SOLAR SYSTEM
Vishwamanava Double Road, Kuvempunagar, Mysuru
9845175443

3 BHK DUPLEX HOUSE FOR RENT
at Aishwaryanagar, Kuvempunagar 'N' Block, Modular kitchen, wardrobe, 24x7 water, car parking, 2 balcony, solar, semi furnished.
Mob: 94498 48937

ನಿವೇಶನ ಬೇಕಾಗಿದೆ
40x60 ಅಳತೆಯ ನಿವೇಶನ ಮೈಸೂರಿನ ರೇಸ್ ಕೋರ್ಸ್‌ನ ಸಮೀಪದ ಬಡಾವಣೆಯಲ್ಲಿ ಬೇಕಾಗಿದೆ. ಸಂಪರ್ಕಿಸಿ:
Mob: 8762686366

ಬಾಡಿಗೆಗೆ / ಭೋಗ್ಯಕ್ಕೆ
ಶ್ರೀರಾಂಪುರ ಯೂನಿವರ್ಸಿಟಿ ಬಡಾವಣೆ ಎದುರು, ಗಾಯತ್ರಿ ಬಡಾವಣೆ, ಶಂಕರನಗರದಲ್ಲಿ (ಮಧುರ ಧಾಮ ಪಕ್ಕ) ಮನೆ ಹಾಗೂ ಮಳಿಗೆ ಬಾಡಿಗೆಗೆ / ಭೋಗ್ಯಕ್ಕೆ ಲಭ್ಯವಿದೆ.
9110848989, 9448092818

House for Rent
30x45, ಜಯನಗರ 2ನೇ ಮೇನ್, ರಾಮಮಂದಿರದ ಮುಂದಕ್ಕೆ, ನಂ. 97, ಮೊದಲನೇ ಅಂತಸ್ತು ಹಾಲ್ 2 ಬೆಡ್ ರೂಂ, ಪೂಜಾ ರೂಂ, ವರಾಂಡ, ಊಟದ ಮನೆ. ಸಸ್ಯಾಹಾರಿಗಳಿಗೆ ಮಾತ್ರ
9945227990, 7975757858

Walk-in Interview
JAYAM PROPERTIES
Marketing Executives, Telecaller.
Salary + incentive. LIG 78, 1st Stage, 2nd Floor, Near Shanthi Sagar Complex, Kuvempunagar.
Interview date: 21-11-2023
8971367878, 9886895503

ಟಿವಿ ರಿಪೇರಿ
ಎಲ್‌ಸಿಡಿ, ಎಲ್‌ಇಡಿ ಟಿವಿ
Service at your doorstep.
Mob: 9880066886

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ.
97318 91409

2.5 BHK HOME INTERIORS @ ₹2.5 LACS
ISO 9001:2015 Certified Company Depot
Build Mart
TALK TO OUR DESIGN TEAM
9731591267

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

100% TEAK WOOD
FACTORY FINISH DOORS & FRAMES
@ FACTORY DEPOT RATES
10 YEARS WARRANTY ISI
9845426862
9901291267

ಕಳೆದಿದೆ
ಜಯಲಕ್ಷ್ಮಿ, ನಂ. 446, ಕೂರ್ಗಳ್ಳಿ, ಮೈಸೂರು, ದಿನಾಂಕ 31–01–2007 ರಂದು ವಿಜಯನಗರ 3ನೇ ಹಂತದ 'ಓ' ಬ್ಲಾಕ್‌ನ 12ನೇ ಮೇನ್ ಮನೆ ನಂ. 685 ರಲ್ಲಿದ್ದ ಶ್ರೀ ಕೆ.ಎಂ. ದೇವಯ್ಯ ರವರ ಮಗನಾದ ಶ್ರೀ ಕೆಡಿ. ಕಾರಿಯಪ್ಪ ರವರಿಂದ ವಿಜಯನಗರ 4ನೇ ಹಂತ 2ನೇ ಘಟ್ಟ ನಿವೇಶನ ಸಂಖ್ಯೆ 2978 ರ ನಿವೇಶನವನ್ನು ಶುದ್ಧ ಕ್ರಯಕ್ಕೆ ಖರೀದಿ ಮಾಡಿರುತ್ತೇನೆ. ಸದರಿ ನಿವೇಶನಕ್ಕೆ ಸಂಬಂಧಿಸಿದ ದಿನಾಂಕ 12–1–1998ರ ಮೂಲ ನಿವೇಶನ ಮಂಜೂರಾತಿ ಪತ್ರವು ಮನೆಯನ್ನು ಬದಲಾಯಿಸುವ ಸಮಯದಲ್ಲಿ ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
Mob: 7892089847

SRE CARGO
ಎಸ್.ಆರ್.ಇ ಕಾರ್ಗೋ
QUICK PARCEL SERVICE
Daily Service Avaliable to
BANGALORE | BELGAUM | BELLARY | BYADGI | DAVANGERE | CHITRADURGA | GADAG | GANGAVATHI | HAVERI | HUBLI | HOSPETE | KOPPAL | RAICHUR | RANEBENNUR | SHIMOGA | SINDHANUR
MUMBAI- BHIWANDI | MUMBAI - VASHI | MUMBAI - AMBERNATH
90199 13866 | 89510 64920

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 7975101020

ತಕ್ಷಣ ಬೇಕಾಗಿದ್ದಾರೆ
ಬಲ್ಲಾಳ ಸರ್ಕಲ್ ಮತ್ತು RTO ಸರ್ಕಲ್ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ: SSLC ಮೇಲ್ಪಟ್ಟು
ಸಂಬಳ: 17500 (26 Days)
ವಯೋಮಿತಿ : 50 ವರ್ಷದ ಒಳಗೆ
ESI ಮತ್ತು PF ಸೌಲಭ್ಯವಿರುತ್ತದೆ.
9620667819
9880727819

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

JOB REQUIREMENT
For Sales Excutive Boys Only
SSLC, PUC, Any Degree
MR Motors
(TVS AUTO SHOWROOM
804, Contoor Road
Gokulam 3rd Stage, Mysore
9019902516
08214525030, 9742791078

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೆ ಉಳಿದುಕೊಳ್ಳುವಂತಹ ಯುವಕ/ಯುವತಿಯರು, ಮಹಿಳೆಯರು, ವಿಧವೆ/ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. ಯಾವುದೇ ರೀತಿಯ ಶುಲ್ಕ ಇರುವುದಿಲ್ಲ (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ) ಸಂಬಳ: 15000 (ESI, PF ಸೌಲಭ್ಯವಿದೆ). (ಮಹಿಳಾ ಟೆಲಿಕಾಲರ್‌ಗಳು ಡೇ ಶಿಫ್ಟ್‌ಗೆ ಬೇಕಾಗಿದ್ದಾರೆ. ಸಂಬಳ :7000)
8050699742,6366141518

ತಕ್ಷಣ ಬೇಕಾಗಿದ್ದಾರೆ
ಯದವಗಿರಿ ಮತ್ತು ಗಂಗೋತ್ರಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ: SSLC ಮೇಲ್ಪಟ್ಟು
ಸಂಬಳ: 15500 +W/o
9880727819
9620667819

ಅನುಬಂಧ ಮ್ಯಾರೇಜಸ್
ವಧುವರರನ್ನು ಹುಡುಕಲು ಸಹಾಯ ಬೇಕೇ? ನಮಗೆ ಕರೆ ಮಾಡಿ
6361740552

ಬಿಲ್ಲಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ
ಬಿಕಾಂ ಆಗಿರಬೇಕು (ಟ್ಯಾಲಿ ತಿಳಿದಿರುವವರಿಗೆ ಆದ್ಯತೆ ನೀಡಲಾಗುತ್ತದೆ.)
ಅಂಗಡಿ ಕೆಲಸಕ್ಕೆ ಬೇಕಾಗಿದ್ದಾರೆ
ಖುದ್ದಾಗಿ ಬಂದು ಸಂಪರ್ಕಿಸಬಹುದು
ಸಂದರ್ಶನ ವೇಳೆ
10:am - 11.30 am, 3:00 -6:00pm
ಶ್ರೀನಿವಾಸ ಇಮೇಜ್ ಪ್ರಾಡೆಕ್ಟ್
ಮೋರ್ ಮೇಗಾಮಾರ್ಟ್ ಹತ್ತಿರ, ಶಿವರಾಂಪೇಟೆ ಮೈಸೂರು
9902902530

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಕಂಪನಿಗಳಿಗೆ ಶೋರೂಂಗಳಿಗೆ ಮತ್ತು ಆಫೀಸ್‌ಗಳಿಗೆ ಕೆಲಸ ಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ. Any Degree 7th, SSLC, PUC, ITI, Any Degree , ಆದವರಿಗೆ ಅರ್ಹತೆಗೆ ತಕ್ಕಂತೆ ಕೆಲಸ ಸಂಬಳ 15,800 ರಿಂದ 38,000 (ESI+PF+OT) ಸೇರಿ.
9739857142,9035143190

ಮನೆ ಮಾರಾಟಕ್ಕಿದೆ
20x30 (ಪೂರ್ವ) ನಿವೇಶನದಲ್ಲಿ GF ಪಾರ್ಕಿಂಗ್ + 2ವೀಲರ್ ಪಾರ್ಕಿಂಗ್+ 1ರೂಂ+ಅಟ್ಯಾಚ್ ಬಾತ್‌ರೂಂ FF+SF 3 ರೂಂ ನೊಂದಿಗೆ ಡೂಪ್ಲೆಕ್ಸ್ 2 ಅಟ್ಯಾಚ್ ಹಾಗೂ 1 ಜನರಲ್ ಬಾತ್ ರೂಂ ಹಾಲ್ ಹಾಗೂ ಕಿಚನ್. Location: ಮಾತೃಶ್ರೀ ಬಡಾವಣೆ ಲಿಂಗಾಬುದಿ ಪಾಳ್ಯದ ಹತ್ತಿರ, ಮಾರಮ್ಮ ದೇವಸ್ಥಾನದ ಹತ್ತಿರ, ರಿಂಗ್ ರಸ್ತೆ ಪಕ್ಕ
9845310014,9844689577

ಸುವರ್ಣಾವಕಾಶ
ವಿಶೇಷವಾಗಿ ರಾಜ್ಯ ಸರ್ಕಾರಿ/ಕೇಂದ್ರ ಸರ್ಕಾರಿ ನಿವೃತ್ತ ಸ್ವಯಂ ನಿವೃತ್ತ ಅಧಿಕಾರಿಗಳಿಗೆ ಹಾಗೂ ಗೃಹಿಣಿಯರಿಗೆ, ಶೂನ್ಯ ಬಂಡವಾಳ, ನಿಮ್ಮ ಸಮಯಕ್ಕೆ ತಕ್ಕಂತೆ ಕೆಲಸ, ನಿರ್ದಿಷ್ಟವಾದ ವ್ಯಾಪಾರ ಹಾಗೂ ಸಂಪಾದನೆ ಭತ್ಯೆ, ಫಿಎಫ್ ಹಾಗೂ ವೈದ್ಯಕೀಯ ಲಾಭ, ಪ್ರತಿಫಲ ಹಾಗೂ ಗುರುತಿಸುವಿಕೆ, ಮನೆ/ಕಛೇರಿಯಿಂದಲೇ ಕೆಲಸ, ವಿದೇಶ ಪ್ರಯಾಣ, ಮಾರ್ಕೆಟಿಂಗ್‌ನ ಅವಶ್ಯಕತೆ ಇಲ್ಲ ಚೈನ್ ಲಿಂಕ್ ಇಲ್ಲ, ಫೀಲ್ಡ್ ವರ್ಕ್‌ನ ಅವಶ್ಯಕತೆ ಇಲ್ಲ
9449152797,8660764095

WANTED
Female Telecallers
Salary:Telecallers 8000/- + incentives
S.M. ENTERPRISES
43, S.B.M. Colony, Beside indian bank, Azeez Sait Main Road, udayagiri, Mysore-19
9902041345
6363305974

WANTED FOR RENT
2BHK House in & Around Nivedita Nagar/ Aravinda nagar, T.K.Layout,
8197310113

JOB'S @ MYSORE
Age (18-23), 10th PUC, ಯುವಕ ಯುವತಿಯರು Project Trainee ಗಳಾಗಿ Earn (8500/- ರಿಂದ 16500/-) PM, Only. Fresher's *'No Fee' * Meet Today Join Tomorrow
ಕಾವ್ಯ: 9342827788
9900133973

ಸೈಟು ಮಾರಾಟಕ್ಕಿದೆ
E/F 30x50 KHB ಸೈಟು ಮಾರಾಟಕ್ಕಿದೆ 25 ಲಕ್ಷಗಳು ಕರ್ನಾಟಕ ಗೃಹ ಮಂಡಳಿ ಇಲವಾಲ ಹತ್ತಿರ, ಮೈಸೂರು ಗುಂಗ್ರಾಲ್ ಛತ್ರ
9742198093

FOR SALE
1) 30x40 16 lakhs KOTE ROAD
2) 30@40 T Narasipura road
3) 20@70 Aswini choutry SRIRAMPURA
4) BOGADI Rd 20x30,30x40 trenz apartments near
5) 20@30 house LB Shastri nagr
6) 10 gunts land doctor lyt attach Prakruthi properties
9538690359,9035990359

ತಕ್ಷಣ ಬೇಕಾಗಿದ್ದಾರೆ
ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಲು CSC ಸೆಂಟರ್‌ಗೆ ಕಂಪ್ಯೂಟರ್ ತಿಳಿದವರು ಬೇಕಾಗಿದ್ದಾರೆ
ಸ್ಥಳ : ವಿದ್ಯಾರಣ್ಯಪುರಂ
9886681313
7899293166

ಕಳೆದಿದೆ
ಎನ್.ಪುಟ್ಟೇಗೌಡ ಮತ್ತು ಅವರ ಪತ್ನಿಯಾದ ಶ್ರೀಮತಿ ಸೀತಮ್ಮ ರವರ ಬಾಬ್ತು ಮೂಲ ದಾಖಲಾತಿಗಳು ಅಂದರೆ ಸಾಗುವಳಿ ಚೀಟಿಯು ದಿನಾಂಕ 6–11–2023ರಂದು ಕಳೆದುಹೋಗಿರುತ್ತದೆ. ಯಾರಿಗಾದರೂ ದೊರಕ್ಕಿದ್ದಲ್ಲಿ ಈ ಕೆಳಗಿನ ನಂಬರಿಗೆ ಸಂಪರ್ಕಿಸಿ
9449033805

SITE FOR SALE
33x40 corner site for sale in sharada Layout attached srinagar 40x60 site for sale sharada Layout 33x49 EF site for sale in sharada Layout
9880344263

ಬೇಕಾಗಿದ್ದಾರೆ
*ಫ್ರಂಟ್ ಆಫೀಸ್ ಅಸಿಸ್ಟೆಂಟ್ (ಪುರುಷ ಮಾತ್ರ)
*ಅನುಭವಿ ಸ್ಟುವರ್ಡ್ (ಪುರುಷ/ಮಹಿಳೆ) ಅನುಭವ ಇರಬೇಕು ಆಕರ್ಷಕ ಸಂಬಳ ಊಟ–ವಸತಿ ಸೌಲಭ್ಯವಿದೆ.
hmresortsmysore@gmail.com
9606035310
0823-6295533/44

ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ.
Office Work.
J.P. Nagar.
Mob: 7760301672

ಮೈಸೂರು ಮಿತ್ರ – ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಮುಂಬರುವ ಲೋಕಸಭಾ ಚುನಾವಣೆಯಲ್ಲಿ

ರಾಜ್ಯದ 28 ಕ್ಷೇತ್ರಗಳಲ್ಲೂ ಎನ್‌ಡಿಎ ಅಭ್ಯರ್ಥಿಗಳಿಗೆ ಗೆಲುವು

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿಶ್ವಾಸ

ಕೆ.ಆರ್.ಪೇಟೆ, ನ.19– ಮುಂಬರುವ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ ಎಲ್ಲಾ 28 ಕ್ಷೇತ್ರಗಳಲ್ಲೂ ಬಿಜೆಪಿ ಮತ್ತು ಎನ್‌ಡಿಎ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದು, ಮತ್ತೆ ಕೇಂದ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೇರಲಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿ ರಾಜ್ಯಾಧ್ಯಕ್ಷರಾದ ಬಳಿಕ ಮೊದಲ ಬಾರಿಗೆ ಕೆ.ಆರ್.ಪೇಟೆಗೆ ಭೇಟಿ ನೀಡಿ ಮಾತನಾಡಿದ ಅವರು, 2019ರ ಉಪ ಚುನಾವಣೆಯಲ್ಲಿ ನನ್ನ ಮೇಲೆ ವಿಶ್ವಾಸವಿಟ್ಟು ಬಿಜೆಪಿ ಅಭ್ಯರ್ಥಿಯಾಗಿದ್ದ ಮಾಜಿ ಸಚಿವ ಕೆ.ಸಿ.ನಾರಾಯಣಗೌಡರನ್ನು ಗೆಲ್ಲಿಸುವ ಮೂಲಕ ನನ್ನ ತಂದೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ ಕನಸ್ಸನ್ನು ನನಸು ಮಾಡಿದ ತಾಲೂಕಿನ ಜನತೆಯನ್ನು ನಾನು ಎಂದಿಗೂ ಮರೆಯುವುದಿಲ್ಲ. ಅದೇ ರೀತಿ ಮುಂಬರುವ ಲೋಕ ಸಭಾ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಗೆಲ್ಲಿಸುವ ಮೂಲಕ ವಿಶ್ವವೇ ಮೆಚ್ಚಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ದೇಶ ಸೇವೆ ಮಾಡಲು ಮತ್ತಷ್ಟು ಶಕ್ತಿ ತುಂಬಬೇಕು ಎಂದು ಮನವಿ ಮಾಡಿದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು 6 ತಿಂಗಳಾಗಿದ್ದು, ತನ್ನ ಗ್ಯಾರಂಟಿ ಯೋಜನೆಗಳನ್ನು ಈಡೇರಿಸಲು ಪರದಾಡುತ್ತಿದೆ. ಇದರಿಂದಾಗಿ ಇತರೆ ಯೋಜನೆಗಳಿಗೆ ಅನುದಾನ ನೀಡಲು ಹಣ ವಿಲ್ಲದಂತಾಗಿದೆ. ಗ್ರಾಪಂಗಳಿಗೆ ಒಂದೇ ಒಂದು ಮನೆ ಮಂಜೂರು ಮಾಡಿಲ್ಲ. ಶಾಲೆ, ರಸ್ತೆ ಅಭಿವೃದ್ಧಿ, ಕುಡಿಯುವ ನೀರಿನ ಸೌಲಭ್ಯಕ್ಕೆ ಅನುದಾನ ನೀಡಿಲ್ಲ. ಇಂತಹ ಅಭಿವೃದ್ಧಿ ವಿರೋಧಿ ರಾಜ್ಯ ಸರ್ಕಾರಕ್ಕೆ ತಕ್ಕಪಾಠ ಕಲಿಸಲು ರಾಜ್ಯದ ಜನತೆ ತುದಿಗಾಲಲ್ಲಿ ನಿಂತಿದ್ದಾರೆ ಎಂದರು.



ಪ್ರತಿ ಗ್ರಾಮದಲ್ಲಿ ಶೇ.30ರಷ್ಟು ಮಂದಿ ಗೃಹಲಕ್ಷ್ಮೀ ಯೋಜನೆಗೆ ಅರ್ಜಿ ಸಲ್ಲಿಸಲು ಸಾಧ್ಯವಾಗಿಲ್ಲ. ಇದರಿಂದಾಗಿ ಪ್ರತಿ ಗ್ರಾಮದಲ್ಲಿಯೂ ರಾಜ್ಯ ಸರ್ಕಾರದ ವಿರುದ್ಧ ಜನ ಹಿಡಿಶಾಪ ಹಾಕುತ್ತಿದ್ದಾರೆ. ಕೂಡಲೇ ರಾಜ್ಯ ಸರ್ಕಾರ ಸಾಫ್ಟ್‌ವೇರ್ ಅಪ್‌ಡೇಟ್ ಮಾಡಿ ಗೃಹಲಕ್ಷ್ಮೀ ಯೋಜನೆಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಬೇಕು ಎಂದರು. 2028ರ ವಿಧಾನಸಭಾ ಚುನಾವಣೆಯಲ್ಲಿ ಸ್ಪಷ್ಟ ಬಹುಮತದೊಂದಿಗೆ ಬಿಜೆಪಿ ಕರ್ನಾಟಕದಲ್ಲಿ ಅಧಿಕಾರಕ್ಕೆ ಬರಬೇಕು. ಆ ಮೂಲಕ ನಾಡಿನ ರೈತರು, ಬಡವರು, ಪರಿಶಿಷ್ಟ ಜಾತಿ, ಪಂಗಡ ಸೇರಿದಂತೆ ಎಲ್ಲಾ ವರ್ಗದವರಿಗೆ ನ್ಯಾಯ ಕೊಡಿಸುವ ಕೆಲಸ ಮಾಡಬೇಕಾಗಿದೆ ಎಂದರು.

ನಿಮ್ಮ ಆಯ್ಕೆಯಿಂದ ಪಕ್ಷದಲ್ಲಿ ಅಸಮಾಧಾನ ಉಂಟಾಗಿದೆಯೇ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ವಿಜಯೇಂದ್ರ, ಭಾರತೀಯ ಜನತಾ ಪಕ್ಷ ರಾಷ್ಟ್ರೀಯ ಪಕ್ಷವಾಗಿದ್ದು, ವರಿಷ್ಠರು ಯಾವ ಜವಾಬ್ದಾರಿ ನೀಡುತ್ತಾರೋ ಅದನ್ನು ನಿರ್ವಹಿಸುವುದು ನಮ್ಮ ಕರ್ತವ್ಯ. ಪಕ್ಷದಲ್ಲಿ ಹಿರಿಯರು, ಕಿರಿಯರು ಎಂಬ ಭೇದವಿಲ್ಲದೆ ಎಲ್ಲರಿಗೂ ಸೂಕ್ತ ಅವಕಾಶ ನೀಡುವ ಮೂಲಕ ಪಕ್ಷದ ಸಂಘಟನೆಗೆ ಒತ್ತು ನೀಡಲಾಗುತ್ತಿದೆ ಎಂದರು.

“ಕಳೆದ ವಿಧಾನಸಭಾ ಚುನಾವಣೆಯಲ್ಲಿ ಹಲವು ಬದಲಾವಣೆಯಾಗಿದ್ದರಿಂದ ನಮ್ಮ ನಿರೀಕ್ಷೆಗೆ ತಕ್ಕಂತೆ ಅಭ್ಯರ್ಥಿಗಳು ಗೆಲ್ಲಲಿಲ್ಲ. ಹೀಗಾಗಿ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ 28 ಸ್ಥಾನಗಳನ್ನು ಗೆಲ್ಲುವ ಮೂಲಕ ಮೋದಿ ಅವರ ಕೈ ಬಲಪಡಿಸಬೇಕು. ಇದಕ್ಕಾಗಿ ರಾಜ್ಯಾದ್ಯಂತ ಪ್ರವಾಸ ಮಾಡಿ ಪಕ್ಷ ಬಲಪಡಿಸಲಾಗುವುದು. ಪಕ್ಷದಿಂದ ಯಾರೂ ಸಹ ಹೊರ ಹೋಗದಂತೆ ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷ ಸಂಘಟನೆ ಮಾಡಲಾಗುವುದು. ಮುಂದಿನ ದಿನಗಳಲ್ಲಿ ಕರ್ನಾಟಕ ಬಿಜೆಪಿಗೆ ಭದ್ರಕೋಟೆಯಾಗಬೇಕು. ಇದಕ್ಕೆ ರಾಜ್ಯದ ಎಲ್ಲಾ ಸಮುದಾಯದ ಸಹಕಾರ ಅಗತ್ಯ
– ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ.

ಈ ವೇಳೆ ಶಾಸಕ ಹೆಚ್.ಟಿ.ಮಂಜು, ಮಾಜಿ ಶಾಸಕ ಪ್ರೀತಂ ಗೌಡ, ರಾಜ್ಯ ಕುರಿ ಮತ್ತು ಮೇಕೆ ಸಾಕಣೆದಾರರ ಮಹಾಮಂಡಳದ ರಾಜ್ಯಾಧ್ಯಕ್ಷ ಶರಣು.ಬಿ.ತಳ್ಳಿಕೇರಿ, ಮಂಡ್ಯ ಜಿಲ್ಲಾ ಬಿಜೆಪಿ ಅಧ್ಯಕ್ಷ ಉಮೇಶ್, ಜಿಲ್ಲಾ ಬಿಜೆಪಿ ಮುಖಂಡರಾದ ಎಸ್.ಸಚ್ಚಿದಾನಂದ, ಡಾ.ಇಂದ್ರೇಶ್, ಜಿಪಂ ಮಾಜಿ ಉಪಾಧ್ಯಕ್ಷ ಅಂಬರೀಶ್, ದಯಾನಂದ್, ತಾಲೂಕು ಬಿಜೆಪಿ ಅಧ್ಯಕ್ಷ ಪರಮೇಶ್ ಅರವಿಂದ್, ನಿಕಟ ಪೂರ್ವ ತಾಲೂಕು ಬಿಜೆಪಿ ಅಧ್ಯಕ್ಷ ಬೂಕಹಳ್ಳಿ ಮಂಜು, ತಾಲೂಕು ವೀರಶೈವ ಮಹಾಸಭಾ ಅಧ್ಯಕ್ಷ ವಿ.ಎಸ್.ಧನಂಜಯ ಕುಮಾರ್, ಸಿದ್ದಲಿಂಗಪ್ಪ, ತಾಲೂಕು ಬಿಜೆಪಿ ಪ್ರಧಾನ ಕಾರ್ಯದರ್ಶಿ ಪ್ರಕಾಶ್, ತಾಲೂಕು ಉಪಾಧ್ಯಕ್ಷ ಪುಟ್ಟಣ್ಣಿ, ನಾಗಣ್ಣ, ಶ್ರೀನಿವಾಸ್, ಭರತ್ ಸೇರಿದಂತೆ ನೂರಾರು ಕಾರ್ಯಕರ್ತರಿದ್ದರು.

ಕೆಂಗಲ್ ಮಹದೇಶ್ವರ ಜಾತ್ರಾ ಮಹೋತ್ಸವ

ಜಿಲ್ಲಾ ಉಸ್ತುವಾರಿ ಸಚಿವರಿಂದ ವಿಶೇಷ ಪೂಜೆ



ಪಾಂಡವಪುರ, ನ.19– ತಾಲೂಕಿನ ಸುಂಕಾತೊಣ್ಣೂರು ಗ್ರಾಮದ ಹೊರವಲಯದಲ್ಲಿ ದೀಪಾವಳಿ ಹಬ್ಬದ ಅಂಗವಾಗಿ ನಡೆಯುವ ಕೆಂಗಲ್ ಮಹದೇಶ್ವರ ಜಾತ್ರಾ ಮಹೋತ್ಸವದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಭಾಗಿಯಾಗಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಿದರು.

ಜಾತ್ರಾ ಮಹೋತ್ಸವಕ್ಕೆ ಆಗಮಿಸಿದ ಸಚಿವ ಎನ್.ಚಲುವರಾಯಸ್ವಾಮಿ ಅವರನ್ನು ಕೆಪಿಸಿಸಿ ಸದಸ್ಯ ಹೆಚ್.ತ್ಯಾಗರಾಜು, ಮುಖಂಡ ಬಿ.ರೇವಣ್ಣ ಹಾಗೂ ಸುಂಕಾತೊಣ್ಣೂರು ಗ್ರಾಮದ ಮುಖಂಡರು, ಕಾರ್ಯಕರ್ತರು ಅಭಿನಂದಿಸಿದರು. ಬಳಿಕ ದೇವಸ್ಥಾನಕ್ಕೆ ತೆರಳಿ ಸಚಿವರು ವಿಶೇಷ ಪೂಜೆ ಸಲ್ಲಿಸಿದರು.

ಈ ವೇಳೆ ಗ್ರಾಮಸ್ಥರು ನೀವು ಸಂಸದರಾಗಿದ್ದ ಸಂದರ್ಭ ಕೆಂಗಲ್ ಮಹದೇಶ್ವರ ಸ್ವಾಮಿ ದೇವಸ್ಥಾನ ಸುತ್ತ ಕಾಂಪೌಂಡ್ ನಿರ್ಮಿಸಿಕೊಡುವ ಭರವಸೆ ನೀಡಿದ್ದಿರಿ. ಇದೀಗ ನೀವು ಸಚಿವರಾಗಿದ್ದೀರಾ ದಯ ಮಾಡಿ ದೇವಸ್ಥಾನ ಸುತ್ತ ಕಾಂಪೌಂಡ್ ನಿರ್ಮಿಸಿ ಕೊಡುವ ಜೊತೆಗೆ ದೇವಸ್ಥಾನದ ಅಭಿವೃದ್ಧಿಗೆ ಸಹಕಾರ ನೀಡುವಂತೆ ಮನವಿ ಮಾಡಿದರು. ಸಚಿವ ಎನ್.ಚಲುವರಾಸ್ವಾಮಿ ಮಾತನಾಡಿ, ಸುಂಕಾತೊಣ್ಣೂರು ಗ್ರಾಮದ ಕೆಂಗಲ್ ಮಹದೇಶ್ವರ ದೇವಸ್ಥಾನದ ಅಭಿವೃದ್ಧಿಗೆ ಮುಂದಿನ ದಿನಗಳಲ್ಲಿ ಶ್ರಮಿಸಲಾಗುವುದು ಎಂದು ಭರವಸೆ ನೀಡಿದರು.

ಜೆಡಿಎಸ್ ಮತ್ತು ಬಿಜೆಪಿಯವರು ಜಿಲ್ಲೆಯಲ್ಲಿ ಬರ ಅಧ್ಯಯನ ನಡೆಸುತ್ತಿದ್ದಾರೆ. ಅಧ್ಯಯನ ನಡೆಸಿ ಏನು ವರದಿ ನೀಡುತ್ತಾರೆ ನೋಡೋಣ. ವರದಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಿ. ಕೇಂದ್ರದಿಂದ ಯಾವ ನಿರ್ಧಾರ ಬರುತ್ತದೆ ನೋಡೋಣ. ನಮ್ಮ ರಾಜ್ಯ ಸರ್ಕಾರವು ಸಹ ಜಿಲ್ಲೆಯ ರೈತರ ಹಿತ ಕಾಯಲಿದೆ ಎಂದರು. ಈ ವೇಳೆ ಶಾಸಕ ದರ್ಶನ್ ಪುಟ್ಟಣ್ಣಯ್ಯ, ದರ್ಶನ್, ಮುಖಂಡರಾದ ಕುಮಾರ, ಜಗದೀಶ್, ಯೋಗಣ್ಣ, ಮಹದೇವು, ದೇವೇಗೌಡ, ತಹಸೀಲ್ದಾರ್ ಶ್ರೇಯಸ್, ಉಪ ತಹಸೀಲ್ದಾರ್ ಮೋಹನ್, ವಿಎ ಸಂಜೀವ್ ರಾಥೋಡ್ ಸೇರಿದಂತೆ ಹಲವರಿದ್ದರು.

ಕಾಡಾನೆ ದಾಳಿ: ಮಹಿಳೆ ಸಾವು

ಮಂಡ್ಯ, ನ.19– ಕಾಡಾನೆ ದಾಳಿಗೆ ಮಹಿಳೆ ಬಲಿಯಾಗಿರುವ ಘಟನೆ ತಾಲೂಕಿನ ಲಾಳನಕೆರೆ ಗ್ರಾಮದಲ್ಲಿ ಭಾನುವಾರ ಬೆಳಗ್ಗೆ ನಡೆದಿದೆ.

ಗ್ರಾಮದ ನಿವಾಸಿ ಸಾಕಮ್ಮ(50) ಸಾವನ್ನಪ್ಪಿದವರು. ಈಕೆ ಪೀಹಳ್ಳಿ ಗ್ರಾಮದ ಮಾಲೀಕರೊಬ್ಬರ ಜಮೀನಿಗೆ ಕೂಲಿಗೆ ತೆರಳಿದ್ದರು. ಇವರ ಜೊತೆ 8ಕ್ಕೂ ಹೆಚ್ಚು ಮಂದಿ ಕೆಲಸ ಮಾಡುತ್ತಿದ್ದರು. ಈ ವೇಳೆ ಕಾಡಾನೆ ಏಕಾಏಕಿ ದಾಳಿ ಮಾಡಿದ ಪರಿಣಾಮ ಸಾಕಮ್ಮ ಆನೆ ದಾಳಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗದೇ ಸಾವನ್ನಪ್ಪಿದ್ದಾರೆ. ಸ್ಥಳಕ್ಕೆ ಮಂಡ್ಯ ಗ್ರಾಮಾಂತರ ಠಾಣೆ ಪೊಲೀಸರು ಹಾಗೂ ಅರಣ್ಯಾಧಿಕಾರಿಗಳು ಭೇಟಿ ನೀಡಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಹಳೇ ಮೈಸೂರು ಪ್ರಾಂತ್ಯಕ್ಕೆ ‘ನಾಲ್ವಡಿ ಕರ್ನಾಟಕ’ ಎಂದು ಹೆಸರಿಡಲಿ

ಕನ್ನಡ ಹಬ್ಬ, ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಈ.ಸಿ.ನಿಂಗರಾಜ್‌ಗೌಡ ಅಭಿಮತ

ಮಂಡ್ಯ, ನ.19– ಮುಂಬೈ ಕರ್ನಾಟಕಕ್ಕೆ ಕಿತ್ತೂರು ಕರ್ನಾಟಕ, ಹೈದರಾಬಾದ್ ಕರ್ನಾಟಕಕ್ಕೆ ಕಲ್ಯಾಣ ಕರ್ನಾಟಕ ಎಂಬ ಹೆಸರಿಟ್ಟಂತೆ ಹಳೇ ಮೈಸೂರು ಪ್ರಾಂತ್ಯಕ್ಕೆ ನಾಲ್ವಡಿ ಕರ್ನಾಟಕ ಎಂಬ ಹೆಸರಿಡಲು ಸರ್ಕಾರ ಚಿಂತನೆ ನಡೆಸಲಿ ಎಂದು ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯ ಈ.ಸಿ.ನಿಂಗರಾಜ್‌ಗೌಡ ಸರ್ಕಾರವನ್ನು ಒತ್ತಾಯಿಸಿದರು.

ಡಾ.ಜೀ.ಶಂ.ಪ ಸಾಹಿತ್ಯ ವೇದಿಕೆ, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಯುವಸೇನೆ ಸಂಯುಕ್ತಾಶ್ರಯದಲ್ಲಿ ಭಾನುವಾರ ನಗರದ ಗಾಂಧಿ ಭವನದಲ್ಲಿ ಹಮ್ಮಿಕೊಂಡಿದ್ದ ಕನ್ನಡ ಹಬ್ಬ, ನಾಲ್ಕನೇ ಕನ್ನಡ ಅಕ್ಷರ ಜಾತ್ರೆ ಹಾಗೂ ವಿವಿಧ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಕರ್ನಾಟಕವು ಸಾಹಿತ್ಯ, ಕೃಷಿ, ಧಾರ್ಮಿಕ, ತಂತ್ರಜ್ಞಾನ ಕ್ಷೇತ್ರಗಳಲ್ಲಿ ಹೆಸರುವಾಸಿಯಾಗಲು



ನಾಲ್ವಡಿ ಕೃಷ್ಣರಾಜ ಒಡೆಯರ್ ಕಾರಣ ಎಂದು ಬಣ್ಣಿಸಿದರು. ಆಡಳಿತಾತ್ಮಕ ವ್ಯವಸ್ಥೆಯಲ್ಲಿ ಜನರನ್ನು ಆಳುವವರು ಹೇಗೆ ರಾಜ್ಯ ಅಥವಾ ದೇಶವನ್ನು ಅಭಿವೃದ್ಧಿ ಮಾಡಬೇಕೆಂದು ವಿಶ್ವಕ್ಕೆ ತೋರಿಸಿಕೊಟ್ಟವರು ನಾಲ್ವಡಿ ಎಂದು ಶ್ಲಾಘಿಸಿದರು.

ಕೆಲವೊಂದು ಪ್ರಶಸ್ತಿಗಳು ಯಾರಿಗೆ ಸಿಗುತ್ತದೆ ಎಂಬ ಮೇಲೆ ಪ್ರಶಸ್ತಿಗಳ ಗೌರವ ಹೆಚ್ಚಾಗುತ್ತದೆ. ಅದರಂತೆ ಮಹನೀಯರಿಂದ ಪ್ರಶಸ್ತಿ ಪಡೆದಾಗ ಪ್ರಶಸ್ತಿ ಪಡೆದವರ ಮೌಲ್ಯವು ಸಹ ಹೆಚ್ಚಾಗುತ್ತದೆ ಎಂದರು.

ಸಾಂಸ್ಕೃತಿಕ ಹಾಗೂ ಸಾಹಿತ್ಯಾತ್ಮಕ ಜಿಲ್ಲೆ ಮಂಡ್ಯದಲ್ಲಿ ಸ್ಥಳೀಯ ಸಾಹಿತಿಗಳನ್ನು ಗುರುತಿಸಿ ಜೀಶಂಪ ಸಾಹಿತ್ಯ ವೇದಿಯಂತಹ ಸಂಘಟನೆಗಳು ಅವರಿಗೆ ಸಾಹಿತ್ಯ ಸಮ್ಮೇಳನಾಧ್ಯಕ್ಷರನ್ನಾಗಿ ಮಾಡುತ್ತಿರುವುದು ಹಾಗೂ ಸಾಹಿತಿಗಳನ್ನು ಗುರುತಿಸಿ ಪ್ರಶಸ್ತಿ ಕೊಡುತ್ತಿರುವುದು ನಿಜಕ್ಕೂ ಹೆಮ್ಮೆಯ ಕಾರ್ಯ ಎಂದರು.

ಕರ್ನಾಟಕ ಸಂಘದ ಉಪಾಧ್ಯಕ್ಷ ಡಾ.ಹೆಚ್.ಎಸ್.ಮುದ್ದೇಗೌಡ ಮಾತನಾಡಿ, ರಾಜ್ಯದಲ್ಲಿ ಶೇ.90ರಷ್ಟು ಕನ್ನಡ ಮಾತನಾಡುವುದು ಮಂಡ್ಯ ಜಿಲ್ಲೆ. ಕನ್ನಡಕ್ಕೆ ಎಂದೂ ಕೊರತೆಯಾಗದಂತೆ ಕನ್ನಡದ ಸಾರ್ವಭೌಮತ್ವವನ್ನು ರಾಜ್ಯದಲ್ಲಿ ಎತ್ತಿ ಹಿಡಿಯುತ್ತಿರುವುದು ಸಹ ಮಂಡ್ಯ ಜಿಲ್ಲೆಯಾಗಿದ್ದು, ಕನ್ನಡ ಹೆಚ್ಚು ಮಾತನಾಡುವ ಮಂಡ್ಯ ಜಿಲ್ಲೆಯಲ್ಲಿ ಕನ್ನಡ ಸಡಿಲವಾಗಬಾರದು ಎಂದರು.

ಆದರೆ ಗಡಿ ಪ್ರದೇಶದ ಗ್ರಾಮಗಳಲ್ಲಿ ಕನ್ನಡ ಮಾಯವಾಗುತ್ತಿದೆ. ಇಲ್ಲಿ ಕನ್ನಡದ ಬಗ್ಗೆ ಜಾಗೃತಿ ಮೂಡಿಸಬೇಕಿದೆ. ಜೊತೆಗೆ ಮಂಡ್ಯದಂತಹ ಕನ್ನಡ ಹೆಚ್ಚು ಮಾತನಾಡುವ ಜಿಲ್ಲೆಯಲ್ಲಿ ಖಾಸಗಿ ಶಾಲೆಯೊಂದು ಮಕ್ಕಳು ಕನ್ನಡ ಮಾತನಾಡಿದರೆ ದಂಡ ವಿಧಿಸುತ್ತದೆಂಬ ಮಾಹಿತಿ ಲಭ್ಯವಾಗಿದೆ. ಮಂಡ್ಯದಲ್ಲೇ ಹೀಗಾದರೆ ಬೆಂಗಳೂರು ಸೇರಿ ರಾಜ್ಯದ ಹಲವು ನಗರಗಳಲ್ಲಿ ಖಾಸಗಿ ಶಾಲೆಯಲ್ಲಿ ಕನ್ನಡದ ಕಥೆ ಏನು ಎಂದು ಆತಂಕ ವ್ಯಕ್ತಪಡಿಸಿದರು.

ಇದೇ ಸಂದರ್ಭ ಸಾಹಿತಿ ಡಾ.ಪದ್ಮ ಶ್ರೀನಿವಾಸ್ ಸಮ್ಮೇಳನಾಧ್ಯಕ್ಷರ ಭಾಷಣ ಮಾಡಿದರು. ಜೊತೆಗೆ ಕರುನಾಡ ರಾಜ್ಯ ಕಾರ್ಮಿಕರ ಜನಸೇವೆ ರಾಜ್ಯಾಧ್ಯಕ್ಷ ಪ್ರತಾಪ್, ಮಹಿಳಾ ಘಟಕದ ಅಧ್ಯಕ್ಷೆ ಮಂಜುಳಾಗೌಡ, ಮನ್‌ಮುಲ್ ಉಪಾಧ್ಯಕ್ಷ ರಘುನಂದನ್, ಸಮಾಜ ಸೇವಕಿ ಡಾ.ಹೇಮಾರೆಡ್ಡಿ, ಕಿರುತೆರೆ ಕಲಾವಿದ ಚಂದ್ರಚೂಡೇಶ್ವರ ರಾಜು, ಬಾಲಪ್ರತಿಭೆ ವಿಷ್ಣು ತೇಜ ಸೇರಿದಂತೆ ಹಲವರಿಗೆ ವಿವಿಧ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ವೇದಿಕೆಯಲ್ಲಿ ಡಾ.ಜೀಶಂಪ ಸಾಹಿತ್ಯ ವೇದಿಕೆ ಅಧ್ಯಕ್ಷ ಎಸ್.ಕೃಷ್ಣಸ್ವರ್ಣಸಂದ್ರ, ಪ್ರಧಾನ ಕಾರ್ಯದರ್ಶಿ ಮಂಗಲ ಶಿವಣ್ಣ, ಸಂಘಟನೆಯ ಪದಾಧಿಕಾರಿಗಳಾದ ರೂಪಾ ಹೊಸಹಳ್ಳಿ, ಕೆ.ಎಂ.ಅಪೇಕ್ಷ ಉಪಸ್ಥಿತರಿದ್ದರು.

ನ.23 ರಂದು ಗ್ರಾಮ ಸಭೆ

ಮಂಡ್ಯ, ನ.19– ಗೋಪಾಲಪುರ ಗ್ರಾಮ ಪಂಚಾಯಿತಿ ಕಾರ್ಯಾಲಯ ವತಿಯಿಂದ 2023–24ನೇ ಸಾಲಿನ ವಾರ್ಡ್ ಸಭೆ ಮತ್ತು ಗ್ರಾಮ ಸಭೆಯನ್ನು ನ.23 ರಂದು ಬೆಳಿಗ್ಗೆ 11 ಗಂಟೆಗೆ ಗೋಪಾಲಪುರದ ಮಾರಮ್ಮ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗೋಪಾಲಪುರ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಎಚ್.ಎಸ್.ಸವಿತಾ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚೆಲುವರಾಯಸ್ವಾಮಿ, ಮಂಡ್ಯ ವಿಧಾನಸಭಾ ಕ್ಷೇತ್ರದ ಶಾಸಕ ಪಿ.ರವಿಕುಮಾರ್, ಸಂಸದೆ ಸುಮಲತಾ ಅಂಬರೀಶ್, ವಿಧಾನಪರಿಷತ್ ಶಾಸಕರುಗಳಾದ ಮರಿತಿಬ್ಬೇಗೌಡ, ದಿನೇಶ್ ಗೂಳಿಗೌಡ, ಮಧು ಜಿ ಮಾದೇಗೌಡ, ಮತ್ತು ಗೋಪಾಲ್‌ಪುರ ಗ್ರಾಮ ಪಂಚಾಯಿತಿಯ ಉಪಾಧ್ಯಕ್ಷ ಕೆಂಪಾಚಾರಿ .ಕೆ.ಆರ್ ರವರು ಭಾಗವಹಿಸಲಿದ್ದಾರೆ.

ನೋಡಲ್ ಅಧಿಕಾರಿಗಳಾಗಿ ಪ.ರಾ.ಇ.ಉ ವಿಭಾಗದ ಕಿರಿಯ ಅಭಿಯಂತರ ಮಂಜುನಾಥ್ ಮತ್ತು ತಾಲೂಕು ಪಂಚಾಯಿತಿ ಸಹಾಯಕ ತಾಂತ್ರಿಕ ಅಭಿಯಂತರ ಮೋಹನ್‌ಗೌಡ ಭಾಗವಹಿಸಲಿದ್ದಾರೆ.

ಸ್ವಚ್ಛತಾ ನಿರ್ವಹಣಾ ಅಧ್ಯಯನಕ್ಕಾಗಿ

ಮೈಸೂರು ಪಾಲಿಕೆಯ ಒಂಭತ್ತು ಮಂದಿ ಪೌರಕಾರ್ಮಿಕರು ಸಿಂಗಾಪುರ ಪ್ರವಾಸ


ಮುರುಗೇಶ್


ಪಾರ್ವತಿ


ಶಂಕರಪ್ಪ


ವಿಜಯ್


ಆರ್ಮುಗಂ

ಮೈಸೂರು, ನ.19(ಎಸ್‌ಪಿಎನ್)– ಕರ್ನಾಟಕ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದಿಂದ ಸ್ವಚ್ಛತಾ ನಿರ್ವಹಣಾ ಅಧ್ಯಯನಕ್ಕಾಗಿ ಮೈಸೂರು ಮಹಾನಗರ ಪಾಲಿಕೆಯ ಒಂಭತ್ತು ಮಂದಿ ಪೌರಕಾರ್ಮಿಕರನ್ನು ಸಿಂಗಾಪುರಕ್ಕೆ ಕಳುಹಿಸಲಾಗುತ್ತಿದೆ.

ಈ ಪೌರಕಾರ್ಮಿಕರನ್ನು ಮೈಸೂರು ನಗರ ಪಾಲಿಕೆ ಆಯ್ಕೆ ಮಾಡಿದ್ದು, ಅದರಂತೆ ಖಾಯಂ ಪೌರಕಾರ್ಮಿಕ ರಾದ ರವಿ, ಆರ್.ವಿಜಯ್, ಆರ್ಮುಗಂ, ನೇರ ಪಾವತಿ ಪೌರಕಾರ್ಮಿಕರಾದ ಯಶವಂತ್ ರಾಜ್, ಶ್ರೀಮತಿ ಮಹಾದೇವಿ, ಆರ್.ಮುರುಗೇಶ, ಶ್ರೀಮತಿ ಪಾರ್ವತಿ, ಆನಂದಪ್ಪ, ಶಂಕರಪ್ಪ ಅವರು ನಾಳೆ (ನ.20) ಸಿಂಗಾಪುರ್‌ಗೆ ಪ್ರವಾಸ ಬೆಳೆಸಲಿ ದ್ದಾರೆ. ನ.24ರವರೆಗೆ ಈ ಪೌರಕಾರ್ಮಿಕರು ಅಧ್ಯಯನ ಪ್ರವಾಸದಲ್ಲಿ ಭಾಗವಹಿಸಿ ನಂತರ ಹಿಂತಿರುಗಲಿದ್ದಾರೆ. ಸಿಂಗಾಪುರ್ ಪ್ರವಾಸ ಕೈಗೊಂಡಿರುವ ಪೌರಕಾರ್ಮಿಕರಿಗೆ ಕರ್ನಾಟಕ ರಾಜ್ಯ ಡಾ.ಬಿ.ಆರ್. ಅಂಬೇಡ್ಕರ್ ಆದಿದ್ರಾವಿಡ (ಪೌರಕಾರ್ಮಿಕ) ಯುವಕರ ಅಭಿವೃದ್ಧಿ ಮಹಾಸಂಘದ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಪದಾಧಿಕಾರಿಗಳು ಶುಭಾಶಯ ಕೋರಿದ್ದಾರೆ.

ಸರ್ಕಾರಿ ಪಿಯು ಕಾಲೇಜಲ್ಲಿ ರಾಜ್ಯೋತ್ಸವ

ವಿದ್ಯಾರ್ಥಿಗಳು ಶೈಕ್ಷಣಿಕ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿ:ಎನ್.ಚಲುವರಾಯಸ್ವಾಮಿ

ಮಂಡ್ಯ, ನ.19– ವಿದ್ಯಾರ್ಥಿಗಳು ಶೈಕ್ಷಣಿಕ ಕ್ಷೇತ್ರದಲ್ಲಿ ಉತ್ತಮ ಫಲಿತಾಂಶ ಗಳಿಸಿದರೆ ನಮ್ಮ ರಾಜ್ಯ ಉನ್ನತ ಸ್ಥಾನಕ್ಕೆ ತಲುಪುತ್ತದೆ. ಇಂದಿನ ಮಕ್ಕಳೇ ಮುಂದಿನ ಭವಿಷ್ಯ ಎಂದು ಜಿಲ್ಲಾ ಉಸ್ತುವಾರಿ



ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಮದ್ದೂರು ತಾಲೂಕು ಕೊಪ್ಪ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಾಂಸ್ಕೃತಿಕ, ಕ್ರೀಡೆ, ರಾಷ್ಟ್ರೀಯ ಸೇವಾ ಯೋಜನೆ, ರೆಡ್‌ಕ್ರಾಸ್, ರೋವರ್ ಮತ್ತು ರೇಂಜರ್ ಚಟುವಟಿಕೆ ಹಾಗೂ ಕನ್ನಡ ರಾಜ್ಯೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವಿದ್ಯಾರ್ಥಿಗಳು ಸದಾ ಜ್ಞಾನ ಗಳಿಸುವಲ್ಲಿ ನಿರತರಾಗಿರಬೇಕು. ಎಲ್ಲಾ ಮಕ್ಕಳು ಉತ್ತಮ ಫಲಿತಾಂಶ ಗಳಿಸುವ ಕಡೆ ಗಮನ ಹರಿಸಿ ಎಂದರು.

ಗ್ರಾಮೀಣ ಭಾಗದ ವಿದ್ಯಾರ್ಥಿಗಳು ತುಂಬಾ ಪರಿಶ್ರಮ ಪಟ್ಟು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಆದರೆ ಅವರು ಉನ್ನತ ಶಿಕ್ಷಣ ಪಡೆಯಲು ಮನೆಯ ಆರ್ಥಿಕ ಪರಿಸ್ಥಿತಿ ಹಾಗೂ ಇನ್ನಿತರೆ ಕಾರಣಗಳು ಅಡ್ಡಿ ಬರುತ್ತದೆ. ಸರ್ಕಾರ ವಿದ್ಯಾರ್ಥಿಗಳು ಉನ್ನತ ವಿದ್ಯಾಭ್ಯಾಸಕ್ಕಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ ಅದನ್ನು ಸದುಪಯೋಗಪಡಿಸಿಕೊಳ್ಳಿ ಎಂದರು. ನಮ್ಮ ದೇಶ ಬಹುಜನ, ಸರ್ವ ಧರ್ಮ ಸಮಾಜ ಹೊಂದಿದೆ. ಜಾತ್ಯತೀತ ರಾಷ್ಟ್ರ ಮತ್ತು ಒಕ್ಕೂಟದ ವ್ಯವಸ್ಥೆಯಲ್ಲಿ ಇಡೀ ರಾಷ್ಟ್ರದ ಯಾವುದೇ ಭಾಗದಲ್ಲಿ ಜೀವಿಸುವ, ಉದ್ಯೋಗ ಮಾಡುವ, ಅಧಿಕಾರವನ್ನು ಹೊಂದಿದ್ದು ನಮ್ಮ ಜಲ, ನಮ್ಮ ನೆಲವನ್ನು ಮೊದಲು ಗೌರವಿಸಬೇಕು ಎಂದರು.

ಇದೇ ಸಂದರ್ಭದಲ್ಲಿ ಸರ್ಕಾರಿ ಮಹಾ ವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ. ಶಿವರಾಮು ಎಂ.ವೈ, ನಿವೃತ್ತ ಇಂಜಿನಿಯರ್ ಕೆ.ಟಿ. ಜಗದೀಶ್, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಅಣ್ಣಯ್ಯ ತೈಲೂರು ಸೇರಿದಂತೆ ಇನ್ನಿತರರಿದ್ದರು.

ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರಗೆ ಅಭಿನಂದನೆ



ಪಾಂಡವಪುರ, ನ.19– ಇದೇ ಮೊದಲ ಬಾರಿಗೆ ಕ್ಷೇತ್ರಕ್ಕೆ ಆಗಮಿಸಿದ ಬಿಜೆಪಿ ನೂತನ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಮೇಲು ಕೋಟೆ ವಿಧಾನಸಭಾ ಕ್ಷೇತ್ರದ ಬಿಜೆಪಿ ಮುಖಂಡರು, ಕಾರ್ಯಕರ್ತರು ಅಭಿನಂದಿಸಿದರು.

ಕೆ.ಆರ್.ಪೇಟೆಯಿಂದ ಮೈಸೂರಿಗೆ ತೆರಳುವ ಮಾರ್ಗಮಧ್ಯೆ ತಾಲೂಕಿನ ಬೆಟ್ಟಹಳ್ಳಿ ಗ್ರಾಮದ ಬಳಿ ಬಿಜೆಪಿ ಮುಖಂಡರು ಅಭಿನಂದನೆ ಸಲ್ಲಿಸಿದರು.

ಈ ವೇಳೆ ಮುಖಂಡ ಡಾ.ಎನ್.ಎಸ್. ಇಂದ್ರೇಶ್ ಮಾತನಾಡಿ, ಬಿ.ವೈ.ವಿಜಯೇಂದ್ರ ಅವರು ರಾಜ್ಯಾಧ್ಯಕ್ಷರಾದ ಬಳಿಕ ಪಕ್ಷಕ್ಕೆ, ಕಾರ್ಯಕರ್ತರಲ್ಲಿ ಮತ್ತಷ್ಟು ಉತ್ಸಾಹ ಬಂದಿದೆ. ಬಿಜೆಪಿ ರಾಜ್ಯಾಧ್ಯಕ್ಷ, ವಿಪಕ್ಷ ನಾಯಕರನ್ನು ನೇಮಿಸಲಿಲ್ಲ ಎಂದು ಟೀಕಿಸುತ್ತಿದ್ದ ಕಾಂಗ್ರೆಸ್‌ಗೆ ಪಕ್ಷದ ಹೈಕಮಾಂಡ್ ಒಂದೇ ವಾರದಲ್ಲಿ ಎರಡು ಹುದ್ದೆಗಳನ್ನು ನೇಮಿಸುವ ಮೂಲಕ ಉತ್ತರ ನೀಡಿದೆ. ವಿಜಯೇಂದ್ರ ನೇತೃತ್ವದಲ್ಲಿ ಮುಂಬರುವ ದಿನಗಳಲ್ಲಿ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲಿದೆ. ಜೊತೆಗೆ ಮುಂಬರುವ ಲೋಕಸಭೆ ಚುನಾವಣೆಯಲ್ಲಿ 28 ಕ್ಷೇತ್ರಗಳಲ್ಲೂ ಬಿಜೆಪಿ ಅಭ್ಯರ್ಥಿಗಳು ಜಯ ಗಳಿಸಲಿದ್ದು, ಕೇಂದ್ರದಲ್ಲಿ ಮತ್ತೊಮ್ಮೆ ಬಿಜೆಪಿ ಅಧಿಕಾರ ಹಿಡಿಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಈ ವೇಳೆ ಮುಖಂಡಾದ ಬಿಜೆಪಿ ಅಧ್ಯಕ್ಷ ಅಶೋಕ್, ಮುಖಂಡರಾದ ನಿರಂಜನ್‌ಬಾಬು, ಮಂಗಳ ನವೀನ್, ಸ್ವಾಮಿ, ಅಶೋಕ್, ಗ್ರಾಪಂ ಸದಸ್ಯರಾದ ಪ್ರಕಾಶ್, ಜಯಣ್ಣಚಾರಿ, ಬೇಬಿ ಲೋಕೇಶ್, ಚಿಕ್ಕಣ್ಣ, ನವೀನ್‌ಕುಮಾರ್ ಸೇರಿದಂತೆ ಇನ್ನಿತರರಿದ್ದರು.

ಪುರುಷರ ವಾಲಿಬಾಲ್ ಪಂದ್ಯಾವಳಿಯಲ್ಲಿ ಮಹಾಜನ ಕಾಲೇಜಿಗೆ ಪ್ರಥಮ ಸ್ಥಾನ



ಮೈಸೂರಿನ ಕ್ರೈಸ್ಟ್ ಕಾಲೇಜು ಆಯೋಜಿಸಿದ್ದ, ಪುರುಷರ ಅಂತರ ಕಾಲೇಜು ವಾಲಿಬಾಲ್ ಪಂದ್ಯಾವಳಿ ಯಲ್ಲಿ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜು ತಂಡವು ಜೆಎಸ್‌ಎಸ್ ಕಾಲೇಜಿನ ವಿರುದ್ಧ 2–0 ಅಂತರದಲ್ಲಿ ಜಯಶೀಲರಾಗಿ, ಪ್ರಥಮ ಸ್ಥಾನ ಪಡೆದುಕೊಂಡಿತು. ಚಿತ್ರದಲ್ಲಿ (ಎಡದಿಂದ ಬಲಕ್ಕೆ ಕುಳಿತಿ ರುವವರು): ಡಾ. ಸೋಮಶೇಖರ ಕೆ.ಕೆ, ದೈಹಿಕ ಶಿಕ್ಷಣ ನಿರ್ದೇಶಕ ಪಿ.ಎಸ್. ಮಧುಸೂಧನ, ಪ್ರಾಂಶುಪಾಲ ಡಾ. ಬಿ.ಆರ್. ಜಯಕುಮಾರಿ, ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್, ಶೈಕ್ಷಣಿಕ ಸಲಹೆಗಾರರಾದ ಡಾ. ಎಸ್.ಆರ್. ರಮೇಶ್, ದೈಹಿಕ ಶಿಕ್ಷಣ ನಿರ್ದೇಶಕ ರಾದ ಡಾ. ಹೆಚ್.ಎನ್. ಭಾಸ್ಕರ್, ತಂಡದ ನಾಯಕ ರಾಹುಲ್ ಬುದ್ಧ, (ಎಡದಿಂದ ಬಲಕ್ಕೆ ನಿಂತಿರುವವರು): ಸೋಮಶೇಖರ್, ತೇಜಸ್ ಎನ್.ಆರ್, ಶ್ರೀನಿವಾಸ ಜಿ, ವಿಕಾಶ್ ಎಸ್.ಎಸ್, ಅರುಣ್‌ಕುಮಾರ್ ಎಸ್, ಆದರ್ಶ ಎನ್. ಗೌಡ, ಕುಶಾಲ್ ಹೆಚ್.ಜೆ, ತುಷಾರ್‌ಗೌಡ ಕೆ.ಕೆ, ವರುಣ್‌ನಾಯಕ್, ಪವನ್‌ಗೌಡ, ಸ್ವರೂಪ್ ಕುಮಾರ್ ಎಸ್, ಕಾರ್ತಿಕ್ ಡಿ. ಅವರನ್ನು ಕಾಣಬಹುದು.

ಅಂತಾರಾಷ್ಟ್ರೀಯ ಕರಾಟೆ ಚಾಂಪಿಯನ್ ಶಿಪ್‌ಗೆ ಚಾಲನೆ

ಸ್ವಯಂ ರಕ್ಷಣೆಗೆ ಕರಾಟೆ ಕಲಿಕೆ ಅನಿವಾರ್ಯ

ಡಿಸಿಎಫ್ ಡಾ.ಕೆ.ಎನ್. ಬಸವರಾಜ ಅಭಿಮತ

ಮೈಸೂರು, ನ.19– ಸ್ವಯಂ ರಕ್ಷಣೆಗೆ ಕರಾಟೆ ಕಲಿಕೆ ಮುಖ್ಯ ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ಕೆ.ಎನ್. ಬಸವರಾಜ ಹೇಳಿದರು.

ಚಾಮುಂಡಿವಿಹಾರ ಒಳಾಂಗಣ ಕ್ರೀಡಾಂಗಣದಲ್ಲಿ ಶನಿವಾರ ಅಂತಾರಾಷ್ಟ್ರೀಯ ಕರಾಟೆ ಚಾಂಪಿಯನ್ ಶಿಪ್‌ಗೆ ಚಾಲನೆ ನೀಡಿ ಮಾತನಾಡಿದ ಅವರು, ಯುಪಿಎಸ್ಸಿ ಮೂಲಕ ಐಎಎಸ್, ಐಪಿಎಸ್, ಐಎಫ್‌ಎಸ್ ಸೇವೆಗೆ ಆಯ್ಕೆಯಾದರೆ ಮಸ್ಸೂರಿಯಲ್ಲಿ ನಡೆಯುವ ತರಬೇತಿಯಲ್ಲಿ ಕರಾಟೆ ಕಲಿಕೆ ಕಡ್ಡಾಯ. ನಾನು ಕೂಡ ತರಬೇತಿಯಲ್ಲಿದ್ದಾಗ ಕಲಿತಿದ್ದೇನೆ ಎಂದರು.



2021–22ರಲ್ಲಿ ಒಲಂಪಿಕ್ಸ್‌ನಲ್ಲಿ ಕರಾಟೆ ಪಂದ್ಯಾವಳಿಯನ್ನೂ ಕೂಡ ಸೇರಿಸಿದ್ದು ಸ್ವಾಗತಾರ್ಹವಾಗಿದೆ ಎಂದ ಅವರು, ಆಟದಲ್ಲಿ ಸೋಲು– ಗೆಲುವು ಇದ್ದೇ ಇರುತ್ತದೆ. ಆದರೆ ಪ್ರತಿಯೊಬ್ಬರೂ ಕ್ರೀಡಾ ಸ್ಫೂರ್ತಿಯಿಂದ ಸಕ್ರಿಯವಾಗಿ ಭಾಗವಹಿಸುವಿಕೆ ಮುಖ್ಯವಾಗುತ್ತದೆ ಎಂದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಕೆಆರ್‌ಎಸ್ ಆಧುನೀಕರಣ ಮತ್ತು ಮಧ್ಯಮ ನೀರಾವರಿ ಯೋಜನಾ ವೃತ್ತದ ಅಧೀಕ್ಷಕ ಎಂಜಿನಿಯರ್ ಕೆ. ರಘುರಾಮನ್ ಅವರು ಕತಾ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್ ಅವರು ಕುಮಿತೆ, ಪಾಲಿಕೆ ಮಾಜಿ ಸದಸ್ಯೆ ಸವಿತಾ ಸುರೇಶ್ ಅವರು ಬಾಲಕಿಯರ ಕುಮಿತೆ ಪಂದ್ಯ ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಅಂತಾರಾಷ್ಟ್ರೀಯ ಕರಾಟೆ ಸಂಯೋಜಕ ಸಂಜೀವ್ ಶ್ರೇಷ್ಠ ಅವರನ್ನು ಸನ್ಮಾನಿಸಲಾಯಿತು. ಶೀರ್ಪುಗಾರ ಚಿದಾನಂದ ಉಪಸ್ಥಿತರಿದ್ದರು. ಎಸ್. ಸುನಿಲ್ ಕುಮಾರ್ ಸ್ವಾಗತಿಸಿದರು. ಅಮೂಲ್ಯ ಎಸ್. ಕುಮಾರ್ ಪ್ರಾರ್ಥಿಸಿದರು. ಅಮೂಲ್ಯ ವಂದಿಸಿದರು.

ಎರಡು ದಿನಗಳ ಈ ಕರಾಟೆ ಪಂದ್ಯಾವಳಿಯಲ್ಲಿ 1450 ಕರಾಟೆ ಪಟುಗಳು ಭಾಗಿಯಾಗಿದ್ದಾರೆ. ಮೈಸೂರು, ಬೆಂಗಳೂರು, ಹಾಸನ, ಹುಣಸೂರು, ಗೋಣಿಕೊಪ್ಪ, ಕೊಪ್ಪ, ಕುಶಾಲನಗರ, ಅರಕಲಗೂಡು, ಸಕಲೇಶಪುರ, ಕೊಳ್ಳೇಗಾಲ, ಟಿ. ನರಸೀಪುರದ ನೂರಾರು ಕರಾಟೆ ಪಟುಗಳು ಪಾಲ್ಗೊಂಡಿದ್ದರು. ಕೇರಳದ 120, ಕೊಲ್ಕತ್ತಾದ 42, ತಮಿಳುನಾಡಿನ– 18, ಪಾಂಡಿಚೇರಿಯ– 12, ದುಬೈನ– 12, ಶ್ರೀಲಂಕಾದ– 5 ಮಂದಿ ಪಾಲ್ಗೊಂಡಿರುವುದು ವಿಶೇಷ ಎಂದು ಶೋರಿನ್ ಕಾಯ್ ದಕ್ಷಿಣ ಏಷ್ಯಾ ಪ್ರತಿನಿಧಿಯೂ ಆಗಿರುವ ಎಸ್. ಸುನಿಲ್ ಕುಮಾರ್ ತಿಳಿಸಿದರು.

ಮೈಸೂರು ಮಿತ್ರ ಸೋಮವಾರ 20 ನವೆಂಬರ್ 2023

ಸ್ಪರ್ಧೆಯಲ್ಲಿ ಭಾಗವಹಿಸುವ ಮಕ್ಕಳಿಗೆ ಪ್ರೋತ್ಸಾಹ ಅಗತ್ಯ

'ಕೊಡವ ನಮ್ಮೆ'ಯಲ್ಲಿ ಕೊಡವ ಸಮಾಜಗಳ ಒಕ್ಕೂಟದ ಅಧ್ಯಕ್ಷ ಕಳ್ಳಿಚಂಡ ವಿಷ್ಣು ಕಾರ್ಯಪ್ಪ



ವಿರಾಜಪೇಟೆ, ನ.19– ಕೊಡವ ಸಾಂಸ್ಕೃತಿಕ ಕಲೆಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಅಂತರ ಕೊಡವ ಸಮಾಜಗಳ ಪೈಪೋಟಿಯನ್ನು ಏರ್ಪಡಿಸಲಾಗಿದ್ದು, ಸ್ಪರ್ಧೆಯಲ್ಲಿ ಭಾಗವಹಿಸುವ ಮಕ್ಕಳಿಗೆ ಪೋಷಕರು ಪ್ರೋತ್ಸಾಹ ನೀಡಬೇಕು ಎಂದು ಕೊಡವ ಸಮಾಜಗಳ ಒಕ್ಕೂಟದ ಅಧ್ಯಕ್ಷ ಕಳ್ಳಿಚಂಡ ವಿಷ್ಣು ಕಾರ್ಯಪ್ಪ ಮನವಿ ಮಾಡಿದರು.

ಬಾಳುಗೋಡುವಿನಲ್ಲಿರುವ ಕೊಡವ ಸಮಾಜಗಳ ಒಕ್ಕೂಟದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಸಾಂಸ್ಕೃತಿಕ ಕೇಂದ್ರದಲ್ಲಿ ಆಯೋಜಿಸಲಾಗಿದ್ದ ರಾಜ್ಯ ಮಟ್ಟದ ಕೊಡವ ಸಾಂಸ್ಕೃತಿಕ ಸ್ಪರ್ಧೆ 'ಕೊಡವ ನಮ್ಮೆ' ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು ಕ್ರೀಡೆಯಲ್ಲಿ ಯುವಕರು ಭಾಗವಹಿಸಬೇಕು. ಇದಕ್ಕೆ ಪೋಷಕರು ಸಹಕಾರ ನೀಡಬೇಕು. ಕ್ರೀಡೆಯಿಂದ ಆರೋಗ್ಯ ಉತ್ತಮವಾಗಿರುತ್ತದೆ ಎಂದರಲ್ಲದೆ ಪ್ರತಿಯೊಬ್ಬರಿಗೂ ಸಮಯ ಪಾಲನೆ ಮುಖ್ಯವಾಗಿರುತ್ತದೆ ಎಂದರು.

ಸಾಂಸ್ಕೃತಿಕ ಸ್ಪರ್ಧೆಗೆ ಅತಿಥಿಗಳು ದುಡಿ ಕೋಟ್ ಪಾಟ್ ನುಡಿಸುವ ಮೂಲಕ ಚಾಲನೆ ನೀಡಿದರು. ಸಾಂಸ್ಕೃತಿಕ ಸಮಿತಿ ಅಧ್ಯಕ್ಷರಾದ ಕಾಳಿಮಾಡ ಎಂ.ಮೋಟಯ್ಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ ಸಾಂಸ್ಕೃತಿಕ ಸ್ಪರ್ಧಾ ಕಾರ್ಯಕ್ರಮದಲ್ಲಿ ಭಾಗವಹಿಸುವವರು ಸ್ಪರ್ಧೆಯ ನಿಯಮವನ್ನು ಪಾಲಿಸುವಂತೆ ಮಾಹಿತಿ ನೀಡಿದರು.

ವೇದಿಕೆಯಲ್ಲಿ ಸಮಾಜದ ಉಪಾಧ್ಯಕ್ಷ ಮಲೆಟಿರ ಅಭಿಮಾನ್ಯು ಕುಮಾರ್, ಕರೋಟಿರ ಪೆಮ್ಮಯ್ಯ, ಕಾರ್ಯದರ್ಶಿ ವಟೇರಿರ ಶಂಕರಿ ಪೂವಯ್ಯ, ಖಜಾಂಚಿ ಚೆರಿಯಪಂಡ ಕಾಶಿಯಪ್ಪ, ಹಿರಿಯರಾದ ಮಲ್ಲೆಂಗಡ ದಾದ ಬೆಳ್ಯಪ್ಪ, ಸಮಿತಿಯ ತಂಬು ಕುತ್ತಿರ ಮದು ಮಂದಣ್ಣ, ಕುಂಬೆರ ಮನು ಕುಮರ್, ಪೊಮ್ಮಕ್ಕಡ ಒಕ್ಕೂಟದ ಅಧ್ಯಕ್ಷರಾದ ರೀತಾ ದೇಚಮ್ಮ ಉಪಸ್ಥಿತರಿದ್ದರು.

ಮಂದ್ ಮರೆಯುವ ಕಾರ್ಯಕ್ರಮ ನಡೆದ ಬಳಿಕ ಅಂತರ ಕೊಡವ ಸಮಾಜಗಳಿಂದ ಕೋಲಾಟ್, ಕತ್ತಿಯಾಟ್, ಉಮ್ಮತ್ತಾಟ್, ಪರಿಯಕಳಿ, ಸಮ್ಮಂದ ಅಡುಕುವೊ, ಬಾಳೋ ಪಾಟ್, ತಾಲಿಪಾಟ್, ಬೊಳಕಾಟ್ ಸಾಂಸ್ಕೃತಿಕ ಸ್ಪರ್ಧೆಗಳು ನಡೆಯಿತು. ಮಧ್ಯಾಹ್ನದ ನಂತರ ಹಾಕಿ ಪೈನಲ್ಸ್ ಪಂದ್ಯಾಟ ನಡೆಯಿತು.

ಮಾಜಿ ಪ್ರಧಾನಿ ದಿ. ಇಂದಿರಾಗಾಂಧಿ ಮಹಿಳೆಯರಿಗೆ ಮಾದರಿ

ಮಡಿಕೇರಿಯಲ್ಲಿ ಇಂದಿರಾ ಗಾಂಧಿಯವರ ಜನ್ಮದಿನ ಆಚರಣೆ



ಮಡಿಕೇರಿ, ನ.19– ಮಾಜಿ ಪ್ರಧಾನಿ ಉಕ್ಕಿನ ಮಹಿಳೆ ಇಂದಿರಾ ಗಾಂಧಿಯವರ ಬದುಕು ದೇಶದ ಎಲ್ಲಾ ಮಹಿಳೆಯರಿಗೆ ಮಾದರಿಯಾಗಿದೆ ಎಂದು ಕೊಡಗು ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಸುರಯ್ಯ ಅಬ್ರಾರ್ ಅಭಿಪ್ರಾಯಪಟ್ಟಿದ್ದಾರೆ.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಕೊಡಗು ಜಿಲ್ಲಾ ಮಹಿಳಾ ಕಾಂಗ್ರೆಸ್ ವತಿಯಿಂದ ನಡೆದ ಇಂದಿರಾ ಗಾಂಧಿಯವರ 106ನೇ ಜನ್ಮ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತ ನಾಡಿದ ಅವರು ಇಂದಿರಾ ಗಾಂಧಿಯವರು ಸ್ವಾತಂತ್ರ್ಯ ಹೋರಾಟದ ಮೂಲಕ ಸಾರ್ವಜನಿಕ ಜೀವನ ಆರಂಭಿಸಿ ದೇಶದ ಪ್ರಧಾನಿಯಾಗಿ ಅಪ್ರತಿಮ ಸಾಧನೆ ಮಾಡಿ ಎಲ್ಲಾ ಮಹಿಳೆಯರಿಗೆ ಮಾದರಿಯಾಗಿದ್ದಾರೆ. ಇಂದಿರಾಗಾಂಧಿ ಅವರ ಆದರ್ಶಗಳನ್ನು ಪ್ರತಿಯೊಬ್ಬರು ಪಾಲಿಸ ಬೇಕು ಎಂದು ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ರಾಜೀವ್ ಗಾಂಧಿ ಪಂಚಾಯತ್ ರಾಜ್ ಸಂಘಟಣೆಯ ಜಿಲ್ಲಾಧ್ಯಕ್ಷೆ ತೆನ್ನಿರ ಮೈನಾ ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರು ತಮ್ಮ ಕೊನೆಯ ಭಾಷಣದಲ್ಲಿ 'ನನ್ನ ದೇಹದಲ್ಲಿರುವ ಕೊನೆಯ ರಕ್ತದ ಹನಿ ಕೂಡ ದೇಶಕ್ಕಾಗಿ ಮೀಸಲಾಗಿದೆ' ಎಂದು ನುಡಿದಿದ್ದರು. ಅದೇ ರೀತಿ ಅವರು ದೇಶಕ್ಕಾಗಿ ಹುತಾತ್ಮರಾದರು ಎಂದು ಬಣ್ಣಿಸಿದರು. ಬದುಕುವ ಜನರಿಗೆ ಭೂಮಿಯ ಹಕ್ಕು ನೀಡಿದ ಇಂದಿರಾ ಜಗತ್ತಿನ ಸಮಾಜ ಸುಧಾರಕರ ಸಾಲಿಗೆ ಸೇರುತ್ತಾರೆ ಎಂದು ಹೇಳಿದರು.

ಮಡಿಕೇರಿ ನಗರ ಸಭೆಯ ಮಾಜಿ ಉಪಾಧ್ಯಕ್ಷ ಟಿ.ಎಂ.ಅಯ್ಯಪ್ಪ ಮಾತನಾಡಿ ಇಂದಿರಾ ಗಾಂಧಿಯವರ ದಿಟ್ಟತನದ ಆಡಳಿತದಿಂದ ಭಾರತ ಸುಭದ್ರವಾಯಿತು ಎಂದರು. ನಗರ ಕಾಂಗ್ರೆಸ್ ಉಪಾಧ್ಯಕ್ಷ ಯಾಕುಬ್ ಮಾತನಾಡಿ ಪೋಖ್ರಾನ್ ಅಣು ಪರೀಕ್ಷೆ ನಡೆಸುವ ಮೂಲಕ ಭಾರತವನ್ನು ಬಲಿಷ್ಠ ರಾಷ್ಟ್ರ ಎಂದು ಇಂದಿರಾ ಗಾಂಧಿ ಪ್ರಪಂಚಕ್ಕೆ ಪರಿಚಯಿಸಿದರು ಎಂದು ತಿಳಿಸಿದರು. ಇಂದಿರಾ ಜನ್ಮ ದಿನಾಚರಣೆ ಪ್ರಯುಕ್ತ ಕೇಕ್ ಕತ್ತರಿಸಿ ಹಂಚಲಾಯಿತು. ಕಚೇರಿಯಲ್ಲಿ ರಂಗೋಲಿ ಹಾಕಿ, ಇಂದಿರಾಗಾಂಧಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಗೌರವ ಅರ್ಪಿಸಲಾಯಿತು.

ಕೊಡಗು ಜಿಲ್ಲಾ ಕಾಂಗ್ರೆಸ್ ಗೌರವ ಕಾರ್ಯದರ್ಶಿ ವಿ.ಪಿ.ಸುರೇಶ್, ನಗರಸಭೆಯ ಮಾಜಿ ಅಧ್ಯಕ್ಷೆ ಜುಲೇಕಾಬಿ, ಸೈನಿಕ ಘಟಕದ ಅಧ್ಯಕ್ಷ ಬೊಳ್ಳಿಯಂಡ ಗಣೇಶ್, ನಗರ ಮಹಿಳಾ ಅಧ್ಯಕ್ಷೆ ಹೊಟ್ಟೆಯಂಡ ಫ್ಯಾನ್ಸಿ ಪಾರ್ವತಿ, ಪ್ರಮುಖರಾದ ಮಮ್ತಾಜ್ ಬೇಗಂ, ಸದಾ ಡೆನ್ನಿಸ್, ಕಿಮ್ಮುಡಿರ ಸೋಮಣ್ಣ, ಪ್ರೇಮಾ ಕೃಷ್ಣಪ್ಪ ಪ್ರೇಮಾ ಲಿಂಗಪ್ಪ ರಿಯಾಜ್, ಸೈಮನ್, ರಾಣಿ ಸೇರಿದಂತೆ ಕಾರ್ಯಕರ್ತರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಇಂದು ಕೊಡಗು ಜಿಲ್ಲಾ ಮಟ್ಟದ ಯುವಜನೋತ್ಸವ

ಮಡಿಕೇರಿ, ನ.19– ಜಿಲ್ಲಾಡಳಿತ, ಜಿಪಂ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನೆಹರು ಯುವ ಕೇಂದ್ರ, ಕೊಡಗು ಜಿಲ್ಲಾ ಯುವ ಒಕ್ಕೂಟ, ಮಡಿಕೇರಿ, ಸೋಮವಾರಪೇಟೆ, ವಿರಾಜಪೇಟೆ ತಾಲೂಕು ಯುವ ಒಕ್ಕೂಟ, ಹಾಗೂ ಬೆಟ್ಟದಹಳ್ಳಿ ಸಿದ್ಧಾರ್ಥನಗರ ಮಾನವತಾ ಯುವಕ ಸಂಘ ಇವರ ಸಂಯುಕ್ತ ಆಶ್ರಯದಲ್ಲಿ ಕೊಡಗು ಜಿಲ್ಲಾ ಮಟ್ಟದ ಯುವಜನೋತ್ಸವ ಕಾರ್ಯಕ್ರಮವು ನ.20 ರಂದು ಬೆಳಗ್ಗೆ 9 ಗಂಟೆಗೆ ಶಾಂತಳ್ಳಿ ಶ್ರೀ ಕುಮಾರಲಿಂಗೇಶ್ವರ ಪ್ರೌಢ ಶಾಲಾ ಸಭಾಂಗಣದಲ್ಲಿ ನಡೆಯಲಿದೆ.

ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಶಾಸಕ ಡಾ.ಮಂತರ್ ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಶಾಸಕ ಎ.ಎಸ್. ಪೊನ್ನಣ್ಣ, ಸಂಸದ ಪ್ರತಾಪ್ ಸಿಂಹ, ವಿಧಾನಪರಿಷತ್ ಸದಸ್ಯರಾದ ಎಂ.ಪಿ. ಸುಜಾ ಕುಶಾಲಪ್ಪ, ಎಸ್.ಎಲ್.ಭೋಜೇಗೌಡ, ಬೆಟ್ಟದಳ್ಳಿ ಗ್ರಾ.ಪಂ. ಅಧ್ಯಕ್ಷ ತಮ್ಮಯ್ಯ, ಉಪಾಧ್ಯಕ್ಷೆ ವಿಮಲಾಕ್ಷಿ, ಶಾಂತಳ್ಳಿ ಗ್ರಾ.ಪಂ. ಅಧ್ಯಕ್ಷೆ ಎಸ್.ವಿ.ಸವಿತ ಇತರರು ಪಾಲ್ಗೊಳ್ಳಲಿದ್ದಾರೆ.

ಮುಳ್ಳುಸೋಗೆ ತಾಪಂ ಆವರಣದಲ್ಲಿ ಶಾಸಕರ ಕಚೇರಿ ಉದ್ಘಾಟನೆ



ಕುಶಾಲನಗರ, ನ.19– ಕುಶಾಲನಗರ ಮುಳ್ಳುಸೋಗೆ ತಾಲೂಕು ಪಂಚಾಯತಿ ಕಚೇರಿಯಲ್ಲಿ ಭಾನುವಾರ ಶಾಸಕರ ಕಚೇರಿ ಉದ್ಘಾಟನೆ ಮಾಡಲಾಯಿತು.

ತಮ್ಮ ಕಚೇರಿ ಉದ್ಘಾಟಿಸಿದ ಶಾಸಕ ಡಾ.ಮಂಥರ್ ಗೌಡ ಮಾತನಾಡಿ, ಪ್ರತಿ ಮಂಗಳವಾರ ತಾನು ಕಚೇರಿಯಲ್ಲಿ ಲಭ್ಯವಿದ್ದು, ಸಾರ್ವಜನಿಕರು ತಮ್ಮ ಅಹವಾಲು, ಕುಂದುಕೊರತೆ ಸಲ್ಲಿಸಬಹುದು ಎಂದರು.

ಮಾಜಿ ಪ್ರಧಾನಿ ಇಂದಿರಾ ಗಾಂಧಿ ಜನ್ಮದಿನದಂದು ನೂತನ ಕಛೇರಿ ಉದ್ಘಾಟಿಸುತ್ತಿರುವುದು ಹೆಮ್ಮೆಯ ಸಂಗತಿ ಎಂದು ತಿಳಿಸಿದ ಶಾಸಕರು ಇದೇ ಪ್ರಥಮ ಬಾರಿಗೆ ತಾಲೂಕಿನಲ್ಲಿ ಕಛೇರಿ ಆರಂಭಿಸಿದ್ದು ಎಲ್ಲರೂ ಮುಕ್ತವಾಗಿ ಇಲ್ಲಿಗೆ ಧಾವಿಸಿ ಸಮಸ್ಯೆ ಹೇಳಿಕೊಳ್ಳಬಹುದು. ಅಧಿಕಾರಿ ವರ್ಗ ಅಗತ್ಯ ಪರಿಹಾರ ಕ್ರಮಕೈಗೊಳ್ಳಲಿದ್ದಾರೆ ಎಂದರು.

ಕಛೇರಿ ಉದ್ಘಾಟನೆಗೂ ಮುನ್ನ ಮುಳ್ಳುಸೋಗೆ ದೊಡ್ಡಮ್ಮ ತಾಯಿ ದೇವಾಲಯದಲ್ಲಿ ಶಾಸಕರು ಪೂಜೆ ಸಲ್ಲಿಸಿದರು. ಈ ಸಂದರ್ಭ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿ.ಪಿ.ಶಶಿಧರ್, ಜಿಪಂ ಮಾಜಿ ಅಧ್ಯಕ್ಷೆ ಕೆ.ಪಿ.ಚಂದ್ರಕಲಾ, ನಗರ ಕಾಂಗ್ರೆಸ್ ಅಧ್ಯಕ್ಷ ಪ್ರಮೋದ್ ಮುತ್ತಪ್ಪ, ಪುರಸಭೆ ಸದಸ್ಯ ಎಂ.ಕೆ.ದಿನೇಶ್, ಪ್ರಮುಖರಾದ ಕೆ.ಕೆ.ಮಂಜುನಾಥ್ ಕುಮಾರ್, ಶಿವಶಂಕರ್, ಕಿರಣ್, ಜಿ.ಬಿ.ಜಗದೀಶ್, ನಟೇಶ್ ಗೌಡ, ಚಂದ್ರಶೇಖರ್, ಸುನಿತಾ, ತಾಪಂ ಇಒ ಜಯಣ್ಣ ಸೇರಿದಂತೆ ಅಧಿಕಾರಿ ವರ್ಗದ ವರು, ವಿವಿಧ ಘಟಕಗಳ ಪ್ರಮುಖರು, ಕಾರ್ಯಕರ್ತರು ಇದ್ದರು. ಕಛೇರಿ ಉದ್ಘಾಟನೆ ಮುನ್ನ ಕಾಂಗ್ರೆಸ್ ಪ್ರಮುಖರಾದ ಎಂ.ಕೆ. ದಿನೇಶ್, ಪ್ರಮೋದ್ ಮುತ್ತಪ್ಪ, ಪ್ರಕಾಶ್, ರಂಜನ್ ಮತ್ತಿತರರ ನೇತೃತ್ವದಲ್ಲಿ ಗಣಪತಿ ಹೋಮ ನೆರವೇರಿಸಲಾಯಿತು. ಇದೇ ಸಂದರ್ಭ ಶಾಸಕ ಮಂಥರ್‌ಗೌಡ ಅವರನ್ನು ಸನ್ಮಾನಿಸಲಾಯಿತು.

ವಿವಿಧ ಮತಗಟ್ಟೆ ಕೇಂದ್ರಗಳಿಗೆ ಡಿಸಿ ಭೇಟಿ



ಮಡಿಕೇರಿ, ನ.19– ಮತದಾರರ ಪಟ್ಟಿ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ 2024 ರ ಸಂಬಂಧ ಅರ್ಹ ಮತದಾರರು ಮತದಾರರ ಪಟ್ಟಿಗೆ ಹೆಸರು ನೋಂದಾಯಿಸಲು, ತಿದ್ದುಪಡಿ ಇತ್ಯಾದಿ ಸಂಬಂಧ ಮತಗಟ್ಟೆಗಳಲ್ಲಿ ವಿಶೇಷ ಶಿಬಿರ ಹಮ್ಮಿಕೊಂಡಿದ್ದು, ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ವೆಂಕಟ್ ರಾಜಾ ಅವರು ಜಿಲ್ಲೆಯ ವಿವಿಧ ಮತಗಟ್ಟೆಗಳಿಗೆ ಭೇಟಿ ನೀಡಿ ಮತಗಟ್ಟೆ ಮಟ್ಟದ ಅಧಿಕಾರಿಗಳಿಂದ ಮಾಹಿತಿ ಪಡೆದರು. ಚುನಾವಣಾ ಆಯೋಗದ ನಿರ್ದೇಶನಗಳನ್ನು ಪಾಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು. ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಎನ್.ವೀಣಾ, ತಹಶೀಲ್ದಾರರು ಇತರರಿದ್ದರು.

ತೋಟದ ಮನೆ ಹಿಂಭಾಗದಲ್ಲಿ ಗಾಂಜಾ ಬೆಳೆದಿದ್ದವನ ಬಂಧನ



ವಿರಾಜಪೇಟೆ, ನ.19– ತೋಟದ ಮನೆಯ ಹಿಂಭಾಗದಲ್ಲಿ ಗಾಂಜಾ ಗಿಡಗಳನ್ನು ಬೆಳೆದಿದ್ದ ಆರೋಪಿಯನ್ನು ಗೋಣಿಕೊಪ್ಪ ಮತ್ತು ವಿರಾಜಪೇಟೆ ಪೊಲೀಸರು ಮಾಲು ಸಹಿತ ವಶಕ್ಕೆ ಪಡೆದಿದ್ದಾರೆ.

ಕಂಡಂಗಾಲ ಗ್ರಾಮದ ನಿವಾಸಿ ವಿಜಯ್ ಭೀಮಯ್ಯ(39) ಎಂಬಾತನೆ ಆರೋಪಿಯಾಗಿದ್ದು, 1 ಕೆಜಿ 606 ಗ್ರಾಂ ಹಸಿ ಗಾಂಜಾವನ್ನು ವಶಪಡಿಸಿಕೊಂಡು ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಖಚಿತ ಮಾಹಿತಿ ದೊರೆತ ಹಿನ್ನೆಲೆ ಪೊಲೀಸರು ದಾಳಿ ನಡೆಸಿದಾಗ ತೋಟದ ಮನೆಯ ಹಿಂಭಾಗದಲ್ಲಿ ಗಾಂಜಾ ಗಿಡಗಳನ್ನು ಬೆಳೆದಿರುವುದು ಕಂಡುಬಂದಿದೆ. ತಕ್ಷಣ ಕಾರ್ಯಪ್ರವೃತ್ತರಾದ ಪೊಲೀಸರು ಆರೋಪಿಯನ್ನು ವಶಕ್ಕೆ ಪಡೆದರು.

ಸೋಮವಾರಪೇಟೆ ಉಪ ವಿಭಾಗದ ಡಿವೈಎಸ್‌ಪಿ ಮೋಹನ್ ಕುಮಾರ್, ಗೋಣಿಕೊಪ್ಪ ವೃತ್ತದ ಸಿಪಿಐ ಗೋವಿಂದರಾಜು, ವಿರಾಜಪೇಟೆ ಗ್ರಾಮಾಂತರ ಠಾಣೆಯ ಪಿಎಸ್‌ಐ ಮಂಜುನಾಥ ಸಿ.ಸಿ ಹಾಗೂ ಸಿಬ್ಬಂದಿಗಳ ತಂಡ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿತ್ತು.

ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಕಾರ್ಯ ದಕ್ಷತೆಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಶ್ಲಾಘನೆ ವ್ಯಕ್ತಪಡಿಸಿದ್ದಾರೆ. ಗಾಂಜಾ ಸೇರಿದಂತೆ ಮಾದಕ ವಸ್ತುಗಳು ಮಾರಾಟವಾಗುತ್ತಿರುವ ಬಗ್ಗೆ ಸಾರ್ವಜನಿಕರು ಪೊಲೀಸ್ ಇಲಾಖೆಗೆ ಮಾಹಿತಿ ನೀಡಿ ಸಹಕರಿಸುವಂತೆ ಮನವಿ ಮಾಡಿದ್ದಾರೆ.

ಲಾರಿ ಹರಿದು ಅಮ್ಮತ್ತಿ ಕೊಡವ ಸಮಾಜದ ಮಾಜಿ ಅಧ್ಯಕ್ಷ ಬೋಸ್‌ದೇವಯ್ಯ ನಿಧನ



ವಿರಾಜಪೇಟೆ/ಗೋಣಿಕೊಪ್ಪ, ನ.19– ಅಮ್ಮತ್ತಿ ಕೊಡವ ಸಮಾಜ ಮಾಜಿ ಅಧ್ಯಕ್ಷ ಮುಕೊಂಡ ಬೋಸ್ ದೇವಯ್ಯ (65) ಅಪಘಾತದಲ್ಲಿ ನಿಧನರಾಗಿದ್ದಾರೆ. ತಮ್ಮ ಮನೆ ಕಾಮಗಾರಿಗೆ ಸಂಬಂಧಿಸಿದಂತೆ ಲಾರಿಯಲ್ಲಿ ಇಟ್ಟಿಗೆ ತರಲಾಗಿತ್ತು. ಈ ವೇಳೆ ಇಟ್ಟಿಗೆ ಇಳಿಸಲು ಲಾರಿಯನ್ನು ಚಾಲಕ ಹಿಂಬದಿಗೆ ಚಲಾಯಿಸಿದ ಸಂದರ್ಭ ಲಾರಿ ಹಿಂಬದಿ ನಿಂತಿದ್ದ ಬೋಸ್ ದೇವಯ್ಯ ಅವರಿಗೆ ಆಕಸ್ಮಿಕವಾಗಿ ಲಾರಿ ಡಿಕ್ಕಿ ಯಾಗಿ ಹರಿದ ಪರಿಣಾಮ ಸ್ಥಳದಲ್ಲಿ ಮೃತಪಟ್ಟಿದ್ದಾರೆ. ಮೃತರು ಪತ್ನಿ, ಓರ್ವ ಪುತ್ರ ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ. ಬೋಸ್ ದೇವಯ್ಯ ಅವರು ಬಿಜೆಪಿ ಮುಖಂಡರಾಗಿಯೂ ಗುರುತಿಸಿಕೊಂಡಿ ದ್ದರು. ಅಮ್ಮತ್ತಿ ಕೊಡವ ಸಮಾಜದ ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆ ನೀಡಿದ್ದರಲ್ಲದೇ ಅಖಿಲ ಕೊಡವ ಸಮಾಜದ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದರು. ಬೋಸ್ ದೇವಯ್ಯ ಅವರು ಕಾಫಿ ಮುಕ್ತ ಮಾರುಕಟ್ಟೆಗೆ ಒಳಪಡಬೇಕೆಂಬ ಹೋರಾಟದಲ್ಲಿ ತಮ್ಮನ್ನು ತಾವು ತೊಡಿಸಿಕೊಂಡಿದ್ದರು. ಕಾಫಿ ಉದ್ಯಮಿಯಾಗಿ, ಕಾಫಿ ಹೋರಾಟಗಾರರಾಗಿ, ಗೋಣಿಕೊಪ್ಪಲು ಎಪಿಎಂಸಿ ಅಧ್ಯಕ್ಷರಾಗಿ, ಡಿಸಿಸಿ ಬ್ಯಾಂಕ್ ನಿರ್ದೇಶಕರಾಗಿ, ಹಲವು ಸಂಘ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

ಯರಿಯೂರು ದೇಗುಲದ ಹುಂಡಿ ಕಳವು

ಯಳಂದೂರು, ನ.19– ತಾಲೂಕಿನ ಯರಿಯೂರು ಗ್ರಾಮದ ದೇವಸ್ಥಾನದಲ್ಲಿ ಇಟ್ಟಿದ್ದ ಹುಂಡಿಯನ್ನು ಕಳ್ಳರು ಕದ್ದು ಪರಾರಿಯಾಗಿರುವ ಘಟನೆ ಶನಿವಾರ ರಾತ್ರಿ ನಡೆದಿದೆ.



ಗ್ರಾಮದ ಅಂಬೇಡ್ಕರ್ ಸಮುದಾಯ ಭವನದ ಮುಂಭಾಗದಲ್ಲಿರುವ ಒಳಗೆರೆ ಮಾರಮ್ಮದೇವಿ ದೇವಸ್ಥಾನದ ಕಬ್ಬಿಣದ ಬಾಗಿಲು ಒಡೆದು ಇಲ್ಲಿದ್ದ ಹುಂಡಿಯನ್ನು ಕಳ್ಳರು ಕೊಂಡೊಯ್ದಿದ್ದಾರೆ.

ನಂತರ ಗ್ರಾಮದ ಹೊರ ಭಾಗದಲ್ಲಿರುವ ಕಬಿನಿ ನಾಲೆಯ ಬಳಿ ಹುಂಡಿಗೆ ಹಾಕಲಾಗಿದ್ದ ಬೀಗವನ್ನು ಒಡೆದು ಇದರಲ್ಲಿದ್ದ ಹಣವನ್ನು ಕದ್ದು ಹುಂಡಿಯನ್ನು ಇಲ್ಲೇ ಬಿಸಾಡಿ ಹೊರಟಿದ್ದಾರೆ. ಇದನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಎಣಿಕೆ ಮಾಡಲಾಗುತ್ತಿತ್ತು. ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಪೂಜೆ ಸಲ್ಲಿಸಲಾಗುತ್ತಿತ್ತು. ದೇಗುಲದ ಬಾಗಿಲು ಒಡೆದಿರು ವುದನ್ನು ಭಾನುವಾರ ಬೆಳಿಗ್ಗೆ ಕಂಡ ಇಲ್ಲಿನ ಅರ್ಚಕ ಮಂಜುನಾಥ್ ಪಟ್ಟಣದ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದಾರೆ. ದೂರನ್ನು ದಾಖಲಿಸಿಕೊಂಡಿರುವ ಪೊಲೀಸರು ಸ್ಥಳ ಪರಿಶೀಲನೆ ನಡೆಸಿ ಮುಂದಿನ ಕ್ರಮ ವಹಿಸಿದ್ದಾರೆ.

ನಗರಾಭಿವೃದ್ಧಿ ಕೋಶ ಕಚೇರಿಯಲ್ಲಿ ಇ-ಕಚೇರಿ ವ್ಯವಸ್ಥೆ ಉದ್ಘಾಟನೆ



ಚಾಮರಾಜನಗರ, ನ.19– ಜಿಲ್ಲಾ ನಗರಾಭಿವೃದ್ಧಿ ಕೋಶ ಕಚೇರಿಯಲ್ಲಿ ಅನುಷ್ಠಾನಗೊಳಿಸಲಾಗಿರುವ ಇ–ಕಚೇರಿ ಆಡಳಿತ ವ್ಯವಸ್ಥೆಗೆ ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪಾನಾಗ್ ಚಾಲನೆ ನೀಡಿದರು.

ನಗರದ ಜಿಲ್ಲಾಡಳಿತ ಭವನದ ಮೊದಲ ಮಹಡಿಯಲ್ಲಿರುವ ನಗರಾಭಿವೃದ್ಧಿ ಇಲಾಖೆಯ ಜಿಲ್ಲಾ ನಗರಾಭಿವೃದ್ಧಿ ಕೋಶ ಕಚೇರಿಯು ಸಂಪೂರ್ಣವಾಗಿ ಇ–ಕಚೇರಿ ತಂತ್ರಜ್ಞಾನವನ್ನು ಅಳವಡಿಸಿಕೊಂಡ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಅವರು ಇ–ಆಫೀಸ್ ಕಂಪ್ಯೂಟರ್ ಆನ್ ಮಾಡುವ ಮೂಲಕ ಉದ್ಘಾಟಿಸಿದರು.

ನಂತರ ಮಾತನಾಡಿ, ಇ–ಆಫೀಸ್ ಕಚೇರಿ ಆಡಳಿತ ವ್ಯವಸ್ಥೆಯ ಒಂದು ವಿಶೇಷ, ವಿನೂತನ ಹೆಜ್ಜೆಯಾಗಿದೆ. ಸುಲಭವಾಗಿ ಸರಳ ವಿಧಾನದ ಮೂಲಕ ಜನರ ಸಮಸ್ಯೆಗಳಿಗೆ ಶೀಘ್ರ ಪರಿಹಾರ ಒದಗಿಸುವುದೇ ಕಾರ್ಯಕ್ರಮದ ಉದ್ದೇಶವಾಗಿದೆ. ಹಿಂದೆ ಟಪಾಲು ಸ್ವೀಕರಿಸಿ, ಪತ್ರಗಳನ್ನು ಪರಿಶೀಲಿಸಿ ಬಳಿಕ ಜನಸಾಮಾನ್ಯರ ಕುಂದುಕೊರತೆ, ಸಮಸ್ಯೆಗಳನ್ನು ಪರಿಹರಿಸಲು ಅಧಿಕಾರಿಗಳಿಗೆ 2–3 ದಿನಗಳಾಗುತ್ತಿತ್ತು. ಇ–ಆಫೀಸ್‌ನಿಂದ ಸುಲಲಿತವಾಗಿ ಕೆಲಸ ಮಾಡಲು ಸಹಕಾರಿಯಾಗಿದೆ. ಇದರ ಜೊತೆಗೆ ಸಮಯದ ಉಳಿತಾಯವಾಗಲಿದೆ ಎಂದರು.

ಮುಂದಿನ ದಿನಗಳಲ್ಲಿ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಅಧಿಕಾರಿಗಳು ಕಡ್ಡಾಯವಾಗಿ ಇ–ಆಫೀಸ್ ವ್ಯವಸ್ಥೆಯನ್ನು ಬಳಸಬೇಕು. ಕಚೇರಿಯ ಪತ್ರ ವ್ಯವಹಾರಗಳನ್ನು ಇದರಲ್ಲಿಯೇ ನಡೆಸಬೇಕು. ಈ ವ್ಯವಸ್ಥೆ ಚಾಲನೆಯಿಂದ ಕಡತಗಳು ಕಳೆದು ಹೋಗುವ ಸಾಧ್ಯತೆಗಳು ಕಡಿಮೆ ಇದ್ದು, ಪಾರದರ್ಶಕತೆಯಿಂದ ಕೆಲಸ ನಿರ್ವಹಿಸಲು ಸಹಕಾರಿಯಾಗುತ್ತದೆ. ಇದರಿಂದ ಜನರಿಗೆ ತ್ವರಿತವಾಗಿ ಪರಿಹಾರ ದೊರೆಯಲು ಸಾಧ್ಯವಾಗುತ್ತದೆ ಎಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ತಿಳಿಸಿದರು.

ಇದೇ ವೇಳೆ ಕಚೇರಿಯನ್ನು ವೀಕ್ಷಿಸಿದ ಜಿಲ್ಲಾಧಿಕಾರಿ ಅವರು ಅಧಿಕಾರಿ, ಸಿಬ್ಬಂದಿ ಜೊತೆ ಮಾತನಾಡಿ, ಕಚೇರಿ ಕೆಲಸಗಳು ನಿಗದಿತ ಸಮಯದಲ್ಲಿ ಮುಗಿಯಬೇಕು. ಎಲ್ಲರೂ ಜನರ ನಂಬಿಕೆಗಳಿಗೆ ಧಕ್ಕೆ ಬಾರದಂತೆ ಕಾರ್ಯ ನಿರ್ವಹಿಸಬೇಕು. ಸಮಯಕ್ಕೆ ಸರಿಯಾಗಿ ಕೆಲಸಗಳಾಗಬೇಕು. ಕಚೇರಿಗೆ ಅಗತ್ಯವಿರುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಬೇಕು ಎಂದು ತಿಳಿಸಿದರು.

> ಅಧಿಕಾರಿಗಳು ಕಡ್ಡಾಯವಾಗಿ ಇ–ಆಫೀಸ್ ಮೂಲಕವೇ ಪತ್ರ ವ್ಯವಹಾರಗಳನ್ನು ನಡೆಸಬೇಕು. ಈ ವ್ಯವಸ್ಥೆ ಚಾಲನೆಯಿಂದ ಕಡತಗಳು ಕಳೆದು ಹೋಗುವ ಸಾಧ್ಯತೆಗಳು ಕಡಿಮೆ ಇದ್ದು, ಪಾರದರ್ಶಕತೆಯಿಂದ ಕೆಲಸ ನಿರ್ವಹಿಸಲು ಸಹಕಾರಿಯಾಗುತ್ತದೆ. ಇದರಿಂದ ಜನರಿಗೆ ತ್ವರಿತವಾಗಿ ಪರಿಹಾರ ದೊರೆಯಲು ಸಾಧ್ಯವಾಗುತ್ತದೆ.
>
> – ಸಿ.ಟಿ. ಶಿಲ್ಪಾನಾಗ್, ಜಿಲ್ಲಾಧಿಕಾರಿ.

ಈ ವೇಳೆ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಎಂ.ವಿ. ಸುಧಾ, ಜಿಲ್ಲಾ ನೋಡೆಲ್ ಅಧಿಕಾರಿ ಡಾ. ಚೇತನ್ ಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಎಂ. ರಾಮಚಂದ್ರ, ಚಾಮರಾಜನಗರ ನಗರಸಭೆ ಪೌರಾಯುಕ್ತ ಎಸ್.ವಿ. ರಾಮದಾಸ್, ನಗರಸಭೆಯ ಪರಿಸರ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಗಿರಿಜಮ್ಮ ಸೇರಿದಂತೆ ಇತರರು ಇದ್ದರು.

ಇಂದು ವಿಜ್ಞಾನೋತ್ಸವ

ಬೇಗೂರು(ಗುಂಡ್ಲುಪೇಟೆ), ನ.19– ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನ.20 ರಂದು ಬೆಳಗ್ಗೆ 10:30ಕ್ಕೆ ವಿಜ್ಞಾನೋತ್ಸವ 2023 ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆ ಕಾಲೇಜಿನ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಕೊಠಡಿಗಳ ಉದ್ಘಾಟನೆ ಮತ್ತು ವಿಜ್ಞಾನ ವಸ್ತು ಪ್ರದರ್ಶನ ಕಾರ್ಯಕ್ರಮ ನಡೆಯಲಿದೆ.

ಶಾಸಕ ಹೆಚ್.ಎಂ. ಗಣೇಶ್ ಪ್ರಸಾದ್ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಮಂಜುನಾಥ್ ಪ್ರಸನ್ನ, ಮೈಸೂರು ಎಂಐಟಿ ಇಂಜಿನಿಯರಿಂಗ್ ಕಾಲೇಜು ಪ್ರಾಂಶುಪಾಲ ವೈ.ಟಿ. ಶ್ರೀಕಂಠಗೌಡ್ರು, ಜಿಲ್ಲಾ ಸಂಯೋಜಕ ಸ್ಕೌಟ್ ಅಂಡ್ ಗೈಡ್ಸ್ ಶ್ರೀ ರಾಮಚಂದ್ರಪ್ಪ ಕಾಲೇಜು ಪ್ರಾಂಶುಪಾಲ ಆರ್.ಕೆ. ಚಂದ್ರಶೇಖರ್. ಗ್ರಾ.ಪಂ.ಅಧ್ಯಕ್ಷೆ ಜಯಮ್ಮ, ಉಪಾಧ್ಯಕ್ಷ ಮಹದೇವಸ್ವಾಮಿ, ಸೇರಿದಂತೆ ಗ್ರಾಮ ಪಂಚಾಯಿತ್ತಿಯ ಸದಸ್ಯರುಗಳು ಭಾಗವಹಿಸಲಿದ್ದಾರೆ.

ರಾಜೇಂದ್ರಪ್ರಸಾದ್ ನಿಧನ

ಚಾಮರಾಜನಗರ, ನ.19– ತಾಲೂಕಿನ ಇರಸವಾಡಿ ಗ್ರಾಮದ ವಾಸಿ ಹಾಗೂ ಹನೂರು ತಾಲೂಕಿನ ಪಿ.ಜಿ. ಪಾಳ್ಯದ ಗ್ರಾಮ ಲೆಕ್ಕಿಗರಾಗಿದ್ದ ರಾಜೇಂದ್ರ ಪ್ರಸಾದ್ (37) ಅನಾರೋಗ್ಯದಿಂದ ಭಾನುವಾರ ನಿಧನರಾದರು. ಮೃತರು ಪತ್ನಿ, ತಾಯಿ, ಸಹೋದರ, ಸಹೋದರಿ ಹಾಗೂ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಸೋಮವಾರ ಬೆಳಗ್ಗೆ ಸ್ವಗ್ರಾಮದಲ್ಲಿ ನೆರವೇರಲಿದೆ.



ಜಿಲ್ಲಾ ಕಾಂಗ್ರೆಸ್ ಸಮಿತಿ ಕಛೇರಿಯಲ್ಲಿ ಇಂದಿರಾಗಾಂಧಿ ಜನ್ಮ ದಿನಾಚರಣೆ



ಚಾಮರಾಜನಗರ, ನ.19– ಭಾನುವಾರ ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಮಾಜಿ ಪ್ರಧಾನಿ ಇಂದಿರಾಗಾಂಧಿ ಅವರ 106ನೇ ಜನ್ಮ ದಿನಾಚರಣೆ ಆಚರಿಸಲಾಯಿತು. ಶಾಸಕ ಸಿ. ಪುಟ್ಟರಂಗಶೆಟ್ಟಿ ಇಂದಿರಾ ಗಾಂಧಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಶಾಸಕರು ಇಂದಿರಾಗಾಂಧಿ ಅವರು ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ನೀಡಿದ ಕಾರ್ಯಕ್ರಮಗಳು ದೇಶದ ಅಭಿವೃದ್ಧಿಗೆ ಪೂರಕವಾಗಿದ್ದವು ದೀನಾದಲಿತರು ಹಿಂದುಳಿದ ವರ್ಗಗಳ ಮಹಿಳೆಯರ ಸರ್ವತೋಮುಖ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಅವರು 20 ಅಂಶಗಳ ಕಾರ್ಯಕ್ರಮವನ್ನು ಜಾರಿಗೊಳಿಸಿದರು. ನೇರ, ದಿಟ್ಟ ಉಕ್ಕಿನ ಮಹಿಳೆ ಎಂದೇ ಖ್ಯಾತಿ ಪಡೆದಿದ್ದ ಇಂದಿರಾಗಾಂಧಿ ಅವರ ಜನಪರ ಕಾರ್ಯಕ್ರಮಗಳು ಇಂದಿಗೂ ಜನಮಾನಸದಲ್ಲಿ ಉಳಿದಿದೆ ಎಂದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ. ಮರಿಸ್ವಾಮಿ ಮಾತನಾಡಿ, ದೇಶದ ಬಡತನ ನಿರ್ಮೂಲನೆಗೆ ಹಾಗೂ ಆರ್ಥಿಕ ಅಭಿವೃದ್ದಿಗೆ ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರ ಶ್ರಮ ಬಹಳಷ್ಟಿದೆ. ಇಂದಿರಾ ಗಾಂಧಿ ಅವರು ದೇಶದ ಕಂಡ ಸಮರ್ಥ ಪ್ರಧಾನಿಗಳಲ್ಲಿ ಒಬ್ಬರಾಗಿದ್ದರು. ದೇಶವನ್ನು ಮುನ್ನಡೆಸುವ ಜೊತೆಗೆ ನೆರೆ ದೇಶಗಳೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿ, ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿದ್ದರು. ಇಂದಿರಾಗಾಂಧಿ ಅವರ ಆದರ್ಶವನ್ನು ಮೈಗೂಡಿಸಿಕೊಂಡು ಅವರ ಹಾದಿಯಲ್ಲಿ ಯುವ ಜನತೆ ಮುನ್ನಡೆಯಬೇಕಾದ ಅವಶ್ಯಕತೆ ಇದೆ ಎಂದು ಹೇಳಿದರು.

ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ. ರವಿಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಚಿಕ್ಕಮಹದೇವ, ಕಾರ್ಯದರ್ಶಿ ಶಿವಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹಮದ್ ಅಸ್ಗರ್‌ಮುನ್ನಾ, ಮಾಜಿ ಜಿಪಂ ಸದಸ್ಯ ಸೋಮನಾಯಕ್, ನಗರಸಭಾ ಸದಸ್ಯ ಚಿನ್ನಮ್ಮ, ಗ್ರಾಪಂ ಅಧ್ಯಕ್ಷ ರೂಪೇಶ್, ಪರಿಶಿಷ್ಟ ಜಾತಿ ಎಸ್ಸಿ ವಿಭಾಗದ ಅಧ್ಯಕ್ಷ ಸೋಮಣ್ಣ, ಗ್ರಾಮಾಂತರ ಮಹಿಳಾ ವಿಭಾಗದ ಅಧ್ಯಕ್ಷೆ ಶಕುಂತಲಾ, ನಾಗರತ್ನ, ಪದ್ಮಾ ಪುರುಷೋತ್ತಮ್, ಭಾಗ್ಯಮ್ಮ, ನಸ್ರುಲ್ಲಾಖಾನ್, ಅಬ್ಬಾಸ್, ನಯಾಜ್‌ಪಾಷ್, ಮರಿಯಾಲದಹುಂಡಿ ಕುಮಾರ್, ಸ್ವಾಮಿ, ಸಿ.ಆರ್. ಮಹೇಶ್, ಮಹಮದ್ ನವೀದ್, ಇಂಬ್ರಾನ್ ಅಹಮದ್, ಸೇವಾದಳದ ಜಿಲ್ಲಾಧ್ಯಕ್ಷ ಜಯರಾಜು, ಶೇಷಣ್ಣ, ರೇವಣ್ಣ, ಪಟೇಲ್ ಮಹದೇವಸ್ವಾಮಿ, ಎನ್‌ಎಸ್‌ಯುಐ ಸ್ವಾಮಿ, ಮೋಹನ್ ಅಕ್ಷಯ್ ಸೇರಿದಂತೆ ಪಕ್ಷದ ಕಾರ್ಯಕರ್ತರು ಹಾಜರಿದ್ದರು.

ಜಿಲ್ಲಾ ಮಾದಿಗ ಮಹಾಸಭಾ ಕ್ಷೇಮಾಭಿವೃದ್ಧಿ ಸಂಘಕ್ಕೆ ಪದಾಧಿಕಾರಿಗಳ ಆಯ್ಕೆ

ಚಾಮರಾಜನಗರ, ನ.19– ಜಿಲ್ಲಾ ಮಾದಿಗ ಮಹಾಸಭಾ ಕ್ಷೇಮಾಭಿವೃದ್ಧಿ ಸಂಘದ ಕಾರ್ಯಕಾರಿ ಸಮಿತಿಗೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ನಗರದ ಪ್ರವಾಸಿ ಮಂದಿರದಲ್ಲಿ ನಡೆದ ಸಂಘದ ಜಿಲ್ಲಾಧ್ಯಕ್ಷ ಎಂ. ಶಿವಕುಮಾರ್ ಹಾಗೂ ಮೈಸೂರು ವಿಭಾಗದ ಉಸ್ತುವಾರಿ ಕಾರ್ಯದರ್ಶಿ ಸಂತೆಮರಳ್ಳಿ ರಾಜು ಅವರ ನೇತೃತ್ವದಲ್ಲಿ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು

ಈ ಸಂದರ್ಭದಲ್ಲಿ ಕರ್ನಾಟಕ ಕನ್ನಡ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ಚಾ.ಗು ನಾಗರಾಜು ಮತ್ತು ಬಾಬು ಜಗಜೀವನ್ ರಾವ್ ಟ್ರಸ್ಟ್ ಅಧ್ಯಕ್ಷ ಶಿವಕುಮಾರ್, ಕಾರ್ಯದರ್ಶಿ ಶಿವಣ್ಣ ಇವರು ಪುಷ್ಪಾರ್ಚನೆ ಮಾಡುವುದರ ಮೂಲಕ ಸಭೆಗೆ ಚಾಲನೆ ನೀಡಿ ಸಂಘವು ಜಿಲ್ಲಾ ಮಟ್ಟದಲ್ಲಿ ಉತ್ತಮ ಕೆಲಸ ಕಾರ್ಯಗಳನ್ನು ಮಾಡಿ ಸಮಾಜಕ್ಕೆ ಒಳ್ಳೆಯ ಹೊಸ ಕಾರ್ಯಗಳನ್ನು ಮಾಡಿ ಸಮಾಜದಲಿ ಇರುವಂತಹ ಕುಂದು ಕೊರತೆ ಗಳನ್ನ ಕುಂದು ಕೊರತೆಗಳನ್ನು ಬಗೆಹರಿಸಿ ಸಂಘವು ಒಳ್ಳೆ ಸಂಘಟನೆ ಆಗಲಿ ಎಂದು ಶುಭ ಹಾರೈಸಿದರು

ಸಂಘದ ನೂತನ ಪದಾಧಿಕಾರಿಗಳು: ಸಂಘದ ಗೌರವಾಧ್ಯಕ್ಷರಾಗಿ ಆರ್ ಎಚ್ ಲಿಂಗರಾಜು, ಉಪಾಧ್ಯಕ್ಷರಾಗಿ ಎಚ್ ಮೂರ್ತಿ, ಕಾರ್ಯದರ್ಶಿಯಾಗಿ ದೇವಳ್ಳಿ ಶಿವಕುಮಾರ್ ಉಪಾಧ್ಯಕ್ಷರಾಗಿ ಹೊನ್ನಶೆಟ್ಟರಹುಂಡಿ ದೇವರಾಜ್, ಸಂಚಾಲಕರಾಗಿ ಗುರುಲಿಂಗಯ್ಯ, ಸಂಘಟನಾ ಕಾರ್ಯದರ್ಶಿಯಾಗಿ ಅರಕಲವಾಡಿ ಮಹದೇವಯ್ಯ, ಖಜಾಂಚಿಯಾಗಿ ಶಿವಕುಮಾರ್ ಮೂಡಳ್ಳಿ, ಸಹ ಕಾರ್ಯದರ್ಶಿಯಾಗಿ ಶಿವಕುಮಾರ್ ರಾಮಸಮುದ್ರ ಆಯ್ಕೆ ಮಾಡಲಾಯಿತು.

ಸಭೆಯಲ್ಲಿ ಬಾಬು ಜಗಜೀವರಾಂ ಗೌರವ ಅಧ್ಯಕ್ಷ ಚನ್ನಬಸವಯ್ಯ, ಪ್ರಸನ್ನಕುಮಾರ್, ಸುಂದರ್ ರಾಮಸಮುದ್ರ, ಚಿನ್ನಸ್ವಾಮಿ, ದೇವರಾಜ್, ಮೂಡಳ್ಳಿ ಸಿದ್ದಯ್ಯ, ಯ.ಮಹದೇವಯ್ಯ, ಬಂಗಾರು, ಮಾದೇಶ್, ಕೃಷ್ಣಪ್ಪ ಇತರರು ಭಾಗವಹಿಸಿದ್ದರು.


ವಿಶ್ವ ಶೌಚಾಲಯ ದಿನ: 23 ಮಂದಿಗೆ ಶೌಚಗೃಹ ಆದೇಶ ಪತ್ರ ವಿತರಣೆ



ಯಳಂದೂರು, ನ.19– ವಿಶ್ವ ಶೌಚಾಲಯ ದಿನವಾದ ಭಾನುವಾರ ಅಂಬಳೆ ಗ್ರಾಮ ಪಂಚಾಯಿತಿಯಲ್ಲಿ ಶೌಚಗೃಹದ ಜಾಗೃತಿ ಮೂಡಿಸಲಾಯಿತು. ಅಲ್ಲದೆ 23 ಮಂದಿಗೆ ಶೌಚಗೃಹ ನಿರ್ಮಾಣಕ್ಕೆ ಮಂಜೂರಾತಿ ಆದೇಶ ಪತ್ರಗಳನ್ನೂ ಸಹ ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಅಂಬಳೆ ಗ್ರಾಪಂ ಪಿಡಿಓ ಮಮತ ಮಾತನಾಡಿ, ಶೌಚಗೃಹ ನಿರ್ಮಾಣಕ್ಕಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರ ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ. ಸಾರ್ವಜನಿಕರಿಗೆ ಬಯಲು ಶೌಚದಿಂದ ಆಗುವ ದುಷ್ಪರಿಣಾಮಗಳು, ರೋಗಗಳ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ. ಅಲ್ಲದೆ ಪಂಚಾಯಿತಿಯನ್ನು ಬಯಲು ಶೌಚಮುಕ್ತ ಮಾಡುವ ನಿಟ್ಟಿನಲ್ಲಿ ನಾವು ಶ್ರಮ ಪಡುತ್ತಿದ್ದೇವೆ. ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ, ವರ್ಗಕ್ಕೆ 20 ಸಾವಿರ ರೂ. ಹಾಗೂ ಸಾಮಾನ್ಯ ವರ್ಗಕ್ಕೆ 12 ಸಾವಿರ ರೂ.ಗಳ ಸಹಾಯಧನವನ್ನು ಶೌಚಗೃಹ ನಿರ್ಮಾಣಕ್ಕೆ ನೀಡಲಾಗುತ್ತಿದೆ. ನಮ್ಮ ಪಂಚಾಯಿತಿಯಿಂದ ಭಾನುವಾರ ವಿಶ್ವ ಶೌಚದಿನದ ನಿಮಿತ್ತ ಸಾರ್ವಜನಿಕರಲ್ಲಿ ಈ ಬಗ್ಗೆ ಜಾಗೃತಿ ಮೂಡಿಸುವ ಜೊತೆಗೆ 23 ಮಂದಿಗೆ ಮಂಜೂರಾತಿ ಆದೇಶ ಪತ್ರಗಳನ್ನು ವಿತರಣೆ ಮಾಡಲಾಗುತ್ತಿದೆ ಎಂದರು. ಕಾರ್ಯದರ್ಶಿ ಪುಟ್ಟರಾಜು, ನಂದಿನಿ, ಸೇರಿದಂತೆ ಅನೇಕರು ಇದ್ದರು.

ಚಾ.ನಗರದಿಂದ ಮಹಿಳೆ ನಾಪತ್ತೆ



ಚಾಮರಾಜನಗರ, ನ.19– ಚಾಮರಾಜನಗರ ಪಟ್ಟಣದ ನಿವಾಸಿ ಡಿ.ಮೌನ(24) ಎಂಬ ಗೃಹಿಣಿ ಕಾಣೆಯಾಗಿದ್ದು, ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೌನ 4.6 ಅಡಿ ಎತ್ತರ, ಸಾಧಾರಣ ಮೈಕಟ್ಟು, ಕೋಲು ಮುಖ, ಬಿಳಿ ಮೈ ಬಣ್ಣ, ಕಪ್ಪು ತಲೆ ಕೂದಲು, ಎಡ ಕೈಯಲ್ಲಿ ಹೂವಿನ ಚಿತ್ರದ ಹಚ್ಚೆ ಇರುತ್ತದೆ. ಕನ್ನಡ ಭಾಷೆ ಮಾತನಾಡುತ್ತಾರೆ. ಹಸಿರು ಬಣ್ಣದ ಚೂಡಿದಾರ ಧರಿಸಿರುತ್ತಾರೆ. ಇವರ ಸುಳಿವು ದೊರೆತಲ್ಲಿ ಪೊಲೀಸ್ ಕಂಟ್ರೋಲ್ ರೂಂ ದೂ. 08226–222383, ಚಾಮರಾಜನಗರ ಪಟ್ಟಣ ಪೊಲೀಸ್ ಠಾಣೆ ದೂ. 08226–222047 ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ಕೋರಿದೆ.

ಬೆಂಗಳೂರಲ್ಲಿ ವಿದ್ಯುತ್ ತಂತಿ ತುಳಿದು ಬಾಣಂತಿ, ಮಗು ಸಾವು

ಐವರು ಬೆಸ್ಕಾಂ ಅಧಿಕಾರಿಗಳ ಬಂಧನ, ಮೃತರ ಕುಟುಂಬಸ್ಥರಿಗೆ ತಲಾ 5 ಲಕ್ಷ ಪರಿಹಾರ

ಬೆಂಗಳೂರು,ನ.19–ನಗರದ ವೈಟ್ ಫೀಲ್ಡ್‌ನ ಕಾಡುಗೋಡಿಯಲ್ಲಿ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ತುಳಿದು ಬಾಣಂತಿ ಹಾಗೂ 9 ತಿಂಗಳ ಹಸುಗೂಸು ಸ್ಥಳದಲ್ಲೇ ಮೃತಪಟ್ಟ ಘಟನೆ ಸಂಭವಿಸಿದ್ದು,



ಈ ಸಂಬಂಧ ಕಾಡುಗೋಡಿ ಠಾಣೆ ಪೊಲೀಸರು ಬೆಸ್ಕಾಂನ ಇಇ ಶ್ರೀರಾಮ್ ಸೇರಿದಂತೆ ಐವರು ಸಿಬ್ಬಂದಿಯನ್ನು ಬಂಧಿಸಿದ್ದಾರೆ. ಕಾರ್ಯನಿರ್ವಾಹಕ ಅಭಿಯಂತರ ಶ್ರೀರಾಮ್, ಸಹಾಯಕ ಕಾರ್ಯನಿರ್ವಕ ಅಭಿಯಂತರ ಸುಬ್ರಹ್ಮಣ್ಯ, ವೈಟ್‌ಫೀಲ್ಡ್ ವಿಭಾಗದ ಸಹಾಯಕ ಅಭಿಯಂತರ ಚೇತನ್, ವೈಟ್ ಫೀಲ್ಡ್ ವಿಭಾಗದ ಕಿರಿಯ ಅಭಿಯಂತರ ರಾಜಣ್ಣ, ಸ್ಟೇಷನ್ ಆಪರೇಟರ್ ಮಂಜುನಾಥ್ ಬಂಧಿತರಾಗಿದ್ದು, ಪೊಲೀಸರಿಂದ ತನಿಖೆ ಮುಂದುವರಿದಿದೆ.

ವಿವರ: ಬೆಂಗಳೂರಿನ ವೈಟ್‌ಫೀಲ್ಡ್‌ನ ಕಾಡುಗೋಡಿಯಲ್ಲಿ ಇಂದು ಬೆಳ್ಳಂ ಬೆಳಗ್ಗೆ ಬೆಸ್ಕಾಂ ಸಿಬ್ಬಂದಿ ನಿರ್ಲಕ್ಷ್ಯಕ್ಕೆ ಎರಡು ಅಮಾಯಕ ಜೀವಗಳು ಬಲಿಯಾಗಿದ್ದವು. ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ತುಳಿದು ಬಾಣಂತಿ ಸೌಂದರ್ಯ (23) ಮತ್ತು ಆಕೆಯ 9 ತಿಂಗಳ ಮಗು ಲೀಲಾ ಇಬ್ಬರೂ ಸ್ಥಳದಲ್ಲೇ ಪ್ರಾಣ ಬಿಟ್ಟಿದ್ದರು.

ಸೌಂದರ್ಯ ಕಾಡುಗೋಡಿಯ ಎ.ಕೆ. ಗೋಪಾಲ್ ಕಾಲೋನಿಯ ನಿವಾಸಿಯಾಗಿದ್ದು, ಚೆನ್ನೈಗೆ ಮದುವೆ ಮಾಡಿಕೊಡಲಾಗಿತ್ತು. ದೀಪಾವಳಿ ಹಬ್ಬ ಆಚರಿಸಲು ಗಂಡ, ಹೆಂಡತಿ, ಮಗು ಊರಿಗೆ ಹೋಗಿದ್ದರು. ಇಂದು ಮುಂಜಾನೆ ಊರಿನಿಂದ ಹಸುಗೂಸು ಜೊತೆ ದಂಪತಿ ಬೆಂಗಳೂರಿಗೆ ಬಂದಿದ್ದರು. ಬಸ್ ಇಳಿದು ಮುಂಜಾನೆ 5 ಗಂಟೆ ಸುಮಾರಿಗೆ ಕತ್ತಲಿನಲ್ಲಿ ಮನೆಗೆ ನಡೆದು ಹೋಗುವಾಗ ರಸ್ತೆಬದಿ ತುಂಡಾಗಿ ಬಿದ್ದಿದ್ದ ತಂತಿಯನ್ನು ಸೌಂದರ್ಯ ತುಳಿದಿದ್ದಾರೆ. ಇದರಿಂದ ವಿದ್ಯುತ್ ಶಾಕ್ ಹೊಡೆದು ಬೆಂಕಿ ಹತ್ತಿಕೊಂಡಿದ್ದು ಪತಿ ಎದುರೇ ಪತ್ನಿ ಹಾಗೂ 9 ತಿಂಗಳ ಹಸುಗೂಸು ಲೀಲಾ ಸಜೀವ ದಹನವಾಗಿದ್ದರು. ಬೆಸ್ಕಾಂಗೆ ಕರೆ ಮಾಡಿ ಒಂದು ಗಂಟೆಯಾದರೂ ಸ್ಥಳಕ್ಕೆ ಯಾರೂ ಬಂದಿಲ್ಲ. ಸೂಕ್ತ ಸಮಯಕ್ಕೆ ಸ್ಥಳೀಯ ನಿವಾಸಿಗಳೂ ಸಹಾಯಕ್ಕೆ ಬಂದಿರಲಿಲ್ಲ. ಇದರಿಂದಾಗಿ ಕಣ್ಣ ಮುಂದೆ ಹೆಂಡತಿ, ಮಗು ಪ್ರಾಣಬಿಟ್ಟರೂ ಏನು ಮಾಡಲಾಗದ ಸ್ಥಿತಿಯಲ್ಲಿ ಸಂತೋಷ್ ಇದ್ದರು. ಬೆಸ್ಕಾಂ ಅಧಿಕಾರಿಗಳು ಹಾಗೂ ಸಿಬ್ಬಂದಿ ನಿರ್ಲಕ್ಷ್ಯದ ವಿರುದ್ಧ ಸ್ಥಳೀಯರು ಆಕ್ರೋಶ ಹೊರ ಹಾಕಿದ್ದು, ಘಟನೆ ಸಂಬಂಧ ಕಾಡುಗೋಡಿ ಪೊಲೀಸ್ ಠಾಣೆಯಲ್ಲಿ ಐಪಿಸಿ ಸೆಕ್ಷನ್ 304ಎ ಅಡಿ ಪ್ರಕರಣ ದಾಖಲಿಸಿಕೊಂಡು ಬೆಸ್ಕಾಂನ ಐವರು ಅಧಿಕಾರಿಗಳನ್ನು ಬಂಧಿಸಿದ್ದಾರೆ.

ಬೆಸ್ಕಾಂ ಸಿಬ್ಬಂದಿ ನಿರ್ಲಕ್ಷ್ಯದಿಂದ ವಿದ್ಯುತ್ ತಂತಿ ತುಳಿದು ತಾಯಿ ಹಾಗೂ 9 ತಿಂಗಳು ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಸ್ಕಾಂ ಎಇ, ಎಇಇಯನ್ನು ಅಮಾನತುಗೊಳಿಸಿದ್ದೇವೆ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿದ್ದಾರೆ.

ಈ ಸಂಬಂಧ ಟ್ವೀಟ್ ಅವರು, ಈ ದುರ್ಘಟನೆಯಲ್ಲಿ ಸಂಬಂಧಿಕರನ್ನು ಕಳೆದುಕೊಂಡ ಕುಟುಂಬ ಸದಸ್ಯರಿಗೆ ರಾಜ್ಯ ಸರ್ಕಾರ ತಲಾ 5 ಲಕ್ಷ ರೂ. ಪರಿಹಾರ ನೀಡಲಿದೆ ಎಂದು ತಿಳಿಸಿದ್ದಾರೆ.

ಸ್ಪರ್ಧಾತ್ಮಕ ಪರೀಕ್ಷಾ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು,ನ.19–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಕೇಂದ್ರ ಲೋಕಸೇವಾ ಆಯೋಗದವರು ನಡೆಸಲಿರುವ ಐಎಎಸ್ ಹಾಗೂ ಕರ್ನಾಟಕ ಲೋಕಸೇವಾ ಆಯೋಗದವರು ನಡೆಸಲಿರುವ ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 50 ದಿನಗಳ ತರಬೇತಿಯನ್ನು ಹಮ್ಮಿಕೊಳ್ಳಲಾಗಿದೆ. ಆಸಕ್ತರು ನ.24ರೊಳಗಾಗಿ ಬೆಳಿಗ್ಗೆ 10ರಿಂದ ಸಂಜೆ 4:30ರವರೆಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ದೂ.ಸಂ:0821–2515944 ಸಂಪರ್ಕಿಸಬಹುದು ಎಂದು ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ. ಮೂರ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಆಸ್ಟ್ರೇಲಿಯಾ ವಿಶ್ವಕಪ್ ಚಾಂಪಿಯನ್

ಈ ವೇಳೆ 47 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದಾಗ ಟ್ರಾವಿಸ್ ಹೆಡ್ ಜೊತೆಗೂಡಿದ ಲಬುಶೇನ್ 4ನೇ ವಿಕೆಟ್‌ಗೆ 192 ರನ್ ಜೊತೆಯಾಟವಾಡಿ ತಂಡವನ್ನು ಗೆಲುವಿನ ದಡ ಸೇರಿಸಿದರು. ತಂಡ ಗೆಲ್ಲಲು 2 ರನ್ ಬೇಕಿದ್ದಾಗ ಹೆಡ್ ಕ್ಯಾಚ್ ನೀಡಿ ಔಟಾದರು. ಪಂದ್ಯದಲ್ಲಿ ಅಮೋಘ ಶತಕ ಬಾರಿಸಿದ ಹೆಡ್ 120 ಎಸೆತಗಳಲ್ಲಿ 4 ಸಿಕ್ಸರ್, 15ಬೌಂಡರಿ ಒಳಗೊಂಡ 137 ರನ್ ಗಳಿಸಿದರು. ಅಲ್ಲದೇ ವಿಶ್ವಕಪ್ ಫೈನಲ್‌ನಲ್ಲಿ ಶತಕ ಸಿಡಿಸಿದ 7ನೇ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಮತ್ತೊಂದೆಡೆ ತಾಳ್ಮೆಯ ಆಟವಾಡಿದ ಲಬುಶೇನ್ ಔಟಾಗದೆ 58 ರನ್ ಗಳಿಸಿದರು. ಅಂತಿಮವಾಗಿ ಆಸ್ಟ್ರೇಲಿಯಾ 43 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 241 ರನ್ ಗಳಿಸಿತು. ಭಾರತದ ಪರ ಬುಮ್ರಾ 2, ಶಮಿ ಹಾಗೂ ಸಿರಾಜ್ ತಲಾ ಒಂದೊಂದು ವಿಕೆಟ್ ಪಡೆದರು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ 50 ಓವರ್‌ಗಳಲ್ಲಿ 240 ರನ್‌ಗಳಿಗೆ ಆಲೌಟಾಯಿತು. ಎಂದಿನಂತೆ ಇನ್ನಿಂಗ್ಸ್ ಆರಂಭಿಸಿದ ರೋಹಿತ್ ಶರ್ಮಾ 31 ಎಸೆತಗಳಲ್ಲೇ 3 ಸಿಕ್ಸರ್, 4 ಬೌಂಡರಿ ಒಳಗೊಂಡ 47ರನ್ ಗಳಿಸಿ ಬಹುಬೇಗ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ಶುಭ್‌ಮನ್ ಗಿಲ್ ಸಹ 4 ರನ್ ಗಳಿಸಿ ನಿರ್ಗಮಿಸಿದರು. ನಂತರ ಬಂದ ಶ್ರೇಯಸ್ ಅಯ್ಯರ್ 4 ರನ್‌ಗಳಿಗೆ ಔಟಾಗುವ ಮೂಲಕ ನಿರಾಸೆ ಮೂಡಿಸಿದರು.

ಮೊದಲ 10.2 ಓವರ್‌ಗಳಲ್ಲೇ 81 ರನ್‌ಗಳಿಸಿದ್ದ ಭಾರತ ಪ್ರಮುಖ 3 ವಿಕೆಟ್‌ಗಳನ್ನು ಕಳೆದುಕೊಂಡು ತೀವ್ರ ಸಂಕಷ್ಟಕ್ಕೀಡಾಗಿತ್ತು. ಈ ವೇಳೆ 4ನೇ ವಿಕೆಟ್‌ಗೆ ಜೊತೆಯಾದ ಕೊಹ್ಲಿ ಮತ್ತು ಕೆ.ಎಲ್.ರಾಹುಲ್ ಜೋಡಿ ನಿಧಾನಗತಿಯ ಬ್ಯಾಟಿಂಗ್‌ಗೆ ಮುಂದಾಯಿತು. ಈ ಜೋಡಿ 109 ಎಸೆತಗಳಲ್ಲಿ 67 ರನ್‌ಗಳ ಜೊತೆಯಾಟವಾಡಿತು. ಈ ವೇಳೆ ಅರ್ಧಶತಕ ಸಿಡಿಸಿ ಉತ್ತಮವಾಗಿ ಆಡುತ್ತಿದ್ದ ಕೊಹ್ಲಿ 54 ರನ್ ಗಳಿಸಿ ನಿರ್ಗಮಿಸಿದರು. ಇನ್ನು ತಾಳ್ಮೆಯ ಆಟವಾಡಿದ ಕೆ.ಎಲ್.ರಾಹುಲ್ 107 ಎಸೆತಗಳಲ್ಲಿ 66 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಕಣಕ್ಕಿಳಿದ ಯಾವೊಬ್ಬ ಆಟಗಾರರೂ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ಉಳಿಯದ ಕಾರಣ ಟೀಂ ಇಂಡಿಯಾ ಅಲ್ಪ ಮೊತ್ತಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಯಿತು. ಉಳಿದಂತೆ ಸೂರ್ಯಕುಮಾರ್ ಯಾದವ್ 15, ರವೀಂದ್ರ ಜಡೇಜಾ 9, ಮೊಹಮ್ಮದ್ ಶಮಿ 6, ಜಸ್ಪ್ರೀತ್ ಬುಮ್ರಾ 1, ಕುಲ್ದೀಪ್ ಯಾದವ್ 10 ಹಾಗೂ ಮೊಹಮ್ಮದ್ ಸಿರಾಜ್ 9 ರನ್ ಗಳಿಸಿ ಔಟಾದರು. ಆಸ್ಟ್ರೇಲಿಯಾ ಪರ ಮಿಚೆಲ್ ಸ್ಟಾರ್ಕ್ 3, ಜೋಶ್ ಹೇಜಲ್‌ವುಡ್ ಮತ್ತು ಪ್ಯಾಟ್ ಕಮ್ಮಿನ್ಸ್ ತಲಾ 2, ಗ್ಲೆನ್ ಮ್ಯಾಕ್ಸ್‌ವೆಲ್ ಮತ್ತು ಆಡಂ ಝಂಪಾ ತಲಾ ಒಂದೊಂದು ವಿಕೆಟ್ ಪಡೆದು ಮಿಂಚಿದರು. ಆಸ್ಟ್ರೇಲಿಯಾ ಪರ ಟ್ರಾವಿಸ್ ಹೆಡ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರೇ, ವಿರಾಟ ಕೊಹ್ಲಿ ಸರಣಿ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಕಣ್ಣೀರಿಟ್ಟ ಇಂಡಿಯಾ ಆಟಗಾರರು

ಇಂಡಿಯಾ ಕ್ರಿಕೆಟಿಗರ ದುಃಖದ ಕಟ್ಟೆ ಒಡೆಯುವಂತೆ ಮಾಡಿದ್ದು, ನಾಯಕ ರೋಹಿತ್ ಶರ್ಮಾ ಕಣ್ಣೀರು ಹಾಕಿದ್ದಾರೆ. ಇತ್ತ ಮೊಹಮ್ಮದ್ ಸಿರಾಜ್, ಕೆಎಲ್ ರಾಹುಲ್ ಸೇರಿದಂತೆ ಕ್ರಿಕೆಟಿಗರು ನೋವು ತಡೆದುಕೊಳ್ಳಲು ಸಾಧ್ಯವಾಗದೆ ಅತ್ತಿದ್ದಾರೆ. ಉಳಿದ ಕೆಲ ಕ್ರಿಕೆಟಿಗರು ಕ್ಯಾಮೆರಾ ಮುಂದೆ ಗಟ್ಟಿಯಾಗಿ ನಿಂತರೂ ಒಳಗಿನಿಂದ ಅಳುತ್ತಲೇ ಇದ್ದಾರೆ. ಆಸ್ಟ್ರೇಲಿಯಾ ಗೆಲುವಿನ ದಡ ಸೇರುತ್ತಿದ್ದಂತೆ ಟೀಂ ಇಂಡಿಯಾ ಕ್ರಿಕೆಟಿಗರು ಕಣ್ಣುಗಳು ತುಂಬಿದೆ. ಕಣ್ಣೀರು ಜಿನುಗಿದೆ. ರೋಹಿತ್ ಶರ್ಮಾ ಕ್ಯಾಮೆರಾದಿಂದ ದೂರ ಸರಿಯಲು ಯತ್ನಿಸಿದ್ದಾರೆ. ಅಳುತ್ತಲೇ ಪೆವಿಲಿಯನ್ ಸೇರಿಕೊಂಡಿದ್ದಾರೆ. ಮೊಹಮ್ಮದ್ ಸಿರಾಜ್ ಪಿಚ್‌ಲ್ಲೇ ಕಣ್ಣೀರಿಟ್ಟಿದ್ದಾರೆ. ವೇಗಿ ಜಸ್ಪ್ರೀತ್ ಬುಮ್ರಾ ಸಂತೈಸಿದರೂ ನೋವು ತಡೆದುಕೊಳ್ಳಲು ಸಾಧ್ಯವಾಗಿಲ್ಲ. ಇತ್ತ ಕೆಎಲ್ ರಾಹುಲ್ ಮೈದಾನಕ್ಕೆ ಮುಖ ಮುಚ್ಚಿ ನೋವನ್ನು ನಿಯಂತ್ರಿಸಿದ್ದಾರೆ. ಇನ್ನು ವಿರಾಟ್ ಕೊಹ್ಲಿ ಕ್ಯಾಮೆರಾ ಮುಂದೆ ಕಣ್ಣೀರು ತಡೆದುಕೊಂಡರು ಮುಖದಲ್ಲಿನ ನೋವು ಎಲ್ಲವನ್ನೂ ಹೇಳುತ್ತಿತ್ತು. ಟೀಂ ಇಂಡಿಯಾದ ಪ್ರತಿಯೊಬ್ಬರು ಸೋಲಿನ ನೋವಿನಲ್ಲಿ ಮುಳುಗಿದ್ದಾರೆ. ಈ ದೃಶ್ಯಗಳು ಅಭಿಮಾನಿಗಳ ಕಣ್ಣಲ್ಲಿ ನೀರು ತರಿಸಿದೆ. ಹಲವು ಅಭಿಮಾನಿಗಳು ಬಿಕ್ಕಿ ಬಿಕ್ಕಿ ಅತ್ತಿದ್ದಾರೆ. ಸೋಲು ಗೆಲುವು ಕ್ರೀಡೆಯಲ್ಲಿ ಸಾಮಾನ್ಯ. ಆದರೂ ಚಾಂಪಿಯನ್ ಆಟ ಪ್ರದರ್ಶಿಸಿದ ಭಾರತ ಟ್ರೋಫಿ ಗೆಲ್ಲಲಿಲ್ಲ ಅನ್ನೋ ಕೊರಗು ಕಾಡುತ್ತಿದೆ. ಮುಂದಿನ ಸರಣಿಯಲ್ಲಿ ಟ್ರೋಫಿ ಗೆಲ್ಲುವಂತಾಗಲಿ ಎಂದು ಅಭಿಮಾನಿಗಳು ಹಾರೈಸಿದ್ದಾರೆ.

ಮೈಸೂರಿನಲ್ಲಿ ಅದ್ದೂರಿ ಸ್ವಾಗತ

ಪಂದ್ಯಾವಳಿಯನ್ನು ಇಡೀ ರಾಷ್ಟ್ರವೇ ಕುತೂಹಲದಿಂದ ವೀಕ್ಷಿಸುತ್ತಿದೆ. ಹಾಗೆಯೇ ಪಕ್ಷದ ರಾಷ್ಟ್ರೀಯ ಅಧ್ಯಕ್ಷರು ನನಗೆ ರಾಜ್ಯಾಧ್ಯಕ್ಷನ ಜವಾಬ್ದಾರಿಯನ್ನು ನೀಡಿ ಟಿ–20 ಮಾಚ್ ಆಡುವಂತೆ ತಿಳಿಸಿದ್ದಾರೆ. ಕ್ರಿಕೆಟ್‌ನಂತೆ ರಾಜಕೀಯದಲ್ಲಿಯೂ ಟೀಂ ವರ್ಕ್ ಬಹಳ ಮುಖ್ಯವಾಗಿದ್ದು, ಎಲ್ಲರೂ ಒಗ್ಗಟಾಗಿ ಕೆಲಸ ಮಾಡಬೇಕಿದೆ. ಮುಂದಿನ ದಿನಗಳಲ್ಲಿ ನಮ್ಮ ಮ್ಯಾಚ್ ನೋಡಲಿದ್ದೀರಿ ಎಂದರು. ರಾಜಕೀಯವಾಗಿ ವರುಣ ಕ್ಷೇತ್ರ ಮೈಸೂರು ಜಿಲ್ಲೆ ಮತ್ತು ಚಾಮರಾಜನಗರದಲ್ಲಿ ನನ್ನನ್ನು ಗುರುತಿಸಿದ್ದು, ನಾನು ರಾಜ್ಯಾಧ್ಯಕ್ಷನಾಗಿದ್ದಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಇಂದು ಮತ್ತು ನಾಳೆ ಮೈಸೂರು ಮತ್ತು ಮಂಡ್ಯ ಪ್ರವಾಸ ಮಾಡುತ್ತಿದ್ದೇನೆ ಎಂದು ತಿಳಿಸಿದರು.

ವಿಶ್ವಕಪ್ ಫೈನಲ್ ವೀಕ್ಷಣೆಯಲ್ಲಿ ಮುಳುಗಿದ ಮೈಸೂರಿಗರು

ಚಾಮುಂಡಿವಿಹಾರ ಕ್ರೀಡಾಂಗಣ, ಕ್ಲಬ್, ಹೋಟೆಲ್‌ಗಳಲ್ಲೂ ಅಭಿಮಾನಿಗಳ ದಂಡು





ಮೈಸೂರು, ನ.19(ಎಂಟಿವೈ)– ಭಾರತ ಹಾಗೂ ಆಸ್ಟ್ರೇಲಿಯಾ ನಡುವೆ ನಡೆದ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯ ವೀಕ್ಷಣೆಗೆ ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣ ಸೇರಿದಂತೆ ವಿವಿಧ ಹೋಟೆಲ್ ಹಾಗೂ ಕ್ಲಬ್‌ಗಳಲ್ಲಿ ಬೃಹತ್ ಎಲ್‌ಇಡಿ ಸ್ಕ್ರೀನ್ ಮೂಲಕ ಪಂದ್ಯದ ನೇರ ಪ್ರಸಾರ ಮಾಡಲಾಗಿದ್ದು, ಅಪಾರ ಸಂಖ್ಯೆಯ ಕ್ರಿಕೆಟ್ ಪ್ರೇಮಿಗಳು ಫೈನಲ್ ಪಂದ್ಯ ವೀಕ್ಷಿಸಿದರು

ಗುಜರಾತ್‌ನ ಅಹ್ಮದಾಬಾದ್‌ನಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಭಾರತ–ಆಸ್ಟ್ರೇಲಿಯಾ ನಡುವಿನ ಹೈವೋಲ್ಟೇಜ್ ಪಂದ್ಯ ವೀಕ್ಷಣೆಗೆ ಮೈಸೂರಿನ ಬಹುತೇಕ ಜನ ಮುಂದಾಗಿದ್ದರಿಂದ ಮಧ್ಯಾಹ್ನ 1 ಗಂಟೆಯಿಂದಲೇ ಮೈಸೂರಿನ ಬಹುತೇಕ ರಸ್ತೆಗಳು ಬಿಕೋ ಎನ್ನಲಾರಂಭಿಸಿತ್ತು ವಿಶ್ವಕಪ್ ಪಂದ್ಯಾವಳಿಯಲ್ಲಿ ಸೆಮಿಫೈನಲ್ ಸೇರಿದಂತೆ ಸತತ 10 ಪಂದ್ಯಗಳನ್ನು ಗೆದ್ದು ಸೋಲಿಲ್ಲದ ಸರದಾರ ಎನಿಸಿಕೊಂಡಿದ್ದ ಭಾರತ ಈ ಬಾರಿ ವಿಶ್ವಕಪ್ ಮುಡಿಗೇರಿಸಿಕೊಳ್ಳುವುದನ್ನು ಕಣ್ತುಂಬಿಕೊಳ್ಳುವುದಕ್ಕಾಗಿ ಮೈಸೂರಿನ ಜನತೆ ಕಾತರ ವ್ಯಕ್ತಪಡಿಸಿದರು. ಇದರಿಂದ ಬೆಳಗ್ಗಿನಿಂದಲೇ ಮೈಸೂರಲ್ಲಿ ಕ್ರಿಕೆಟ್ ಜ್ವರದ ಕಾವು ಹೆಚ್ಚಾಗಿತ್ತು.

ಚಾಮುಂಡಿವಿಹಾರ ಕ್ರೀಡಾಂಗಣ: ವಿಶ್ವಕಪ್ ಕ್ರಿಕೆಟ್ ಫೈನಲ್ ಪಂದ್ಯವನ್ನು ರಾಜ್ಯದ ಎಲ್ಲಾ ಜಿಲ್ಲಾ ಕ್ರೀಡಾಂಗಣದಲ್ಲಿ ಬೃಹತ್ ಪರದೆ ಮೇಲೆ ಪ್ರಸಾರ ಮಾಡುವಂತೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆದೇಶಿಸಿದ್ದರಿಂದ ಮೈಸೂರಿನ ನಜರ್‌ಬಾದ್‌ನಲ್ಲಿರುವ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಬೃಹತ್ ಎಲ್‌ಇಡಿ ಪರದೆ ಅಳವಡಿಸಲಾಗಿತ್ತು. ಹಾಕಿ ಮೈದಾನದ ಮುಂಭಾಗದ ಮೈದಾನದಲ್ಲಿ 50X30 ಅಳತೆಯ ಎಲ್‌ಇಡಿ ಸ್ಕ್ರೀನ್ ಅಳವಡಿಸಿ, 500 ಮಂದಿ ಕುಳಿತುಕೊಳ್ಳಲು ಆಸನದ ವ್ಯವಸ್ಥೆ ಮಾಡಲಾಗಿತ್ತು. ಮಧ್ಯಾಹ್ನ 1.30 ರಿಂದಲೇ ಬೃಹತ್ ಪರದೆ ಮೇಲೆ ಫೈನಲ್ ಪಂದ್ಯದ ನೇರ ಪ್ರಸಾರ ಮಾಡಲಾಯಿತು. ಕ್ರೀಡಾ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳು ಸೇರಿದಂತೆ ಸ್ಥಳೀಯರು ಹಾಗೂ ಕ್ರಿಕೆಟ್ ಪ್ರೇಮಿಗಳು ಪರದೆ ಮೇಲೆ ಪಂದ್ಯ ವೀಕ್ಷಿಸಿ ಸಂಭ್ರಮಿಸಿದರು.

ಬೈಕ್ ರ್‍ಯಾಲಿ: ಭಾರತ ಕ್ರಿಕೆಟ್ ತಂಡ ಬೆಂಬಲಿಸಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದಲ್ಲಿ ರಾಮಾನುಜ ರಸ್ತೆಯ ಶ್ರೀ ಜಯಚಾಮರಾಜೇಂದ್ರ ಯುವ ವೇದಿಕೆಯ ಸದಸ್ಯರು ಬೈಕ್ ರ್‍ಯಾಲಿ ನಡೆಸಿ ಭಾರತಾಂಭೆಗೆ ಜೈಯಘೋಷ ಹಾಕಿದರು.

ಮೈಸೂರಿನ ರಾಮಾನುಜ ರಸ್ತೆಯ ಬೈಕ್ ರ್‍ಯಾಲಿಗೆ ಚಾಲನೆ ನೀಡಿದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಇಂದು ಕ್ರಿಕೆಟ್ ಅನ್ನು ಬಹುತೇಕ ಎಲ್ಲರೂ ಇಷ್ಟ ಪಡುತ್ತಾರೆ. ಭಾರತ ತಂಡದ ಅಮೋಘ ಪ್ರದರ್ಶನ ನೀಡಿ, ಕೋಟ್ಯಾಂತರ ಭಾರತೀಯರ ಮನೆಗೆದ್ದಿದೆ. ಇದರಿಂದಾಗಿ ದೇಶದುದ್ದಗಲಕ್ಕೂ ಭಾರತ ವಿಶ್ವ ಕಪ್ ಫೈನಲ್ ಪಂದ್ಯವನ್ನು ಗೆಲ್ಲಲೆಂದು ಪ್ರಾರ್ಥಿಸುತ್ತಿದ್ದಾರೆ. ಉದಯೋನ್ಮುಖ ಕ್ರಿಕೆಟ್ ಪಟುಗಳನ್ನು ಒಳಗೊಂಡಿರುವ ಭಾರತ ತಂಡ ಬೌಲಿಂಗ್, ಬ್ಯಾಟಿಂಗ್ ಹಾಗೂ ಫೀಲ್ಡಿಂಗ್ ವಿಭಾಗಗಳಲ್ಲೂ ಉತ್ತಮ ಪ್ರದರ್ಶನ ನೀಡಿದೆ. ಭಾರತ ಮತ್ತು ಆಸ್ಟ್ರೇಲಿಯಾ ನಡುವಿನ ಫೈನಲ್ ಪಂದ್ಯವನ್ನು ಕಾತುರದಿಂದ ಕಾಯುತ್ತಿದ್ದು ಭಾರತದ ಕ್ರಿಕೆಟ್ ಪಟುಗಳಿಗೆ ಸವಾಲಿನ ಪಂದ್ಯವಾಗಿದೆ. ವಿಶ್ವದ ಅಗ್ರಮಾನ್ಯ ಬ್ಯಾಟ್ಸ್‌ಮನ್ ಮತ್ತು ಬೌಲಿಂಗ್ ಪಡೆಯನ್ನು ಹೊಂದಿರುವ ಭಾರತ ತಂಡ ಈಗಾಗಲೇ ಹಲವು ವಿಶಿಷ್ಟ ದಾಖಲೆ ಮಾಡಿದೆ. ಭಾರತದ ಗೆಲುವಿಗಾಗಿ ಪ್ರಾರ್ಥಿಸೋಣ ಎಂದರು.

ಈ ವೇಳೆ ಕಾಂಗ್ರೆಸ್ ಮುಖಂಡ ರವಿಶಂಕರ್, ಅಸಂಘಟಿತ ಕಾರ್ಮಿಕ ಸಂಘಟನೆಯ ಅಧ್ಯಕ್ಷ ವಿನಯ್ ಕುಮಾರ್, ಪಾಲಿಕೆ ಮಾಜಿ ಪಾಲಿಕೆ ಸದಸ್ಯ ಎಂ. ಸುನೀಲ್, ರಾಕೇಶ್, ಗಣೇಶ್, ಮಹೇಶ್, ಸುರೇಶ್, ವಿಜಯ್ ಕುಮಾರ್, ಗುಣಶೇಖರ್, ಕುಮಾರ್(ಕುಮ್ಮಿ), ಧರ್ಮೇಂದ್ರ, ಮಹೇಂದ್ರ, ಸೋಮು ಸರಗೂರು ಮತ್ತಿತರರು ಪಾಲ್ಗೊಂಡಿದ್ದರು.

ಮನೆಗಳಲ್ಲೂ ಕ್ರಿಕೆಟ್ ಸಂಭ್ರಮ: ಭಾರತ ಮತ್ತು ಆಸ್ಟ್ರೇಲಿಯಾ ನಡುವಿನ ಫೈನಲ್ ಪಂದ್ಯ ವೀಕ್ಷಣೆಗೆ ಬಹುತೇಕ ಎಲ್ಲಾ ಮನೆಗಳಲ್ಲೂ ಟಿವಿ ಮೂಲಕ ಕ್ರಿಕೆಟ್ ವೀಕ್ಷಿಸಿದರು. ಇದರಿಂದ ಮನೆಗಳಲ್ಲೇ ಜನ ಇದ್ದಿದ್ದರಿಂದ ಮೈಸೂರಿನ ಬಹುತೇಕ ರಸ್ತೆಗಳಲ್ಲಿ ಜನ ಸಂಚಾರ ವಿರಳವಾಗಿತ್ತು. ಅಲ್ಲದೆ, ಕೆಲವು ರಸ್ತೆಗಳಲ್ಲಿ ಹಲವು ಮಳಿಗೆಗಳಿಗೆ ರಜೆ ನೀಡಲಾಗಿತ್ತು. ಫಾಸ್ಟ್‌ಫುಡ್ ಸೇರಿದಂತೆ ಕೆಲವು ಹೋಟೆಲ್‌ಗಳಿಗೂ ರಜೆ ನೀಡಲಾಗಿತ್ತು. ಇದರಿಂದ ಗ್ರಾಹಕರ ಸಂಖ್ಯೆ ವಿರಳವಾಗಿದ್ದರಿಂದ ವಾರಾಂತ್ಯವಾದರೂ ಕ್ರಿಕೆಟ್ ಜ್ವರದಿಂದಾಗಿ ವಹಿವಾಟು ಕ್ಷೀಣಿಸಿತ್ತು.


ಕ್ಲಬ್, ಹೋಟೆಲ್‌ಗಳಲ್ಲೂ ಪಂದ್ಯ ಪ್ರಸಾರ

ಮೈಸೂರಿನ ಕಾಸ್ಮೋ ಪಾಲಿಟನ್, ವಿಜಯನಗರ ಸ್ಪೋರ್ಟ್ಸ್ ಕ್ಲಬ್, ಹೆರಿಟೇಜ್ ಕ್ಲಬ್, ಸ್ಪೋರ್ಟ್ಸ್ ಕ್ಲಬ್, ಗಾಲ್ಫ್ ಕ್ಲಬ್ ಸೇರಿದಂತೆ ಇನ್ನಿತರ ಕ್ಲಬ್‌ಗಳಲ್ಲೂ ಬೃಹತ್ ಪರದೆ ಮೇಲೆ ಕ್ರಿಕೆಟ್ ಪಂದ್ಯಾವಳಿಯ ನೇರ ಪ್ರಸಾರ ಮಾಡಲಾಯಿತು. ಕ್ಲಬ್ ಸದಸ್ಯರು ಹಾಗೂ ಕುಟುಂಬದ ಸದಸ್ಯರು ವಿಶ್ವಕಪ್ ಪಂದ್ಯಾವಳಿಯ ಫೈನಲ್ ಪಂದ್ಯ ವೀಕ್ಷಿಸಿ ಸಂಭ್ರಮಿಸಿದರು.

ಮೈಸೂರಿನ ಹಲವು ಹೋಟೆಲ್‌ಗಳಲ್ಲೂ ಗ್ರಾಹಕರಿಗಾಗಿ ಫೈನಲ್ ಪಂದ್ಯದ ವೀಕ್ಷಣೆಗೆ ವ್ಯವಸ್ಥೆ ಮಾಡಲಾಗಿತ್ತು. ಮೈಸೂರಿನ ಹೋಟೆಲ್‌ಗಳಾದ ಗ್ರ್ಯಾಂಡ್ ಮರ್ಕ್ಯೂರಿ, ಕಂಟ್ರಿ ಇನ್ ಸೂಟ್, ಸೈಲೆಂಟ್ ಶೋರ್ಸ್, ಜೆ.ಪಿ.ಪಾರ್ಚೂನ್, ಸಂದೇಶ್ ದಿ ಪ್ರಿನ್ಸ್, ಪ್ರೆಸಿಡೆಂಟ್ ಸೇರಿದಂತೆ ಹಲವು ಹೋಟೆಲ್‌ಗಳಲ್ಲಿ ಬೃಹತ್ ಪರದೆ ಮೇಲೆ ವಿಶ್ವಕಪ್ ಫೈನಲ್ ಪಂದ್ಯ ಭಿತ್ತರಿಸಲಾಯಿತು.







ಕ್ರಿಸ್‌ಮಸ್ ಅಂಗವಾಗಿ ಮೈಸೂರಿನ ಹೋಟೆಲ್ ಸಂದೇಶ್ ದಿ ಪ್ರಿನ್ಸ್‌ನಲ್ಲಿ ನಡೆದ ಕ್ರಿಸ್‌ಮಸ್ ಕೇಕ್ ಮಿಕ್ಸಿಂಗ್ ಕಾರ್ಯಕ್ರಮಕ್ಕೆ ಚಿತ್ರನಟ ಡಾಲಿ ಧನಂಜಯ ಚಾಲನೆ ನೀಡಿದರು. ಈ ವೇಳೆ ವಿಧಾನ ಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್, ಚಿತ್ರ ನಿರ್ಮಾಪಕ ಹಾಗೂ ಉದ್ಯಮಿ ಸಂದೇಶ್ ಉಪಸ್ಥಿತರಿದ್ದರು.

ವಿಶ್ವ ಸುಂದರಿ ಕಿರೀಟ ಗೆದ್ದ ನಿಕರಾಗುವಾದ ಶೆನ್ನಿಸ್ ಪಲಾಸಿಯೊಸ್

ಸ್ಯಾನ್ ಸಾಲ್ವಡಾರ್, ನ.19– 2023ರ ವಿಶ್ವ ಸುಂದರಿ ಸ್ಪರ್ಧೆಯಲ್ಲಿ ನಿಕರಾಗುವಾದ ಸುಂದರಿ ಶೆನ್ನಿಸ್ ಪಲಾಸಿಯೊಸ್ ಅವರು ಮೊದಲ ಸ್ಥಾನ ಪಡೆದು ಕಿರೀಟವನ್ನು ಮುಡಿಗೇರಿಸಿಕೊಂಡಿದ್ದಾರೆ. 72ನೇ ವಿಶ್ವ ಸುಂದರಿ ಕಾರ್ಯಕ್ರಮವು ಎಲ್ ಸಾಲ್ವಡಾರ್ ನ ಸ್ಯಾನ್ ಸಾಲ್ವಡಾರ್ ನಲ್ಲಿರುವ ಜೋಸ್ ಅಡಾಲ್ಫೊ ಪಿನೆಡಾ ಅರೆನಾದಲ್ಲಿ ನಡೆಯಿತು.



ನವೆಂಬರ್ 19ರಂದು ಜೋಸ್ ಅಡಾಲ್ಫೊ ಪಿನೆಡಾ ಅರೆನಾದಲ್ಲಿ ನಡೆದ ಭವ್ಯ ಈವೆಂಟ್‌ನಲ್ಲಿ ಭಾರತದ ಶ್ವೇತಾ ಶಾರದಾ ಅವರನ್ನು ಸೋಲಿಸುವ ಮೂಲಕ ಶೆನ್ನಿಸ್ ಪಲಾಸಿಯೋಸ್ 2023ರ ವಿಶ್ವ ಸುಂದರಿ ಪ್ರಶಸ್ತಿ ಪಡೆದರು.

2022ರ ವಿಶ್ವ ಸುಂದರಿ ಯುಎಸ್‌ಎ ನ ಗ್ಯಾಬ್ರಿಯೆಲ್ ಅವರು ವೇದಿಕೆ ಯಲ್ಲಿ ಶೆನ್ನಿಸ್ ಪಲಾಸಿಯೊಸ್ ಅವರಿಗೆ ಕಿರೀಟ ತೊಡಿಸಿ ಅಲಂಕರಿಸಿದರು. ಶೆನ್ನಿಸ್ ಪಲಾಸಿಯೊಸ್ ಈ ವರ್ಷ ವಿಶ್ವ ಸುಂದರಿ ಪ್ರಶಸ್ತಿಯನ್ನು ಗೆದ್ದ ಮೊದಲ ನಿಕರಾಗುವಾ ಮಹಿಳೆ. ಅಂತಿಮ ಸುತ್ತಿನಲ್ಲಿ, ಶೆನ್ನಿಸ್ ಅವರಿಗೆ ನೀವು ಜೀವನದಲ್ಲಿ ಒಂದು ದಿನವನ್ನು ಕಳೆ ಯಲು ಯಾರನ್ನು ಆಯ್ಕೆ ಮಾಡುತ್ತೀರಿ ಎಂದು ಕೇಳಲಾಯಿತು. ಅದಕ್ಕೆ ಉತ್ತರಿಸಿದ ಅವರು 18ನೇ ಶತಮಾನದ ಬ್ರಿಟಿಷ್ ತತ್ವಜ್ಞಾನಿ ಮತ್ತು ಸ್ತ್ರೀವಾದಿ ಮೇರಿ ವೋಲ್ಸ್ಟೋನ್‌ಕ್ರಾಫ್ಟ್ ಅವರನ್ನು ಆಯ್ಕೆ ಮಾಡಿದರು. "ತನ್ನ ಮಿತಿಯನ್ನು ಮೀರಿದ್ದ ಅವರು ಅನೇಕ ಮಹಿಳೆಯರಿಗೆ ಅವಕಾಶವನ್ನು ನೀಡಿದ್ದರು. ಇಂದು ಮಹಿಳೆಯರಿಗೆ ಯಾವುದೇ ಮಿತಿಗಳಿಲ್ಲ" ಎಂದು ಹೇಳಿದರು.

ನಲ್ಲಿ, ಒಳ ಚರಂಡಿ ಕಾರ್ಮಿಕರಿಂದ ಕನ್ನಡ ರಾಜ್ಯೋತ್ಸವ ಆಚರಣೆ



ಮೈಸೂರು ನ.19(ಎಸ್‌ಪಿಎನ್)–68ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಮತ್ತು 50ನೇ ಸುವರ್ಣ ಕರ್ನಾಟಕ ರಾಜ್ಯೋತ್ಸವವನ್ನು ಸರ್.ಎಂ.ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಆಚರಿಸಲಾಯಿತು.

ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸರ್.ಎಂ.ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳ ಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘ ನಿರ್ದೇಶಕ ಚಂದ್ರೇಗೌಡ ಕನ್ನಡವನ್ನು ಉಳಿಸಿ ಎಂದು ಮಾತನಾಡಿದ್ದು ಸಾಕು. ಪ್ರತಿಯಾಗಿ ನಿತ್ಯ ವ್ಯವಹಾರದಲ್ಲಿ ಕನ್ನಡ ಭಾಷೆಯನ್ನೇ ಬಳಸಿ ಎಂದು ಮನವಿ ಮಾಡಿದರು.

ಕರ್ನಾಟಕದಲ್ಲಿ ಹೊರರಾಜ್ಯದಿಂದ ವ್ಯಾಪಾರ–ವಹಿವಾಟು ನಡೆಸುತ್ತಿರುವ ವರ್ತಕರ ಅಂಗಡಿಗೆ ಹೋಗಿ, ಅವರ ಬಳಿ ನಾವೇ ಇಂಗ್ಲಿಷ್‌ನಲ್ಲಿ ಬರೆದು ಕೊಡುತ್ತೇವೆ. ಈ ಧೋರಣೆಯಿಂದ ಆ ವರ್ತಕರು ಕನ್ನಡ ಭಾಷೆ ಕಲಿಯಲು ಹಿಂದೇಟು ಹಾಕುತ್ತಾರೆ. ಹಾಗಾಗಿ ನಾವೇ ಪದೇ ಪದೇ ಪದಾರ್ಥಗಳ ಪಟ್ಟಿಯನ್ನು ಕನ್ನಡದಲ್ಲಿ ಬರೆದು ಕಳಿಸಿದರೆ ವ್ಯವಹಾರಕ್ಕಾದರೂ ಕನ್ನಡ ಭಾಷೆ ಬಳಸಲು ತೀರ್ಮಾನಿಸುತ್ತಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಅಧ್ಯಕ್ಷ ಜಯನಗರ ಮಹೇಶ್, ಕಾರ್ಯದರ್ಶಿ ರವಿ ಕುಮಾರ್, ಖಜಾಂಚಿ ಪ್ರಕಾಶ್, ಉಪಾಧ್ಯಕ್ಷ ಸುರೇಶ್ ಕುಮಾರ್, ನಿರ್ದೇಶಕರಾದ ರುದ್ರಸ್ವಾಮಿ, ಕುಮಾರ್, ಶಿವರಾಜು, ಸಂತೋಷ್ ಕುಮಾರ್, ಜಾಕೀರ್ ಹುಸೇನ್, ಅನಿಲ್ ಕುಮಾರ್ ಮತ್ತು ಸಂಘದ ಹಿರಿಯ ಸದಸ್ಯರಾದ ಬಸ್ತಿಪುರ ಕುಮಾರ್, ಏಜಾಜ್ ಪಾಷ, ಕೃಷ್ಣಪ್ಪ ಮುನಿರತ್ನ, ರಮೇಶ್ ಬಾಬು ಸೇರಿದಂತೆ ಇತರರಿದ್ದರು.

ರಾಜಸ್ಥಾನದಲ್ಲಿ ಭೀಕರ ಅಪಘಾತ; ಐವರು ಪೊಲೀಸರು ಸಾವು

ಜೈಪುರ, ನ.19– ಭಾನುವಾರ ಮುಂಜಾನೆ ರಾಜಸ್ಥಾನದ ಚುರು ಜಿಲ್ಲೆಯಲ್ಲಿ ನಿಂತಿದ್ದ ಟ್ರಕ್‌ಗೆ ವಾಹನ ಡಿಕ್ಕಿ ಹೊಡೆದ ಪರಿಣಾಮ ಐವರು ಪೊಲೀಸರು ಸಾವಿಗೀಡಾಗಿದ್ದಾರೆ ಮತ್ತು ಇಬ್ಬರು ಗಾಯಗೊಂಡಿದ್ದಾರೆ. ಸುಜನ್‌ಗಢ್ ಸದರ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಅಪಘಾತ ಸಂಭವಿಸಿದೆ ಎಂದು ಚುರು ಪೊಲೀಸ್ ವರಿಷ್ಠಾಧಿಕಾರಿ ಪ್ರವೀಣ್ ನಾಯಕ್ ತಿಳಿಸಿದ್ದಾರೆ. ಅಪಘಾತದಲ್ಲಿ ಮೃತಪಟ್ಟವರಿಗೆ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಸಂತಾಪ ಸೂಚಿಸಿದ್ದಾರೆ.

ಸಾಧಕರಿಗೆ ಆಚಾರ್ಯ ವಿದ್ಯಾರಣ್ಯ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ

ಸಾಧಕರನ್ನೂ ಗುರುತಿಸಿ ಸನ್ಮಾನಿಸುವುದು ಕೂಡ ಸಾಧನೆಯೇ

ಮೈಸೂರು, ನ.19(ಎಂಕೆ)– ಮೈಸೂರಿನ ವಿಜಯನಗರ 1ನೇ ಹಂತದಲ್ಲಿರುವ ಜಿಲ್ಲಾ ಕಸಾಪ ಸಭಾಂಗಣದಲ್ಲಿ ಹಿಮಾಲಯ ಫೌಂಡೇಶನ್ ಸಹಯೋಗದೊಂದಿಗೆ ಕನ್ನಡ ರಾಜ್ಯೋತ್ಸವದ ಅಂಗವಾಗಿ ವಿವಿಧ ಕ್ಷೇತ್ರದ ಸಾಧಕರಿಗೆ ಆಚಾರ್ಯ ವಿದ್ಯಾರಣ್ಯ ರಾಜ್ಯೋತ್ಸವ ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು.



ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ದತ್ತ ವಿದ್ಯಾನಂದ ತೀರ್ಥ ಸ್ವಾಮೀಜಿ ಅವರು, ಡಾ.ಹೆಚ್.ಎ.ಪಾರ್ಶ್ವನಾಥ್ (ರಂಗಭೂಮಿ), ಕೆ.ಟಿ.ಬಲರಾಮೇಗೌಡ (ಕ್ರೀಡೆ), ಮೂಗೂರು ಮಧು ದೀಕ್ಷಿತ್ (ಜ್ಯೋತಿಷ್ಯ), ಎಂ.ವಿ.ಶಾಂತಕುಮಾರಿ (ಸಂಗೀತ), ಎಂ.ಮೋಹನ್ ಕುಮಾರ್ ಗೌಡ (ಕನ್ನಡಪರ ಹೋರಾಟ), ಜಯಂತಿ ಭಟ್(ಗಾಯನ), ಶಶಿಕಲಾ(ಸಿನಿಮಾ), ನಂದಿನಿ ಮೂರ್ತಿ (ಯೋಗ ಚಿಕಿತ್ಸೆ), ಪ್ರಕಾಶ್ ಬಾಬು(ಪತ್ರಿಕಾ ರಂಗ), ಎಂ.ಪಿ ಪ್ರಭುಸ್ವಾಮಿ(ಶಿಕ್ಷಣ), ಹೆಚ್.ಎಲ್.ಚೆಲುವರಾಜು (ಸಾಹಿತ್ಯ), ಆರ್.ಶ್ರುತಿ(ಕಲೆ ಮತ್ತು ನಿರೂಪಣೆ) ಇವರಿಗೆ ಆಚಾರ್ಯ ಶ್ರೀ ವಿದ್ಯಾರಣ್ಯ ರಾಜ್ಯೋತ್ಸವ ಪ್ರಶಸ್ತಿ ಪ್ರಧಾನ ಮಾಡಿದರು.

ಬಳಿಕ ಮಾತನಾಡಿದ ಶ್ರೀಗಳು, ಸಾಧಕರನ್ನು ಗುರುತಿಸಿ ಸನ್ಮಾನಿಸಿ ಗೌರವಿಸುವುದು ಕೂಡ ಒಂದು ಸಾಧನೆಯೇ. ಎಲೆ ಮರೆಯ ಕಾಯಿಗಳಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಾ ಬಂದಿರುವ ಸಾಧಕರನ್ನು ಗುರುತಿಸಿ ಪ್ರೋತ್ಸಾಹಿಸುವುದರಿಂದ ಅವರ ಸಾಧನೆಗೆ ನೀರೆರೆದಂತಾಗುತ್ತದೆ ಎಂದ ಅವರು ನವೆಂಬರ್ ತಿಂಗಳಿನಲ್ಲಿ ನಾಡಿನಾದ್ಯಂತ ವಿಭಿನ್ನವಾಗಿ ಕನ್ನಡದ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿರುವುದು ಉತ್ತಮ ಬೆಳವಣಿಗೆ ಎಂದರು.

ಆಚಾರ್ಯ ಶ್ರೀ ವಿದ್ಯಾರಣ್ಯರ ಕುರಿತು ಮಾತನಾಡಿದ ಸಂಸ್ಕೃತ ವಿದುಷಿ ಡಾ.ಕೆ. ಲೀಲಾ ಪ್ರಕಾಶ್, ಹಿಂದೂ ಧರ್ಮದ ಪುನರುತ್ಥಾನಕ್ಕೆ ಅಡಿಪಾಯ ಹಾಕಿದ ಆಚಾರ್ಯ ಶ್ರೀ ವಿದ್ಯಾರಣ್ಯರ ಸ್ಮರಣೆ ಸಂದರ್ಭೋಚಿತವಾಗಿದೆ ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಶ್ರೀ ಮಡ್ಡಿಕೆರೆ ಗೋಪಾಲ್ ಮಾತನಾಡಿ, ಕನ್ನಡ ರಾಜ್ಯೋತ್ಸವ ಎಲ್ಲರಿಗೂ ಹೆಮ್ಮೆ ತರುವಂತದ್ದು, ಆದರೆ ನಮ್ಮನ್ನು ಆಳುವ ನಾಯಕರಿಗೆ, ನ್ಯಾಯಾಧೀಶರಿಗೆ, ಅಧಿಕಾರಿಗಳಿಗೆ ಕನ್ನಡಪರ ಕಾಳಜಿ ಕಡಿಮೆಯಾಗುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದರು.

1924ರಲ್ಲಿ ಮದ್ರಾಸ್ ಪ್ರಾಂತ್ಯ ಮತ್ತು ಮೈಸೂರು ಪ್ರಾಂತ್ಯಕ್ಕೆ ಕಾವೇರಿ ನೀರಿನ ಸಮಸ್ಯೆ ಬಗ್ಗೆ ಒಡಂಬಡಿಕೆಯಾಗಿದ್ದು ಇಂತಿಷ್ಟೇ ನೀರು ಬಿಡುಗಡೆ ಮಾಡಬೇಕೆಂದು ಒಪ್ಪಂದವಾಗಿತ್ತು. ಆದರೆ ಕಾವೇರಿ ಮತ್ತು ಹೇಮಾವತಿ ನದಿಗಳ ಉಗಮದ ಸಂದರ್ಭದಲ್ಲಿ ವಾರ್ಷಿಕ 650 ಇಂಚು ಮಳೆಯಾಗುತ್ತಿತ್ತು, ಈಗ ವಾರ್ಷಿಕ ಕೇವಲ 65 ಇಂಚು ಮಳೆ ಆಗುತ್ತಿದೆ. ಸುಮಾರು 10 ಪಟ್ಟು ಮಳೆ ಕಡಿಮೆಯಾಗಿದೆ. ವೈಜ್ಞಾನಿಕವಾಗಿ ಹೇಳುವುದಾದರೆ ಪ್ರಸ್ತುತ ನಾವು ಒಂದು ತೊಟ್ಟು ನೀರನ್ನು ಬಿಡುವ ಪರಿಸ್ಥಿತಿಯಲ್ಲಿಲ್ಲ. ತಮಿಳುನಾಡಿನವರು ಮೆಟ್ಟೂರು ಜಲಾಶಯದಲ್ಲಿ 100 ಟಿಎಂಸಿ ನೀರು ಶೇಖರಣೆ ಮಾಡಿಕೊಂಡಿದ್ದು, ಮೂರು ಬೆಳೆಗಾಗಿ ಉಪಯೋಗಿಸುತ್ತಾರೆ ಎಂದು ಕಿಡಿಕಾರಿದರು.

ಮುಕ್ತಕ ಕವಿ ಎಂ.ಮುತ್ತುಸ್ವಾಮಿ, ಕಲಾವಿದೆ ಡಾ.ಜಮುನಾ ರಾಣಿ ಮಿರ್ಲೆ, ಹಿಮಾಲಯ ಪ್ರತಿಷ್ಠಾನದ ಅಧ್ಯಕ್ಷ ಎನ್.ಅನಂತ, ಸಂಚಾಲಕ ಎಂ.ವಿ. ನಾಗೇಂದ್ರ ಬಾಬು, ಕಾರ್ಯದರ್ಶಿ ಹರ್ಷವರ್ಧನ, ಪತ್ರಕರ್ತ ಮಹೇಶ್, ಹಿಂದೂ ರಾಷ್ಟ್ರೀಯ ಸಮಿತಿ ಅಧ್ಯಕ್ಷ ವಿಕಾಸ ಶಾಸ್ತ್ರಿ ಮತ್ತಿತರರಿದ್ದರು.

ತಾಲೂಕು ಮಟ್ಟದಲ್ಲೇ ಜನರ ಸಮಸ್ಯೆ ಬಗೆಹರಿಸಿ

ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಸೂಚನೆ

ತಿ.ನರಸೀಪುರ, ನ.19–ಕ್ಷೇತ್ರದ ಜನತೆ ನನ್ನ ಮೇಲೆ ವಿಶ್ವಾಸವಿಟ್ಟು ಗೆಲ್ಲಿಸಿದ್ದಾರೆ. ಅವರ ಕೆಲಸ ಕಾರ್ಯಗಳನ್ನು ಮಾಡಬೇಕಾದ ಮಹತ್ತರ ಜವಾಬ್ದಾರಿ ನನ್ನ ಮೇಲಿದೆ. ಆದ್ದರಿಂದ ಜನರ ಸಮಸ್ಯೆಗಳನ್ನು ತಾಲೂಕು ಮಟ್ಟದಲ್ಲೇ ಬಗೆಹರಿಸಬೇಕು ಎಂದು ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಸೂಚಿಸಿದರು.

ತಾಲೂಕಿನ ವ್ಯಾಸರಾಜಪುರ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, ಅಧಿಕಾರಿಗಳು ಜನರ ಸಮಸ್ಯೆಯನ್ನು ಬಗೆಹರಿಸಲು ಮೊದಲ ಆದ್ಯತೆ ನೀಡಬೇಕು. ಜನಸಂಪರ್ಕ ಸಭೆಯಲ್ಲಿ ಇಲಾಖಾವಾರು ಅಧಿಕಾರಿಗಳು ಕಡ್ಡಾಯವಾಗಿ ಹಾಜರಿದ್ದು, ಜನರ ಕಷ್ಟ–ಸುಖಕ್ಕೆ ಸ್ಪಂದಿಸಬೇಕು. ನಿರ್ಲಕ್ಷ್ಯ ಧೋರಣೆ ತೋರುವ ಅಧಿಕಾರಿಗಳಿಗೆ ಯಾವುದೇ ಮುಲಾಜಿಲ್ಲದೇ ನೋಟಿಸ್ ನೀಡುವಂತೆ ತಹಶೀಲ್ದಾರ್ ಟಿ.ಜಿ.ಸುರೇಶ್ ಆಚಾರ್ ಅವರಿಗೆ ಆದೇಶಿಸಿದರು.

ಜನರು ನನ್ನ ಮೇಲೆ ವಿಶ್ವಾಸವಿಟ್ಟು ಆಯ್ಕೆ ಮಾಡಿದ್ದಾರೆ. ನೀವು ಜನರ ಕೆಲಸ ಮಾಡುತ್ತೀರಾ ಎಂದು ನಾನು ನಿಮ್ಮನ್ನು ಇಲ್ಲಿಗೆ ತಂದು ಹಾಕಿದ್ದೇನೆ. ಕೆಲಸ ಮಾಡದೇ ನೀವು ಕಳ್ಳರಾದರೆ, ನಾನೂ ಕಳ್ಳನಾಗಬೇಕಾಗುತ್ತದೆ. ಹಾಗಾಗಿ ನಾವೆಲ್ಲರೂ ಒಟ್ಟಾಗಿ ಸೇರಿ ಜನತೆಯ ಸಮಸ್ಯೆಗಳನ್ನು ಆಲಿಸಿ ಕೆಲಸಬೇಕಿದೆ. ಅಧಿಕಾರಿಗಳು ಬಡವರು ಹಾಗೂ ಕಾನೂನು ಪರವಾದ ಕೆಲಸ ಮಾಡಬೇಕು. ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸುವ ಮೂಲಕ ಆಡಳಿತದಲ್ಲಿ ವಿಶ್ವಾಸ ಬರುವಂತೆ ಮಾಡಬೇಕು. ಸಿದ್ದರಾಮಯ್ಯ, ಮಹದೇವಪ್ಪ ಎಂದರೆ ಸಾಮಾನ್ಯ ಜನರು ಇಷ್ಟ ಪಡುತ್ತಾರೆ. ಹಾಗೆಯೇ ನಾವು ಜನಗಳನ್ನು ಹೆಚ್ಚು ಪ್ರೀತಿಸುತ್ತೇವೆ. ಆದರೆ, ಇಷ್ಟಕಷ್ಟ ಸಾಲದು, ನಾವು ಕೂಡ ಅವರ ಕಷ್ಟಸುಖದಲ್ಲಿ ಭಾಗಿಯಾಗಬೇಕಲ್ಲವೇ ಎಂದರು.

ಅಧಿಕಾರಿಗಳಿಗೆ ತಾಕೀತು: ತಲಕಾಡಿನ ಮುಡುಕುತೊರೆ ಸಮೀಪ ಬಾಬು ಜಗಜೀವನರಾಂ ಭವನದ ಕಾಮಗಾರಿ ಸ್ಥಗಿತಗೊಂಡಿದೆ. ವಾಲ್ಮೀಕಿ ಭವನ ಹಾಗೂ ಬುದ್ಧ ವಿಹಾರದ ಅಸೆಸ್‌ಮೆಂಟ್ ವರದಿ ನೀಡುವಂತೆ ಎಇಇ ಸತೀಶ್‌ಚಂದ್ರ ಅವರಿಗೆ ಮಹದೇವಪ್ಪ ಸೂಚಿಸಿದರು.

ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಮಾತನಾಡಿದರು. ಕೆಡಿಪಿ ಸದಸ್ಯ ಸುನೀಲ್ ಬೋಸ್, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ, ತಾಪಂ ಮಾಜಿ ಅಧ್ಯಕ್ಷ ಶಿವಸ್ವಾಮಿ, ಜಿಪಂ ಮಾಜಿ ಸದಸ್ಯ ಹೊನ್ನನಾಯಕ, ಪ್ರಥಮ ದರ್ಜೆ ಗುತ್ತಿಗೆದಾರ ಕೆ.ಎಂ.ಮಧುಕುಮಾರ್, ಮಾರ್ಗ ವಿಸ್ತರಣಾಧಿಕಾರಿ ಆರ್.ಪ್ರಮೋದ್, ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ವಕ್ತಾರ ಹುಣಸೂರು ಬಸವಣ್ಣ, ಗದ್ದೆಮೋಳೆ ಸಿದ್ದರಾಜು, ಡೈರಿ ಅಧ್ಯಕ್ಷ ಟಿ.ರಂಗಸ್ವಾಮಿ, ಉಪಾಧ್ಯಕ್ಷ ಎಂ.ಮುದ್ದಯ್ಯ, ನಿರ್ದೇಶಕರಾದ ಸಿದ್ದಪ್ಪಾಜಿ, ಪುಟ್ಟಸ್ವಾಮಿ, ಚೋಟಯ್ಯ, ಮಲ್ಲನಾಯಕ, ನಾಗರಾಜು, ನಂಜುಂಡೇಗೌಡ, ಸಿದ್ದೇಗೌಡ, ಬಸವಯ್ಯ, ಮಾರನಾಯಕ, ದೇವಮ್ಮ, ಸಾವಿತ್ರಮ್ಮ, ಕಾರ್ಯದರ್ಶಿ ಅಂದಾನಿಗೌಡ ಮತ್ತಿತರರಿದ್ದರು.



ಜಾಗ ಗುರುತಿಸಿ

ಕ್ಷೇತ್ರಕ್ಕೆ ಬಂದಿದ್ದ ಪಾಲಿಟೆಕ್ನಿಕ್ ಕಾಲೇಜ್ ಅನ್ನು ಅನಿವಾರ್ಯದಿಂದ ವಾಪಸ್ ಹೋಗಿತ್ತು. ಈಗ ಮತ್ತೆ ಕಾಲೇಜನ್ನು ವಾಪಸ್ ತರಲಾಗಿದೆ. ಹೊರಳಹಳ್ಳಿ ಫಾರು ಬಳಿ ಪಾಲಿಟೆಕ್ನಿಕ್ ಕಾಲೇಜು ನಿರ್ಮಾಣ ಸಂಬಂಧ ಮುಂದಿನ ವಾರವೇ ಭೂಮಿಪೂಜೆ ಮಾಡಲು ಕ್ರಮ ಕೈಗೊಳ್ಳಲಾಗುವುದು. ಇದಕ್ಕೆ 8 ಕೋಟಿ ರೂ. ಮೀಸಲಿರಿಸಲಾಗಿದೆ. ಅಲ್ಲದೆ ಇದೇ ಸ್ಥಳದಲ್ಲೇ ತಾಲೂಕು ಕ್ರೀಡಾಂಗಣ ಮಾಡಬೇಕಿದೆ. ಬಸ್ ಡಿಪೋಗೆ ಬೇಡಿಕೆ ಬಂದಿದೆ. ಇವೆಲ್ಲಕ್ಕೂ ಅನುದಾನ ನೀಡಲು ಸರ್ಕಾರ ಸಿದ್ಧವಿದ್ದು, ಜಾಗವನ್ನು ಗುರುತಿಸುವ ಕೆಲಸ ಅಧಿಕಾರಿಗಳು ಮಾಡಬೇಕಿದೆ ಎಂದು ಸಚಿವ ಡಾ.ಎಚ್.ಸಿ.ಮಹದೇವಪ್ಪ ತಿಳಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	**(ದೂ: 2521923)**
ಮಂಗಳ ವರುಂ(ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಘೋಸ್ಟ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಟೈಗರ್–3 (ಹಿಂದಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಜಪಾನ್ (ಇ)	4 ಪ್ರದರ್ಶನಗಳು
ಗಾಯಿತ್ರಿ	
ಲಿಯೋ (ಕ)	2 ಪ್ರದರ್ಶನಗಳು
ರಾಜಕಮಲ್	
ಟೈಗರ್–3 (ಹಿಂದಿ)	4 ಪ್ರದರ್ಶನಗಳು
ಸಂಗಂ	
ಸಪ್ತ ಸಾಗರದಾಚೆ ಎಲ್ಲೋ–ಸೈಡ್ B(ಕ)	4 ಪ್ರದರ್ಶನಗಳು
ಲಿಡೋ	
ಗರಡಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಮಂಗಳ ವರುಂ (ಕ)	4 ಪ್ರದರ್ಶನಗಳು
ಪ್ರಭಾ	
ನೇತ್ರಂ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಟೈಗರ್ 3(ಹಿಂ): ಬೆ.10.20ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಟಗರುಪಲ್ಯ (ಕ): ಮ.1.20ಕ್ಕೆ.
ಸ್ಕ್ರೀನ್ 2	ದಿ ವೆಕೆಂಟ್ ಹೌಸ್ (ಕ): ಬೆ.11ಕ್ಕೆ, ರಾಜಯೋಗ (ಕ): ಮ.1.15ಕ್ಕೆ, ನೇತ್ರಂ (ಕ): ಸಂ.4.30ಕ್ಕೆ, ಗರಡಿ (ಕ): ರಾ.7.10ಕ್ಕೆ, ಸ್ಪಾರ್ಕ್ ಲೈಫ್ (ತೆ): ರಾ.10ಕ್ಕೆ.
ಸ್ಕ್ರೀನ್ 3	ಟ್ರೋಲ್ಸ್ ಬ್ಯಾಂಡ್ ಟುಗೆದರ್ (3ಡಿ)(ಇಂ): ಬೆ.11ಕ್ಕೆ, ಮ.3.35ಕ್ಕೆ, ಸಂ.5.30ಕ್ಕೆ, ಬೆಂಬಿಡದ ನಾವಿಕ (ಕ): ಮ.1ಕ್ಕೆ, ಶೇಶಮ್ ಮೈಕ್ ಇಲ್ ಫಾತಿಮಾ (ಮ): ರಾ.7.30ಕ್ಕೆ, ದಿ ಹಂಗರ್ ಗೇಮ್ಸ್ (ಇಂ): ರಾ.10.10ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.05ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.9.40ಕ್ಕೆ, ಮ.12.50ಕ್ಕೆ, ಸಂ.4ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.9ಕ್ಕೆ, ಮ.12.10ಕ್ಕೆ, ಸಂ.3.20ಕ್ಕೆ, ಸಂ.6.30ಕ್ಕೆ, ರಾ.9.40ಕ್ಕೆ.
ಸ್ಕ್ರೀನ್ 3	ಟೈಗರ್ 3 (ಹಿಂ): ಬೆ.9.10ಕ್ಕೆ, ಮ.12.30ಕ್ಕೆ, ಮ.3.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 4	ಮಂಗಳವಾರಂ (ತೆ): ಬೆ.9.10ಕ್ಕೆ, ಮ.12.25ಕ್ಕೆ, ಸಂ.6.45ಕ್ಕೆ, ಗರಡಿ (ಕ): ಮ.3.40ಕ್ಕೆ, ಟೈಗರ್ 3 (ಹಿಂ): ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ದಿ ವೆಕೆಂಟ್ ಹೌಸ್ (ಕ): ಬೆ.11ಕ್ಕೆ, ಸಂ.4.10ಕ್ಕೆ, ರಾಜಯೋಗ (ಕ): ಮ.1.05ಕ್ಕೆ, ಸಂ.6.15ಕ್ಕೆ, ಟಗರುಪಲ್ಯ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10ಕ್ಕೆ, ಮ.1.15ಕ್ಕೆ, ರಾ.7.30ಕ್ಕೆ, ಟೈಗರ್ 3 (ಹಿಂ): ಸಂ.4.20ಕ್ಕೆ.
ಸ್ಕ್ರೀನ್ 3	ಟೈಗರ್ 3(ಹಿಂ): ಬೆ.11ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.3.45ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಟಗರುಪಲ್ಯ (ಕ): ಬೆ.10.30ಕ್ಕೆ, ಸಂ.4.10ಕ್ಕೆ, ಸಂ.6.50ಕ್ಕೆ, ಟೈಗರ್ 3 (ಹಿಂ): ಮ.1.05ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಘೋಸ್ಟ್ (ಕ): ಬೆ.9ಕ್ಕೆ, ಬೆ.10.20ಕ್ಕೆ, ಮ.1.15ಕ್ಕೆ, ಮ.3.20ಕ್ಕೆ, ರಾ.7.35ಕ್ಕೆ, ರಾ.9.45ಕ್ಕೆ, ರಾ.10.30ಕ್ಕೆ, **12th ಫೇಲ್ (ಹಿಂ):** ಮ.3.50ಕ್ಕೆ, **ಭಗವಂತ್ ಕೇಸರಿ (ತೆ):** ರಾ.7.05ಕ್ಕೆ, **ಗಣಪತ್: ಎ ಹೀರೋ (ಹಿಂ):** ಸಂ.4.10ಕ್ಕೆ, **ಕಿಲ್ಲರ್ಸ್ ಆಫ್ ಫ್ಲವರ್ ಮೂನ್ (ಇಂ):** ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ, **ಲಿಯೋ (ಕ):** ಮ.12.45ಕ್ಕೆ, **ಲಿಯೋ (ತ):** ಬೆ.11.55ಕ್ಕೆ, ಸಂ.4.10ಕ್ಕೆ, ಸಂ.6.15ಕ್ಕೆ, ರಾ.9.40ಕ್ಕೆ, ರಾ.10.30ಕ್ಕೆ, **ಮುಜಿಬ್ ದಿ ಮೇಕಿಂಗ್ ಆಫ್ ಎ ನೇಷನ್ (ಹಿಂ):** ರಾ.10ಕ್ಕೆ, **ಟಗರುಪಲ್ಯ (ಕ):** ಮ.1ಕ್ಕೆ, ರಾ.7ಕ್ಕೆ, **ತೇಜಸ್ (ಹಿಂ):** ಬೆ.11.05ಕ್ಕೆ, ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

50ಕ್ಕೂ ಹೆಚ್ಚು ಪ್ರತಿಭಟನಾಕಾರರ ವಿರುದ್ಧ ಎಫ್‌ಐಆರ್

ನಂಜನಗೂಡು: ಅಪಘಾತದಲ್ಲಿ ಮೃತಪಟ್ಟಿದ್ದ ವ್ಯಕ್ತಿಯ ಕುಟುಂಬಕ್ಕೆ ಪರಿಹಾರ ಕೊಡಿಸಿಕೊಡಿಸುವಂತೆ ಶವವಿಟ್ಟು ರಸ್ತೆ ತಡೆ ನಡೆಸುತ್ತಿದ್ದ ವೇಳೆ ಪೊಲೀಸರ ಮೇಲೆ ಗಂಭೀರವಾಗಿ ಹಲ್ಲೆ ನಡೆಸಿದ್ದಾರೆ ಎಂದು 50ಕ್ಕೂ ಹೆಚ್ಚು ಪ್ರತಿಭಟನಾಕಾರರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ನ.17ರಂದು ತಾಲೂಕಿನ ಹೊಮ್ಮರಗಳ್ಳಿ ರಸ್ತೆಯ ಜೆ.ಪಿ.ಹುಂಡಿ ಗ್ರಾಮದ ಬಳಿ ಕಾರು ಮತ್ತು ಬೈಕ್ ನಡುವೆ ಅಪಘಾತ ಸಂಭವಿಸಿ, ಬೈಕ್ ಸವಾರ ಸುರೇಶ್ ಎಂಬುವರು ಮೃತಪಟ್ಟಿದ್ದರು. ಇದರಿಂದ ಮೃತನ ಕುಟುಂಬಕ್ಕೆ ಕಾರು ಮಾಲೀಕನಿಂದ ಪರಿಹಾರ ಕೊಡಿಸಬೇಕೆಂದು ಆಗ್ರಹಿಸಿ ವಳಗೆರೆ ಗ್ರಾಮದ ನಂಜುಂಡಿ, ಗುರುಸ್ವಾಮಿ, ಗಿರೀಶ್, ಮಹೇಂದ್ರ, ಮಂಜು, ತಾತಪ್ಪ, ಶಿವಮೂರ್ತಿ, ನಾಗಪ್ಪ ಸೇರಿದಂತೆ 50ಕ್ಕೂ ಹೆಚ್ಚು ಗ್ರಾಮಸ್ಥರು ಹಾಗೂ ಸಂಬಂಧಿಕರು ಹುಲ್ಲಹಳ್ಳಿ ಪೊಲೀಸ್ ಠಾಣೆ ಎದುರು ಶವವಿಟ್ಟು ಮುಖ್ಯರಸ್ತೆ ಬಂದ್ ಮಾಡಿ ಪ್ರತಿಭಟನೆ ನಡೆಸುತ್ತಿದ್ದರು.

ಈ ವೇಳೆ ಹಿರಿಯ ಅಧಿಕಾರಿಗಳೊಂದಿಗೆ ಸ್ಥಳಕ್ಕಾಗಮಿಸಿ, ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡುವಂತೆ ಪ್ರತಿಭಟನಾಕಾರರಿಗೆ ಮನವಿ ಮಾಡಲಾಯಿತು. ಈ ವೇಳೆ ಏಕಾಏಕಿ ಅವಾಚ್ಯ ಶಬ್ದಗಳಿಂದ ನಿಂದಿಸಿ, ನನ್ನ ಸಮವಸ್ತ್ರವನ್ನು ಹಿಡಿದು ಎಳೆದಾಡಿ ಹಲ್ಲೆ ಮಾಡಿದ್ದಾರೆ ಎಂದು ಹುಲ್ಲಹಳ್ಳಿ ಪೊಲೀಸ್ ಠಾಣೆ ಸಿಬ್ಬಂದಿ ಕಿರಣ್ ದೂರು ನೀಡಿದ್ದರು. ಈ ಹಿನ್ನೆಲೆಯಲ್ಲಿ 50ಕ್ಕೂ ಹೆಚ್ಚು ಪ್ರತಿಭಟನಾಕಾರರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

ಆರ್ಥಿಕತೆಗೆ ಸಹಕಾರ ಸಂಘಗಳ ಕೊಡುಗೆ ಅಪಾರ



ಚುಂಚನಕಟ್ಟೆ: ದೇಶದ ಆರ್ಥಿಕ ಭದ್ರತಾ ವ್ಯವಸ್ಥೆ ಮತ್ತು ಪ್ರಗತಿಗೆ ಸಹಕಾರ ಸಂಘಗಳು ತಮ್ಮದೇ ಕೊಡುಗೆ ನೀಡುತ್ತಿವೆ ಎಂದ ಶಾಸಕ ಡಿ.ರವಿಶಂಕರ್ ಹೇಳಿದರು.

ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆಯ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ನಡೆದ 70ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಹಕಾರಿ ಕ್ಷೇತ್ರ ಡೇರಿ, ವಿವಿಧ ಸಂಘಗಳು ಮತ್ತು ಸ್ವಸಹಾಯ ಸಂಘಗಳನ್ನು ಸ್ಥಾಪಿಸಿ ಗ್ರಾಮೀಣ ಜನರ ಬದುಕಿಗೆ ಕಾರಣವಾಗುತ್ತಿದೆ. ಈ ಕ್ಷೇತ್ರವನ್ನು ಮತ್ತಷ್ಟು ಭದ್ರಪಡಿಸುವ ಜವಾಬ್ದಾರಿ ನಮ್ಮ ಮೇಲಿದೆ ಎಂದರು.

ಸಹಕಾರ ಸಂಘಗಳಲ್ಲಿ ನಡೆಯುವ ಚುನಾವಣೆಗಳನ್ನು ರಾಜಕೀಯ ದ್ವೇಷವಾಗಿ ಸ್ವೀಕರಿಸದೇ ಸಂಘಗಳ ಅಭಿವೃದ್ಧಿಗೆ ಮುಂದಾಗಬೇಕು ಆಗ ಮಾತ್ರ ಅಭಿವೃದ್ಧಿಗೆ ಸಹಕಾರವಾಗಿಲಿದೆ. ಸಹಕಾರ ಕ್ಷೇತ್ರದ ಯಶಸ್ವಿಗೆ ಶ್ರಮಿಸುತ್ತಿರುವ ಶಾಸಕ ಜಿ.ಟಿ.ದೇವೇಗೌಡ ಮತ್ತು ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಎಚ್.ವಿ.ರಾಜೀವ್ ಕಾರ್ಯ ಶ್ಲಾಘನೀಯ ಎಂದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಎಚ್.ವಿ.ರಾಜೀವ್ ಮಾತನಾಡಿ, ಕೇಂದ್ರ ಸರ್ಕಾರ ಸಹಕಾರ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡಲು 900 ಕೋಟಿ ರೂ.ಗಳನ್ನು ಸಹಕಾರ ಖಾತೆಯಲ್ಲಿ ಮೀಸಲಿಟ್ಟು, ಸುಮಾರು 63 ಸಾವಿರ ಸಂಘಗಳ ಬೆಳವಣಿಗೆಗೆ ಮುಂದಾಗಿರುವುದು ಸಹಕಾರ ಕ್ಷೇತ್ರಗಳಿಗೆ ಮತ್ತಷ್ಟು ಬಲ ಬಂದಿದೆ ಎಂದು ತಿಳಿಸಿದರು.

ಜಿಲ್ಲಾ ಹಾಲು ಒಕ್ಕೂಟದ ಮಾಜಿ ಅಧ್ಯಕ್ಷ ಎ.ಟಿ.ಸೋಮಶೇಖರ್ ಮಾತನಾಡಿದರು. ಕೆ.ಆರ್.ನಗರದ ಅರ್ಬನ್ ಕೋ–ಅಪರೇಟಿವ್ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ಮೂಡಬಿದ್ರೆಯ ಕೆಐಸಿಎಂನ ಪ್ರಾಂಶುಪಾಲ ಡಾ.ಎಂ.ವಿಶ್ವೇಶ್ವರಯ್ಯ, ತಹಶೀಲ್ದಾರ್ ಪೂರ್ಣಿಮಾ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಹರಿಚಿದಂಬರ್, ಎಪಿಎಂಸಿ ಮಾಜಿ ಅಧ್ಯಕ್ಷ ಕುಪ್ಪಳ್ಳಿ ಸೋಮು, ಕುಕ್ಕುಟ ಸಹಕಾರ ಮಹಾಮಂಡಳ ನಿರ್ದೇಶಕ ಎಸ್.ಸಿದ್ದೇಗೌಡ, ಜಿಲ್ಲಾ ಸಹಕಾರ ಒಕ್ಕೂಟದ ನಿರ್ದೇಶಕ ಟಿ.ರಾಮೇಗೌಡ, ವ್ಯವಸ್ಥಾಪಕ ಹರೀಶ್, ಜಿಲ್ಲಾ ಸಹಕಾರ ಬ್ಯಾಂಕ್ ನಿರ್ದೇಶಕ ಎಚ್.ಸುಬ್ಬಯ್ಯ, ಟಿಎಪಿಎಂಎಸ್ ಅಧ್ಯಕ್ಷ ಪರಶಿವಮೂರ್ತಿ, ಕುಪ್ಪೆ ಸಹಕಾರ ಸಂಘದ ಅಧ್ಯಕ್ಷ ಸಿ.ಬಿ.ಸಂತೋಷ್, ಜಿಲ್ಲಾ ಹಾಲು ಒಕ್ಕೂಟದ ಎಂ.ಡಿ.ವಿಜಯಕುಮಾರ್, ಸಹಕಾರ ಸಂಘದ ನಿಬಂಧರಾದ ಅನುಸೂಯ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಉದಯಕುಮಾರ್, ಮುಖಂಡ ಎಲ್‌ಐಸಿ ಜಗದೀಶ್ ಇದ್ದರು.

ಮುಂದೆ ಕ್ಷೇತ್ರದಲ್ಲಿ ಜೆಡಿಎಸ್‌ಗೆ ಉತ್ತಮ ಫಲಿತಾಂಶ



ತಿ.ನರಸೀಪುರ: ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಕಾರ್ಯಕರ್ತರು ಹಾಗೂ ಮುಖಂಡರ ಮಾರ್ಗದರ್ಶನದೊಂದಿಗೆ ಕ್ಷೇತ್ರದಲ್ಲಿ ಜೆಡಿಎಸ್ ಶಕ್ತಿ ಅನಾವರಣಗೊಳ್ಳಲಿದ್ದು, ಉತ್ತಮ ಫಲಿತಾಂಶ ಬರಲಿದೆ ಎಂದು ಮಾಜಿ ಶಾಸಕ ಎಂ.ಅಶ್ವಿನ್ ಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

ಪಟ್ಟಣದ ಶ್ರೀ ಗುಂಜಾ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಜೆಡಿಎಸ್ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಹಮ್ಮಿಕೊಂಡಿದ್ದ ವಿಶೇಷ ಪೂಜಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಈ ಬಾರಿಯ ಚುನಾವಣೆಯಲ್ಲಿ ಕೆಲ ಕಾರಣಗಳಿಂದ ನಮಗೆ ಹಿನ್ನಡೆ ಉಂಟಾಗಿರಬಹುದು. ಆದರೆ, ಈ ಬೆಳವಣಿಗೆಯಿಂದ ಪಕ್ಷದ ಯಾರೂ ವಿಚಲಿತರಾಗಿ ಧೈರ್ಯ ಕಳೆದುಕೊಂಡಿಲ್ಲ. ಕಾರ್ಯಕರ್ತರು ಹಾಗೂ ಮುಖಂಡರು ಹುಮ್ಮಸ್ಸಿನಿಂದಲೇ ಕ್ಷೇತ್ರದಲ್ಲಿ ಎಂದಿನಂತೆ ಪಕ್ಷದ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡಿದ್ದಾರೆ ಎಂದರು.

ಈ ಬಾರಿ ಚುನಾವಣೆಯ ಫಲಿತಾಂಶದ ಕಹಿ ನೆನಪನ್ನು ಮರೆತು, ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡಿ ಮುಂದೆ ಕ್ಷೇತ್ರದಲ್ಲಿ ಪಕ್ಷದ ಬಲವರ್ಧನೆಗೆ ಮುಂದಾಗೋಣ. ಕಾರ್ಯಕರ್ತರು, ಅಭಿಮಾನಿಗಳು ನನ್ನ ಮೇಲಿಟ್ಟಿರುವ ಪ್ರೀತಿ ವಿಶ್ವಾಸಕ್ಕೆ ನಾನು ಸದಾ ಋಣಿಯಾಗಿದ್ದೇನೆ. ಸದಾ ನಿಮ್ಮ ಕಷ್ಟಸುಖಗಳಿಗೆ ಸ್ಪಂದಿಸುವ ಮೂಲಕ ಋಣ ತೀರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು.

ಈ ವೇಳೆ ಜೆಡಿಎಸ್ ಕ್ಷೇತ್ರಾಧ್ಯಕ್ಷ ಸಿ.ಬಿ.ಹುಂಡಿ ಚಿನ್ನಸ್ವಾಮಿ, ಪ್ರಭುಸ್ವಾಮಿ, ವೈ.ಎಸ್.ರಾಮಸ್ವಾಮಿ, ಮೂಗೂರು ಶಿವಮೂರ್ತಿ, ಶಿವು, ಸೋಸಲೆ ರಾಜೇಶ್, ತಿರುಮಕೂಡಲು ಜಯರಾಮ, ಗುರುಪ್ರಸಾದ್, ಶೇಖರಪ್ಪ, ಉಮಾಪತಿ, ಕನ್ನಳ್ಳಿ ಶಿವಕುಮಾರ್, ಅಡುಗೆ ಕಂಟ್ರಾಕ್ಟರ್ ರಾಜಪ್ಪ, ಚೇತನ್‌ಶೆಟ್ಟಿ, ನಿಲಸೋಗೆ ಮಹೇಶ್ ಮತ್ತಿತರರು ಹಾಜರಿದ್ದರು.

ಡಿ.10ರಿಂದ ಬೇಲದಕುಪ್ಪೆ ಮಹದೇಶ್ವರಸ್ವಾಮಿ ಜಾತ್ರೆ

ಈ ಬಾರಿ ಮುಜರಾಯಿ ಇಲಾಖೆ ನೇತೃತ್ವ



ಸರಗೂರು: ನೂರಾರು ವರ್ಷಗಳ ಇತಿಹಾಸವುಳ್ಳ ತಾಲೂಕಿನ ಬೇಲದಕುಪ್ಪೆ ಮಹದೇಶ್ವರಸ್ವಾಮಿಯ ಜಾತ್ರಾ ಮಹೋತ್ಸವವನ್ನು ಈ ಬಾರಿ ಮುಜರಾಯಿ ಇಲಾಖೆ ನೇತೃತ್ವದಲ್ಲಿ ವಿಜೃಂಭಣೆಯಿಂದ ಆಚರಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಹೆಡಿಯಾಲದ ಖಾಸಗಿ ಕಲ್ಯಾಣ ಮಂಟಪದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಬಂಡೀಪುರ ಹುಲಿಸಂರಕ್ಷಿತ ಪ್ರದೇಶ ಅರಣ್ಯ ವ್ಯಾಪ್ತಿಯ ಬೇಲದಕುಪ್ಪೆ ಮಹದೇಶ್ವರ ದೇವಸ್ಥಾನದಲ್ಲಿ ಕಡೇ ಕಾರ್ತೀಕ ಮಾಸದ ಡಿ.10ರಿಂದ ನಾಲ್ಕು ದಿನ ಗ್ರಾಮೀಣ ಸಂಪ್ರದಾಯದಂತೆ ಹಾಗೂ ಅರಣ್ಯ ಇಲಾಖೆಗೆ ಯಾವುದೇ ತೊಂದರೆಯಾಗದಂತೆ ಜಾತ್ರಾ ಮಹೋತ್ಸವ ಆಚರಿಸಲಾಗುವುದು. ಇದಕ್ಕೆ ಸಾರ್ವಜನಿಕರು, ಅಧಿಕಾರಿಗಳು ಸಹಕರಿಸಬೇಕು ಎಂದು ಜಾತ್ರಾ ಮಹೋತ್ಸವ ಸಮಿತಿ ಮನವಿ ಮಾಡಿದೆ.

ಖಾಸಗಿ ವಾಹನ ನಿಷೇಧ: ಜಾತ್ರೆಯಲ್ಲಿ ಜಾನುವಾರುಗಳಿಗೆ ಪ್ರವೇಶ, ಊಟ–ತಿಂಡಿ ವ್ಯವಸ್ಥೆ, ಎತ್ತಿನಗಾಡಿ, ಖಾಸಗಿ ವಾಹನಗಳಿಗೆ ನಿಷೇಧಿಸಿ ಅರಣ್ಯಾಧಿಕಾರಿಗಳ ನಿಯಮ ಪಾಲಿಸಲು ಸಭೆಯಲ್ಲಿ ನಿರ್ಧರಿಸಲಾಯಿತು. ತಹಶೀಲ್ದಾರ್ ಬಳಿ ಪರವಾನಗಿ ಪಡೆದು ಜಾತ್ರೆ ನಡೆಸಬೇಕು, ಮುನ್ನೆಚ್ಚರಿಕೆಯಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ತಾತ್ಕಾಲಿಕ ಆರೋಗ್ಯ ಕೇಂದ್ರ ತೆರೆಯಬೇಕು, ಜಾತ್ರೆ ಮುಗಿಯುವವರೆಗೆ ಪೊಲೀಸ್ ಬಂದೋಬಸ್ತ್ ಕಲ್ಪಿಸಬೇಕು, ಭಕ್ತರ ಅನುಕೂಲಕ್ಕಾಗಿ ಸಾರಿಗೆ ಇಲಾಖೆಯಿಂದ 100ಕ್ಕೂ ಹೆಚ್ಚು ಬಸ್ ಸೌಲಭ್ಯ ಕಲ್ಪಿಸುವಂತೆ ಚರ್ಚಿಸಲಾಯಿತು.

ತಹಶೀಲ್ದಾರ್ ರುಕೀಯಾ ಬೇಗಂ ಮಾತನಾಡಿ, ಜಾತ್ರೆ ನಡೆಸುವ ವಿಚಾರದಲ್ಲಿ ಅರಣ್ಯ ಇಲಾಖೆ ಹಾಗೂ ಸ್ಥಳೀಯರ ನಡುವೆ ಕೆಲ ಗೊಂದಲಗಳಿವೆ. ಜನರು ಅರಣ್ಯ ಸಂರಕ್ಷಣೆಯೊಂದಿಗೆ ಇಲಾಖೆಯ ನಿಯಮಗಳನ್ನು ಪಾಲಿಸಬೇಕಿದೆ. ಅದೇ ರೀತಿ ಅರಣ್ಯಾಧಿಕಾರಿಗಳು ಜನರ ಭಾವನೆಗಳೊಂದಿಗೆ ಆಟವಾಡಬಾರದು. ಜತೆಗೆ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರಬಾರದು ಎಂದು ಸೂಚಿಸಿದರು.

ದಡದಹಳ್ಳಿ ಮಠದ ಶ್ರೀ ಷಡಕ್ಷರಿಸ್ವಾಮೀಜಿ, ವಿರಕ್ತ ಮಠದ ಶ್ರೀ ಮಹದೇವಸ್ವಾಮೀಜಿ, ಮುಜರಾಯಿ ಇಲಾಖೆಯ ತಹಶೀಲ್ದಾರ್ ವಿದ್ಯಾಲತಾ, ಎಸಿಎಫ್ ಪರಮೇಶ್, ಸರ್ಕಲ್ ಇನ್ಸ್‌ಪೆಕ್ಟರ್ ಲಕ್ಷ್ಮೀಕಾಂತ್, ಪಿಎಸ್‌ಐ ನಂದೀಶ್ ಕುಮಾರ್, ಆರೋಗ್ಯಾಧಿಕಾರಿ ಟಿ.ರವಿಕುಮಾರ್, ತಾಪಂ ಇಓ ಸುಷ್ಮಾ, ಪಿಡಬ್ಲ್ಯೂಡಿ ಅಧಿಕಾರಿ ಬೋರಯ್ಯ, ನೀರಾವರಿ ಇಲಾಖಾಧಿಕಾರಿ ಉಷಾ, ಕಾರ್ಯನಿರ್ವಾಹಕಾಧಿಕಾರಿ ರಘು, ಜಾತ್ರಾ ಸಮಿತಿಯ ಅಧ್ಯಕ್ಷ ನಿಂಗರಾಜು, ಮುಖಂಡರಾದ ಶಂಭುಲಿಂಗನಾಯಕ, ಲಿಂಗರಾಜು, ಮಹದೇವಸ್ವಾಮಿ, ಮಹಾದೇವಯ್ಯ, ಗಂಗಾಧರ್, ಪ್ರಕಾಶ್, ಲಿಂಗರಾಜು, ಕೆಂಡಗಣ್ಣಪ್ಪ, ಮಹದೇವಯ್ಯ, ಸಿದ್ದರಾಜು, ನಟರಾಜು, ಪಾರುಪತ್ತೇದಾರ ಮಹದೇವಸ್ವಾಮಿ, ರಾಕೇಶ, ನಾಗೇಂದ್ರ, ಸಂಜಯ್, ಶೇಖರ್, ಬಸವಣ್ಣ, ನಾಗೇಶ ಹಾಜರಿದ್ದರು.



ಸಮೀಕ್ಷೆಯಲ್ಲಿ ಕೈಬಿಟ್ಟು ಹೋಗಿರುವ ಹುಣಸೂರು ನಗರಸಭೆ ಮ್ಯಾನುಯೆಲ್ ಸ್ಕ್ಯಾವೆಂಜರ್‌ಗಳ ಹೆಸರುಗಳನ್ನು ಸೇರಿಸುವಂತೆ ಒತ್ತಾಯಿಸಿ ದಲಿತ ಸಂಘರ್ಷ ಸಮಿತಿಯಿಂದ ಉಪವಿಭಾಗಾಧಿಕಾರಿ ರುಚಿ ಬಿಂದಾಲ್ ಅವರಿಗೆ ಮನವಿ ಸಲ್ಲಿಸಲಾಯಿತು. ದಸಂಸ ಜಿಲ್ಲಾ ಸಂಘಟನಾ ಸಂಚಾಲಕ ಕೋಳಿಗಟ್ಟ ಕೃಷ್ಣ, ನಗರ ಸಂಚಾಲಕ ರಂಗನಾಥ್, ನಗರಸಭೆ ಮಾಜಿ ಅಧ್ಯಕ್ಷ ಲಕ್ಷ್ಮಣ ಇದ್ದರು.

ಇಂದು ಅಯ್ಯಪ್ಪಸ್ವಾಮಿ ಪೂಜೆ

ಕಂಪಲಾಪುರ: ಪಿರಿಯಾಪಟ್ಟಣ ತಾಲೂಕಿನ ಕಂಪಲಾಪುರ ಕೊಪ್ಪಲಿನ ಶ್ರೀ ಅಯ್ಯಪ್ಪಸ್ವಾಮಿ ಭಕ್ತಮಂಡಳಿ ವತಿಯಿಂದ ನ.20ರಂದು ಬೆಳಗ್ಗೆ ಪೂಜಾ ಮಹೋತ್ಸವ ನಡೆಯಲಿದೆ. ಮಧ್ಯಾಹ್ನ 12 ಗಂಟೆಗೆ ಅನ್ನಸಂತರ್ಪಣೆ ನಡೆಯಲಿದೆ ಎಂದು ಭಕ್ತಮಂಡಳಿ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

ತಂಬಾಕು ಹುಡಿ ಮಾರಾಟಕ್ಕೆ ಅನುಮತಿ ನೀಡಿ

ಹುಣಸೂರು: ತಂಬಾಕು ಹುಡಿ ಮಾರಾಟಕ್ಕೆ ತಂಬಾಕು ಮಂಡಳಿ ಅನುಮತಿ ನೀಡಬೇಕು ಎಂದು ರೈತ ಸಂಘದ ಜಿಲ್ಲಾಧ್ಯಕ್ಷ ಹೊಸೂರ್ ಕುಮಾರ್ ಒತ್ತಾಯಿಸಿದ್ದಾರೆ.

ಆಂಧ್ರಪ್ರದೇಶದ ಮಾರುಕಟ್ಟೆಯಲ್ಲಿ 1 ಕೆಜಿಗೆ ತಂಬಾಕಿಗೆ 300 ರೂ. ದೊರೆತಿದ್ದು, ಕರ್ನಾಟಕದ ತಂಬಾಕಿಗೂ 300 ರೂ. ಸಿಗುವ ನಿರೀಕ್ಷೆಯಿತ್ತು. ಆದರೆ, ಈ ಬಾರಿ ಮೊದಲು ಉತ್ತಮ ದರ್ಜೆಯ ತಂಬಾಕಿಗೆ 256 ರೂ.ಗಳಂತೆ ಖರೀದಿಸಿದೆ. ಇದರಿಂದ ಕರ್ನಾಟಕ ತಂಬಾಕು ಬೆಳೆಗಾರರಿಗೆ ನಷ್ಟವಾಗಿದೆ. ಆದ್ದರಿಂದ ಉಳಿದ ತಂಬಾಕಿಗೆ 300 ರೂ. ಬೆಲೆ ಸಿಗುವಂತೆ ಸೂಕ್ತ ಕ್ರಮ ಕೈಗೊಳ್ಳಬೇಕು. ಜತೆಗೆ ತಂಬಾಕು ಹುಡಿ ಮಾರಾಟಕ್ಕೆ ಅನುಮತಿ ನೀಡಬೇಕು. ಇಲ್ಲದಿದ್ದರೆ ರೈತರು ಕಡಿಮೆ ಬೆಲೆಗೆ ವ್ಯಾಪಾರಗಳಿಗೆ ಮಾರಾಟ ಮಾಡುತ್ತಾರೆ.

ಇದನ್ನು ಗಮನಿಸಿ ತಂಬಾಕು ಮಂಡಳಿ ವಾರದಲ್ಲಿ ಒಂದು ದಿನ ಹುಡಿ ಮಾರಾಟಕ್ಕೆ ಅನುಮತಿ ನೀಡಬೇಕು ಎಂದು ತಂಬಾಕು ಮಂಡಳಿಯ ಮೈಸೂರು ವಲಯ ಪ್ರಾದೇಶಿಕ ವ್ಯವಸ್ಥಾಪಕರಿಗೆ ಮನವಿ ಮಾಡಿದ್ದಾರೆ.

ಸಂಘ ಪರಿವಾರದಿಂದ ಸಂವಿಧಾನ ಬುಡಮೇಲು

ದಸಂಸ ಜಿಲ್ಲಾ ಉಪಪ್ರಧಾನ ಸಂಚಾಲಕ ದೊಡ್ಡಸಿದ್ದು ಆರೋಪ



ಹೆಚ್.ಡಿ.ಕೋಟೆ, ನ.19–ಸಂವಿಧಾನದ ಮೂಲ ಆಶಯಗಳನ್ನು ಬುಡಮೇಲು ಮಾಡಲು ಸಂಘ ಪರಿವಾರದಂತಹ ಸಂಘಟನೆಗಳು ದೇಶದಲ್ಲಿ ಪ್ರಯತ್ನಿಸುತ್ತಿವೆ ಎಂದು ದಸಂಸ ಜಿಲ್ಲಾ ಉಪಪ್ರಧಾನ ಸಂಚಾಲಕ ದೊಡ್ಡಸಿದ್ದು ಹಾದನೂರು ಕಳವಳ ವ್ಯಕ್ತಪಡಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದ ಆವರಣದಲ್ಲಿ ಭಾನುವಾರ ನಡೆದ ದಸಂಸ ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಹತ್ತು ವರ್ಷಗಳಿಂದ ಸಂವಿಧಾನ ವಿರೋಧಿ ಕೆಲಸ ಮಾಡುತ್ತಿದೆ. ನಾವು ಅಧಿಕಾರಕ್ಕೆ ಬಂದಿರುವುದೇ ಸಂವಿಧಾನ ಬದಲಾವಣೆ ಮಾಡುವುದಕ್ಕೆ ಎಂದು ಬಿಜೆಪಿ ನಾಯಕರು ಬಹಿರಂಗವಾಗಿ ಹೇಳಿಕೆ ನೀಡುತ್ತಾರೆ. ಇದರ ವಿರುದ್ಧ ಪ್ರತಿಭಟಿಸಿದ ನಂತರ ಸಂವಿಧಾನ ಬದಲಾವಣೆ ಸಾಧ್ಯವಿಲ್ಲ ಎಂದು ಅರಿತು ಈಗ ಸಂವಿಧಾನದ ಆಶಯಗಳನ್ನು ಬುಡಮೇಲು ಮಾಡಲು ಹೊರಟಿದ್ದಾರೆ ಎಂದು ಆರೋಪಿಸಿದರು.

ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದ ದಲಿತರು, ಹಿಂದುಳಿದವರು, ಬಡವರ ಹಕ್ಕುಗಳನ್ನು ಕಿತ್ತುಕೊಳ್ಳುವ ಪ್ರಯತ್ನ ನಡೆಯುತ್ತಿದೆ. ಆರ್‌ಎಸ್‌ಎಸ್ ಹಾಗೂ ಸಂಘ ಪರಿವಾರ ದಲಿತರ, ಹಿಂದುಳಿದವರು, ಬಡವರು, ಶೋಷಿತರ ಮನಸ್ಸಿನಿಂದ ಅಂಬೇಡ್ಕರ್ ಅವರನ್ನು ಹೊರಗೆ ಹಾಕುವ ಕೆಲಸ ಮಾಡುವ ಮೂಲಕ ಸಂವಿಧಾನ ಹಾಗೂ ಪ್ರಜಾಪ್ರಭುತ್ವ ವಿರೋಧಿ ನೀತಿ ಅನುಸರಿಸುತ್ತಿದೆ. ಹಾಗಾಗಿ ಇದನ್ನು ಗಂಭೀರವಾಗಿ ಪರಿಗಣಿಸಬೇಕಾದ ಗುರುತರ ಜವಾಬ್ದಾರಿ ನಮ್ಮ ಮೇಲಿದೆ ಎಂದರು.

ಮಾವಳ್ಳಿ ಶಂಕರ್ ನೇತೃತ್ವದಲ್ಲಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಸಂವಿಧಾನ ರಕ್ಷಣೆ ಹಾಗೂ ಪ್ರಜಾಪ್ರಭುತ್ವ ಉಳಿವಿಗಾಗಿ ಜಿಲ್ಲಾ ಮಟ್ಟದ ಜಾಗೃತಿ ಸಮಾವೇಶಗಳನ್ನು ಹಮ್ಮಿಕೊಳ್ಳಲಾಗಿದೆ. ಅದೇ ರೀತಿ ನ.28ರಂದ ಮೈಸೂರಿನ ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಈ ಕಾರ್ಯಕ್ರಮಕ್ಕೆ ಎಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನ ದಸಂಸ ಮುಖಂಡರು, ಕಾರ್ಯಕರ್ತರು ಹಾಗೂ ಪ್ರಗತಿಪರ ಚಿಂತಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು.

ತಾಲೂಕು ಸಂಚಾಲಕ ಸಣ್ಣಕುಮಾರ್, ಜಿಲ್ಲಾ ಸಮಿತಿ ಸದಸ್ಯ ರಾಜು ಆನಗಟ್ಟಿ, ತಾಲೂಕು ಸಂಘಟನಾ ಸಂಚಾಲಕರಾದ ಮಹೇಶ್ ಮಟಕೆರೆ, ರವಿ ಜಿ.ಜಿ.ಕಾಲೋನಿ, ಕಾಳಪ್ಪಾಜಿ ಬೋಗೇಶ್ವರ ಕಾಲೋನಿ, ಸಮಿಉಲ್ಲಾ, ಮಂಜು ಬೆಳ್ತೂರು, ಮಹೇಶ್ ಕೂಲ್ಯ, ಕುಮಾರ್ ಹೈರಿಗೆ, ದೊರೆಸ್ವಾಮಿ ಕೋಟೆ, ರವಿ ಹೊಸಹಳ್ಳಿ, ಮಹೇಶ, ಮಂಜ, ರಾಜೇಗೌಡನಹುಂಡಿ ಸಿದ್ದರಾಜು ಇದ್ದರು.

ವರ್ಷವಾದರೂ ಸಿಗದ ಪರಿಹಾರ



ಪಿರಿಯಾಪಟ್ಟಣ: ತಂಬಾಕು ಬ್ಯಾರನ್ ಕುಸಿದು ಒಂದು ವರ್ಷ ಕಳೆದರೂ ತಂಬಾಕು ಮಂಡಳಿ ಅಧಿಕಾರಿಗಳು ಹಾಗೂ ವಿಮೆ ಕಂಪನಿಯ ನಿರ್ಲಕ್ಷ್ಯ ಧೋರಣೆಯಿಂದ ಯಾವುದೇ ಪರಿಹಾರ ಸಿಗದೇ ರೈತನೋರ್ವ ಕಂಗಾಲಾಗಿದ್ದಾರೆ.

ತಾಲೂಕಿನ ಅಂಬಲಾರೆ ಗ್ರಾಮದ ರೈತ ತಿಮ್ಮೇಗೌಡ ಪರಿಹಾರ ಸಿಗದೆ ಸಂಕಷ್ಟ ಸ್ಥಿತಿಯಲ್ಲಿದ್ದಾರೆ. ಈತ ಸುಮಾರು 30 ವರ್ಷದಿಂದ ತಂಬಾಕು ಬೆಳೆಯುತ್ತಿದ್ದು, 2022ರ ಆ.28ರಂದು ಮಳೆಯಿಂದ ಬ್ಯಾರನ್ ಕುಸಿದಿದೆ. ಪರಿಹಾರಕ್ಕಾಗಿ ತಂಬಾಕು ಮಂಡಳಿಯ ಅಧೀಕ್ಷಕರಿಗೆ ಮನವಿ ಸಲ್ಲಿಸಿದ್ದರು. ಆದರೆ, ಇಂದಿಗೂ ಪರಿಹಾರ ನೀಡಿಲ್ಲ.

ಪ್ರತಿವರ್ಷ ತಂಬಾಕು ಹರಾಜು ಮಾರುಕಟ್ಟೆಯಿಂದ ರೈತರಿಂದ ವಿಮೆ ರೂಪದಲ್ಲಿ ಇಂತಿಷ್ಟು ಶುಲ್ಕವನ್ನು ವಸೂಲಿ ಮಾಡಲಾಗುತ್ತಿದೆ. ವಿಮೆ ಕಂಪನಿಗೂ ಮನವಿ ಸಲ್ಲಿಸಲಾಗಿದೆ. ಆದರೆ, ನಷ್ಟಕ್ಕೆ ಯಾವುದೇ ಹಾಗೂ ಬ್ಯಾರನ್ ಪರವಾನಗಿ ನವೀಕರಣ ಆಗದೆ ಬೆಳೆದ ಹೊಗೆಸೊಪ್ಪನ್ನು ಮಾರಾಟ ಮಾಡಲ್ಲಾಗದೆ ರೈತ ತಿಮ್ಮೇಗೌಡ ಕಂಗಾಲಾಗಿದ್ದಾರೆ. ಈತ ಈಗಾಗಲೇ ಕೆನರಾ ಬ್ಯಾಂಕ್‌ನಿಂದ ಎಂಟು ಲಕ್ಷ ರೂ. ಸೇರಿ ಒಟ್ಟು ಹತ್ತು ಲಕ್ಷ ರೂ. ಸಾಲ ಮಾಡಿದ್ದಾರೆ. ಆದ್ದರಿಂದ ತಂಬಾಕು ಮಂಡಳಿ ಹಾಗೂ ವಿಮೆ ಅಧಿಕಾರಿಗಳ ಶೀಘ್ರವಾಗಿ ಸೂಕ್ತ ಪರಿಹಾರ ನೀಡುವಂತೆ ಆಗ್ರಹಿಸಿದ್ದಾರೆ.

ಗೀತಾ ನಿಧನ



ಸರಗೂರು: ಪಟ್ಟಣದ 10ನೇ ವಾರ್ಡ್‌ನ ನಿವಾಸಿ ಹಾಗೂ ತೊಗಟವೀರ ಸಮಾಜದ ಮಾಜಿ ಪ್ರಧಾನ ಕಾರ್ಯದರ್ಶಿ ಎಸ್.ವಿ. ಗೋಪಾಲಕೃಷ್ಣ ಅವರ ಪತ್ನಿ ಗೀತಾ (45) ಅನಾರೋಗ್ಯದಿಂದ ಶನಿವಾರ ನಿಧನರಾದರು.

ಮೃತರು ಪತಿ, ಪುತ್ರಿ ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ. ಪಟ್ಟಣದ ತೊಗಟವೀರ ಸಮಾಜದ ರುದ್ರಭೂಮಿಯಲ್ಲಿ ಭಾನುವಾರ ಅಂತ್ಯಕ್ರಿಯೆ ನಡೆಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶಿಕ್ಷಣ ಸಂಗ್ರಹಶೀಲವಾಗದೇ ಸೃಜನಶೀಲವಾಗಿರಬೇಕು

ಹಿರಿಯ ಸಾಹಿತಿ ಸಿಪಿಕೆ ಅಭಿಮತ



ಮೈಸೂರು, ನ.19(ಎಸ್‌ಪಿಎನ್)– ಪ್ರತಿಯೊಬ್ಬ ವಿದ್ಯಾರ್ಥಿ ಮತ್ತು ಅಧ್ಯಾಪಕನೂ ತಪಸ್ವಿ ಆಗಬೇಕು ಎಂದು ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣ ಕುಮಾರ್(ಸಿಪಿಕೆ) ಅಭಿಪ್ರಾಯಪಟ್ಟರು.

ಮೈಸೂರು ಜಯಲಕ್ಷ್ಮೀಪುರಂನಲ್ಲಿರುವ ಸ್ವಾಮಿ ವಿವೇಕಾನಂದ ಪಿಯು ಕಾಲೇಜಿನ ಕುವೆಂಪು ರಂಗಮಂದಿರದಲ್ಲಿ ಅದಮ್ಯ ರಂಗಶಾಲೆಯ ವತಿಯಿಂದ ಆಯೋಜಿಸಿದ್ದ ಕುವೆಂಪು ಶಿಕ್ಷಣ ಚೇತನ ಪ್ರಶಸ್ತಿ ಪ್ರಧಾನ ಹಾಗೂ ಮಕ್ಕಳ ನಾಟಕ ಪ್ರದರ್ಶನವನ್ನು ನಗಾರಿ ಬಾರಿಸಿ ಉದ್ಘಾಟಿಸಿದರು.

ಶಿಕ್ಷಣ ಉತ್ಪತ್ತಿಶೀಲ ಮತ್ತು ಸಂಗ್ರಹಶೀಲವಾಗಿರಬಾರದು. ಬದಲಿಗೆ ಸೃಜನಶೀಲವಾಗಿರಬೇಕು. ಆದ್ದರಿಂದ ವಿವಿ ಪ್ರಾಧ್ಯಾಪಕರು ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ ಜೊತೆಗೆ ವಿಶ್ವಪ್ರಜ್ಞೆಯನ್ನೂ ಬೆಳೆಸಬೇಕು. ಅಧ್ಯಾಪಕ ಕಡೆಯವರೆಗೂ ವಿದ್ಯಾರ್ಥಿಯೇ. ಅಧ್ಯಾಪಕರು ವಿದ್ಯಾರ್ಥಿಗಳಿಗೆ ಬೋಧಿಸುವ ಎಲ್ಲಾ ವಿಚಾರಗಳನ್ನು ಸ್ವತಃ ತಮಗೆ ಅನ್ವಯಿಸಿಕೊಳ್ಳಬೇಕು. ಆತ್ಮಶ್ರೀಯನ್ನು ಉದ್ದೀಪನಗೊಳಿಸುವ, ವೃದ್ಧಿಸುವ ರೀತಿಯಲ್ಲಿ ನಡೆದುಕೊಳ್ಳಬೇಕು ಎಂದು ಅಧ್ಯಾಪಕರಿಗೆ ಸಲಹೆ ನೀಡಿದರು.

ನಮ್ಮಲ್ಲಿ ಸಮನ್ವಯ ದೃಷ್ಟಿ ಇರಬೇಕು. ಅದಕ್ಕಾಗಿ ವಿಜ್ಞಾನ ಮತ್ತು ಕಲೆ ನಮ್ಮ ಕಣ್ಣುಗಳಾಗಿರಬೇಕು. ವಿಜ್ಞಾನ ಲೌಕಿಕ ಅಭ್ಯುದಯದ ಸಾಧನವಾದರೆ, ಕಲೆ ಶ್ರೇಯಸ್ಸಿನ ಸಾಧನ. ವಿಜ್ಞಾನದ ವಿದ್ಯಾರ್ಥಿಗಳು ಕಲೆಯನ್ನೂ, ಕಲಾ ವಿದ್ಯಾರ್ಥಿಗಳು ವಿಜ್ಞಾನವನ್ನು ಅಧ್ಯಯನ ನಡೆಸಬೇಕು. ಅಂತಹ ಸಮನ್ವಯತೆ ವಿದ್ಯಾರ್ಥಿಗಳಲ್ಲಿ ಅಗತ್ಯವಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ನಿರ್ದೇಶಕ ಪ್ರೊ. ನಂಜಯ್ಯ ಹೊಂಗನೂರು ಮಾತನಾಡಿ, ಅಲಕ್ಷಿತ ಸಮುದಾಯದ ಪ್ರತಿಭೆಗಳನ್ನು ಗುರುತಿಸಿ, ಪ್ರೋತ್ಸಾಹಿಸುವ ಕೆಲಸವನ್ನು ಸಂಘ–ಸಂಸ್ಥೆಗಳು ಮಾಡಬೇಕು. ಮಕ್ಕಳಲ್ಲಿ ರಂಗಭೂಮಿಯ ಬಗ್ಗೆ ಜಾಗೃತಿ ಮೂಡಿಸಿ, ಅವರ ಪ್ರತಿಭೆಗೆ ವೇದಿಕೆ ಕಲ್ಪಿಸುವ ಅದಮ್ಯ ರಂಗಶಾಲೆಯ ಕ್ರಿಯಾಶೀಲ ಕಾರ್ಯಕ್ಕೆ ಜನಮನ್ನಣೆ ಸಿಗಬೇಕು ಎಂದರು.

ಅದಮ್ಯ ರಂಗಶಾಲೆಯ ಕಾರ್ಯದರ್ಶಿ ಟಿ. ಸತೀಶ್ ಜವರೇಗೌಡ ಆಶಯ ನುಡಿಗಳನ್ನಾಡಿದರು. ಮುಖ್ಯ ಅತಿಥಿಯಾಗಿ ದಿ ನೆಸ್ಟ್ ಟ್ರಸ್ಟಿನ ಅಧ್ಯಕ್ಷ ಲಯನ್ ಡಿ.ಎಸ್. ಸತೀಶ್ ಮಾತನಾಡಿದರು. ಅದಮ್ಯ ರಂಗಶಾಲೆಯ ಸಂಸ್ಥಾಪಕ ಕಾರ್ಯದರ್ಶಿ ಚಂದ್ರು ಮಂಡ್ಯ, ಯುವ ಕವಿಗಳಾದ ಟಿ. ಲೋಕೇಶ್ ಹುಣಸೂರು, ಡಾ.ಬಿ. ಬಸವರಾಜು, ಎನ. ನವೀನ್ ಕುಮಾರ್, ಸಿ.ಎಸ್. ರಾಘವೇಂದ್ರ, ಉಪನ್ಯಾಸಕಿ ಎಂ.ಆರ್. ಸಹನಾ ಉಪಸ್ಥಿತರಿದ್ದರು.

ಮೈಸೂರಿನ ಬಿಜಿಎಸ್ ಶಿಕ್ಷಣ ಸಂಸ್ಥೆಗಳ ಆಡಳಿತಾಧಿಕಾರಿ ಡಾ.ಆರ್.ಎಸ್. ನರಸೇಗೌಡ, ಮಹಾರಾಜ ಸ.ಪ. ಪೂ. ಕಾಲೇಜಿನ ಪ್ರಾಂಶುಪಾಲ ಎನ್. ಉದಯಶಂಕರ್, ಹಾಸನದ ಬಾಲಕಿಯರ ಸ.ಪಪೂ. ಕಾಲೇಜಿನ ಪ್ರಾಂಶುಪಾಲೆ ಜಿ.ಟಿ. ಅನ್ನಪೂರ್ಣ, ಹುಣಸೂರಿನ ಬಾಲಕಿಯರ ಸ.ಪ.ಪೂ. ಕಾಲೇಜಿನ ಪ್ರಾಂಶುಪಾಲ ಎ. ರಾಮೇಗೌಡ, ನಂಜನಗೂಡಿನ ಬಾಲಕರ ಸ.ಪ.ಪೂ. ಕಾಲೇಜಿನ ಕನ್ನಡ ಉಪನ್ಯಾಸಕಿ ಡಾ.ಕೆ. ಮಾಲತಿ, ಮಂಡ್ಯ ತಾಲ್ಲೂಕಿನ ಬಸರಾಳು ಗ್ರಾಮದ ಸ.ಪ.ಪೂ. ಕಾಲೇಜಿನ ಲೋಕೇಶ ಬೆಕ್ಕಳಲೆ, ಮೈಸೂರಿನ ಸದ್ವಿದ್ಯಾ ಸಂಯುಕ್ತ ಪ.ಪೂ. ಕಾಲೇಜಿನ ಕನ್ನಡ ಉಪನ್ಯಾಸಕ ಕೃಪಾ. ಮಂಜುನಾಥ್, ಗೋಪಾಲಸ್ವಾಮಿ ಪ.ಪೂ. ಕಾಲೇಜಿನ ಕನ್ನಡ ಉಪನ್ಯಾಸಕ ಜಿ.ಆರ್. ಶ್ರೀವತ್ಸ ಅವರಿಗೆ 'ಕುವೆಂಪು ಶಿಕ್ಷಣ ಚೇತನ ಪ್ರಶಸ್ತಿ' ಪ್ರಧಾನ ಮಾಡಲಾಯಿತು. ನಂತರ ಅದಮ್ಯ ರಂಗಶಾಲೆಯ ಮಕ್ಕಳಿಂದ ಕೃಷ್ಣಮೂರ್ತಿ ಬಿಳಿಗೆರೆ ರಚನೆಯ 'ಹುಯ್ಯೋ ಹುಯ್ಯೋ ಮಳೆರಾಯ' ನಾಟಕ ಪ್ರದರ್ಶಿಸಿ ಪ್ರೇಕ್ಷಕರಿಂದ ಚಪ್ಪಾಳೆ ಗಿಟ್ಟಿಸಿದರು.

ಇಂದು, ನಾಳೆ ಕೆ.ಜಿ.ಕೊಪ್ಪಲು ಮಾರಮ್ಮ ದೇವಾಲಯದ ಕುಂಭಾಭಿಷೇಕ

ಮೈಸೂರು, ನ.19(ಎಸ್‌ಬಿಡಿ)– ಮೈಸೂರಿನ ಕನ್ನೇಗೌಡನ ಕೊಪ್ಪಲು(ಕೆಜಿ ಕೊಪ್ಪಲು) ಶ್ರೀ ಮಾರಮ್ಮ ದೇವಾಲಯದ 16ನೇ ವಾರ್ಷಿಕ ಕುಂಭಾಭಿಷೇಕ ಮಹೋತ್ಸವ ನ.20 ಹಾಗೂ 21ರಂದು ನೆರವೇರಲಿದೆ.



ನ.20ರ ಸಂಜೆ ಗೋಧೂಳಿ ಲಗ್ನದಲ್ಲಿ ಅನುಜ್ಞೆ, ಅಗ್ರತೀರ್ಥ ಸಂಗ್ರಹ ಸಮೇತ ಯಾಗಶಾಲೆ ಪ್ರವೇಶ, ಪ್ರವೇಶ ಬಲಿ, ಗಣಪತಿ ಪೂಜಾಪೂರ್ವಕ ಪುಣ್ಯಾಹ, ಪಂಚಗವ್ಯ ಸಾಧನ, ಪ್ರೋಕ್ಷಣೆ, ವಾಸ್ತು ಪೂಜೆ, ಗಣ ಹೋಮ, ನವಗ್ರಹ ಮೃತ್ಯುಂಜಯ ಪೂಜೆ ಹೋಮ, ಪೂರ್ಣಾಹುತಿ ಜರುಗಲಿದೆ.

ನ.21ರಂದು ಪ್ರಾತಃ ಪುಣ್ಯಾಹ, ಪ್ರಧಾನ ಕಳಸ ಸ್ಥಾಪನೆ, ಪೂಜೆ ಹಾಗೂ ದುರ್ಗಾ ಹೋಮ, ಪೂರ್ಣಾಹುತಿ, ಕಳಾಹೋಮ, ಬೆಳಗ್ಗೆ 9 ಗಂಟೆಗೆ ಕುಂಭಾಭಿಷೇಕ, ಅಲಂಕಾರ, ಮಹಾನೈವೇದ್ಯ, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ, ತೀರ್ಥ ಪ್ರಸಾದದ ಬಳಿಕ ಅನ್ನ ಸಂತರ್ಪಣೆ ಇರಲಿದೆ.

ಆದಿಚುಂಚನಗಿರಿ ಮಠದ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಸಂಸ್ಥಾಪಕರಾದ ಶ್ರೀ ಚಂದ್ರಶೇಖರಸ್ವಾಮೀಜಿ, ಸ್ಫಟಿಕಪುರಿ ಮಹಾಸಂಸ್ಥಾನದ ಶ್ರೀ ನಂಜಾವಧೂತ ಸ್ವಾಮೀಜಿ, ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ಮಹಾರಾಜ ಸರ್ಕಾರಿ ಸಂಸ್ಕೃತ ಪಾಠಶಾಲೆ ನಿವೃತ್ತ ಪ್ರಾಧ್ಯಾಪಕ ಪ್ರೊ.ಎಂ.ಮಲ್ಲಣ್ಣ ನೇತೃತ್ವ ಹಾಗೂ ವೇದ ವಿದ್ವಾಂಸರ ಸಹಯೋಗದಲ್ಲಿ ಕುಂಭಾಭಿಷೇಕ ನೆರವೇರಲಿದೆ.

ಸಂಸದ ಪ್ರತಾಪ್ ಸಿಂಹ, ಶಾಸಕರಾದ ಜಿ.ಟಿ.ದೇವೇಗೌಡರು, ಕೆ.ಹರೀಶ್ ಗೌಡ, ಜಿ.ಡಿ.ಹರೀಶ್ ಗೌಡ, ಶ್ರೀವತ್ಸ, ಮಾಜಿ ಶಾಸಕ ಎಲ್.ನಾಗೇಂದ್ರ, ಮಾಜಿ ಕಾರ್ಪೊರೇಟರ್‌ಗಳಾದ ಎಂ.ಶಿವಕುಮಾರ್, ಸೌಮ್ಯ ಉಮೇಶ್ ಸೇರಿದಂತೆ ಹಲವು ಮುಖಂಡರು ಭಾಗವಹಿಸಲಿದ್ದಾರೆ. ಕನ್ನೇಗೌಡನ ಕೊಪ್ಪಲು, ಜಯನಗರ ಚಿನ್ನಗಿರಿಕೊಪ್ಪಲು ಗರಡಿ ಗ್ರಾಮದ ಎಲ್ಲಾ ಯಜಮಾನರು, ಯುವಕರು, ಎಲ್ಲಾ ಸಂಘ ಸಂಸ್ಥೆಗಳ ಅಧ್ಯಕ್ಷರು, ಸದಸ್ಯರು, ಮಹಿಳಾ ಸಂಘದವರು, ಭಕ್ತಾದಿಗಳು ಸಹಕಾರ ನೀಡಿದ್ದಾರೆ ಎಂದು ಕನ್ನೇಗೌಡನ ಕೊಪ್ಪಲಿನ ಶ್ರೀ ಮಾರಮ್ಮ ಟ್ರಸ್ಟ್ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನಾಡಿನ ಸರ್ವತೋಮುಖ ಅಭಿವೃದ್ಧಿ ಬಗ್ಗೆ ಆಡಳಿತ ವ್ಯವಸ್ಥೆಯಲ್ಲಿ ಇಚ್ಛಾಶಕ್ತಿ ಕೊರತೆ

ಸಾಹಿತಿ ಬನ್ನೂರು ಕೆ.ರಾಜು ವಿಷಾಧ



ಮೈಸೂರು, ನ19(ಎಸ್‌ಬಿಡಿ)– ಸಂಸ್ಕೃತಿ, ಪರಂಪರೆ, ಸಂಪನ್ಮೂಲ ರಕ್ಷಣೆಯೊಂದಿಗೆ ನಾಡಿನ ಸರ್ವತೋಮುಖ ಅಭಿವೃದ್ಧಿ ಬಗ್ಗೆ ಆಡಳಿತ ವ್ಯವಸ್ಥೆಯಲ್ಲಿ ಇಚ್ಛಾಶಕ್ತಿ ಕೊರತೆ ಇದೆ ಎಂದು ಸಾಹಿತಿ ಬನ್ನೂರು ಕೆ.ರಾಜು ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ವಿಶ್ವೇಶ್ವರನಗರದಲ್ಲಿ ಜೈಭೀಮ್ ಕನ್ನಡ ಯುವಕರ ಸಂಘದ ವತಿಯಿಂದ ಭಾನುವಾರ ಏರ್ಪಡಿಸಿದ್ದ 68ನೇ ಕನ್ನಡ ರಾಜ್ಯೋತ್ಸವ, ಸುವರ್ಣ ಕರ್ನಾಟಕ ಮಹೋತ್ಸವ ಹಾಗೂ ನೂತನ ಧ್ವಜಸ್ತಂಭ ಅನಾವರಣ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ನಮ್ಮ ನುಡಿ, ನೆಲ, ಜಲ, ಕಲೆ, ಸಾಹಿತ್ಯ, ಸಂಸ್ಕೃತಿ, ಪರಂಪರೆ ಉಳಿಸುವ ಇಚ್ಛಾಶಕ್ತಿ ನಮ್ಮನ್ನಾಳುವ ಸರ್ಕಾರಗಳಿಗಿಲ್ಲ. ಪರಿಣಾಮ ಅಗಾದವಾದ ಸಂಪನ್ಮೂಲವಿದ್ದರೂ ಕನ್ನಡಕ್ಕೆ ಹಿನ್ನಡೆಯಾಗುತ್ತಿದೆ ಎಂದರು.

ಯಾವುದೇ ರಾಜ್ಯದ ಪ್ರಗತಿ ಅಲ್ಲಿನ ಸರ್ಕಾರದ ನೀತಿ, ನಿಯಮಾವಳಿ, ಬದ್ಧತೆ, ಸಿದ್ಧತೆ, ಅನುಷ್ಠಾನವನ್ನು ಅವಲಂಬಿಸಿದೆ. ಸರ್ಕಾರ ಸಮರ್ಥವಾಗಿ ಆಡಳಿತ ನಿಭಾಯಿಸಿದರೆ ರಾಜ್ಯ ಸುಭಿಕ್ಷವಾಗಿರುತ್ತದೆ. ಕರ್ನಾಟಕದ ಇತಿಹಾಸದಲ್ಲಿ ಈವರೆಗೆ ಯಾವ ಸರ್ಕಾರಗಳೂ ಕೂಡ ನಾಡು–ನುಡಿಯ ಬಗ್ಗೆ ಪ್ರಾಮಾಣಿಕ ಕಾಳಜಿ, ಬದ್ಧತೆ ತೋರಿಲ್ಲ. ಪರಿಣಾಮವಾಗಿ ಸರೋಜಿನಿ ಮಹಿಷಿ ವರದಿ, ಮಹಾಜನ್ ವರದಿ ಒಳಗೊಂಡಂತೆ ಯಾವ ವರದಿಗಳು, ಮೇಕೆದಾಟು ಸೇರಿದಂತೆ ಯಾವ ರಾಜ್ಯಪರ ಯೋಜನೆಗಳೂ ಅನುಷ್ಠಾನವಾಗಿಲ್ಲ ಎಂದು ವಿಷಾಧಿಸಿದರು.

ವರನಟ ಡಾ.ರಾಜ್ ಕುಮಾರ್, ಡಾ. ಪಾಟೀಲ ಪುಟ್ಟಪ್ಪ ಅವರಂತಹ ದಿಗ್ಗಜರ ನೇತೃತ್ವದಲ್ಲಿ ಗೋಕಾಕ್ ಚಳವಳಿ ನಡೆದರೂ ಕೂಡ ಪೂರ್ಣ ಪ್ರಮಾಣದಲ್ಲಿ ವರದಿ ಜಾರಿಗೊಳಿಸಲಾಗಿಲ್ಲ. ಕಾವೇರಿ, ಕೃಷ್ಣಾ ನದಿ ಸಮಸ್ಯೆಗಳು ಬಗೆಹರಿದಿಲ್ಲ. ಕರ್ನಾಟಕ ಹಾಗೂ ತಮಿಳುನಾಡು ನಡುವಿನ ಕಾವೇರಿ ನದಿ ವಿವಾದ ಶಾಶ್ವತವಾಗಿ ಉಳಿದುಬಿಟ್ಟಿದೆ. ಬಂಗಾರಪ್ಪ ಅವರನ್ನು ಹೊರತುಪಡಿಸಿ ಮುಖ್ಯಮಂತ್ರಿಯಾಗಿದ್ದವರೆಲ್ಲಾ ತಮಿಳುನಾಡಿಗೆ ನೀರು ಬಿಟ್ಟಿದ್ದಾರೆ. ಆಳುವವರ ಬೇಜವಾಬ್ದಾರಿಯಿಂದ ಕರ್ನಾಟಕ ಹಾಗೂ ಕನ್ನಡಿಗರಿಗೆ ಅನ್ಯಾಯವಾಗಿದೆ ಎಂದು ಹೇಳಿದರು.

ಬಳಸಿದರೆ ಸಾಕು: 'ಕನ್ನಡ ಉಳಿಸಿ, ಕನ್ನಡ ಬೆಳೆಸಿ' ಘೋಷಣೆಗಿಂತ ಕನ್ನಡ ಬಳಸಬೇಕು. ಕನ್ನಡವನ್ನು ಯಾರೂ ಬೆಳೆಸುವ ಅಗತ್ಯವಿಲ್ಲ. ನಮ್ಮ ಭಾಷೆ ಸ್ವಸಾಮರ್ಥ್ಯ ದಿಂದ ಸಾಕಷ್ಟು ಬೆಳೆದಿದೆ. ಕನ್ನಡಕ್ಕೆ ಆ ರೀತಿಯ ಶಕ್ತಿ ಇದೆ. ಹಾಗಾಗಿ ಎಲ್ಲೆಡೆ ಕನ್ನಡವನ್ನು ಬಳಸುವ ಮೂಲಕ ಕರ್ನಾಟಕವನ್ನು ಮತ್ತಷ್ಟು ಬಲಿಷ್ಠಗೊಳಿಸಬೇಕು ಎಂದು ಅವರು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಜೈಭೀಮ್ ಕನ್ನಡ ಯುವಕರ ಸಂಘದ ಸಂಚಾಲಕರೂ ಆದ ಕಾಂಗ್ರೆಸ್ ಮಾಧ್ಯಮ ವಕ್ತಾರ ಕೆ.ಮಹೇಶ್, ಬಿಜೆಪಿ ಕೆ.ಆರ್ ಕ್ಷೇತ್ರ ಎಸ್ಸಿ ಮೋರ್ಚಾದ ಅಧ್ಯಕ್ಷ ಎಸ್.ಡಿ.ಮುರಳೀಧರ್, ಕಾಂಗ್ರೆಸ್ ಮುಖಂಡರಾದ ಎಂ.ಜೆ. ರವೀಂದ್ರ, ವಿಜಿಕುಮಾರ್, ನವೀನ್, ಸಂಘದ ಸದಸ್ಯರಾದ ಸಂದೀಪ್, ನಿತ್ಯಾನಂದ, ಧನುಷ್, ಸಂಜು, ಗಂಗಾಧರ್, ಶಾಂತಕುಮಾರ್, ಅಭಿಷೇಕ್, ಅಪ್ಪಿ, ರಾಜು, ಹಿತೇಶ್, ಯದುನಂದನ್ ಮತ್ತಿತರರು ಉಪಸ್ಥಿತರಿದ್ದರು.

ಧನಸಹಾಯ ನೀಡಲು ಅರ್ಜಿ ಆಹ್ವಾನ

ಮೈಸೂರು, ನ.19– ರಾಜ್ಯಾದ್ಯಂತ ಹಾಗೂ ಹೊರ ರಾಜ್ಯಗಳಲ್ಲಿ ಕ್ರಿಯಾತ್ಮಕ ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ನಾಡಿನ ಭಾಷಾ ಸಂವರ್ಧನೆ, ಕಲೆ, ಸಾಹಿತ್ಯ, ಜಾನಪದ, ನೃತ್ಯ, ಕಲಾ ಪ್ರಕಾರಗಳನ್ನು ಉಳಿಸಿ ಬೆಳೆಸುವ ಸಲುವಾಗಿ ಕಾರ್ಯನಿರ್ವಹಿಸುತ್ತಿರುವ ನೋಂದಾಯಿತ ಸಂಘ–ಸಂಸ್ಥೆಗಳನ್ನು ಪ್ರೋತ್ಸಾಹಿಸಲು 2023–24ನೇ ಸಾಲಿನ ಸಾಮಾನ್ಯ ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆಯಡಿ ಸಂಸ್ಥೆಗಳಿಗೆ ಧನಸಹಾಯ ನೀಡಲು ಸೇವಾ ಸಿಂಧು www.sevasindhu.karnataka.gov.in ಮುಖಾಂತರ ನವೆಂಬರ್ 14 ರಿಂದ ಡಿಸೆಂಬರ್ 13 ರವರೆಗೆ ಕಾಲಾವಕಾಶ ನೀಡಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ನಿಗದಿತ ದಿನಾಂಕದ ನಂತರ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಅರ್ಜಿಗಳನ್ನು ನೇರವಾಗಿ ಇಲಾಖೆಯಲ್ಲಿ ಸ್ವೀಕರಿಸುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ 08022279954/9986837037/8792662814/8792662816/08022213530 ಅನ್ನು ಹಾಗೂ ಸೇವಾ ಸಿಂಧು ವ್ಯವಸ್ಥಾಪಕ ರನ್ನು ಸಂಪರ್ಕಿಸಬಹುದಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬುಡಕಟ್ಟು ಯುವಜನತೆಗೆ ಕೌಶಲ್ಯಾವೃದ್ಧಿ ತರಬೇತಿ

ಮೈಸೂರು, ನ. 19– ಮೈಸೂರಿನಲ್ಲಿ ಟೈಟಾನ್ ಲಿಮಿಟೆಡ್ ಕಂಪನಿ, ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ (ಎಸ್‌ವೈಎಂ) ಸಹಯೋಗದಲ್ಲಿ ಜೇನು ಕುರುಬರು, ಕಾಡು ಕುರುಬರು, ಸೋಲಿಗರಿಗೆ ಕೌಶಲ್ಯಾಭಿವೃದ್ಧಿ ತರಬೇತಿ ನೀಡುವ ಮೂಲಕ ಟೈಟಾನ್ ವಿವೇಕ ಟ್ರೈಬಲ್ ಸೆಂಟರ್ ಫಾರ್ ಲರ್ನಿಂಗ್ (ವಿಟಿಸಿಎಲ್) ಅನ್ನು ಯಶಸ್ವಿಯಾಗಿ ಮುನ್ನಡೆಸುತ್ತಿದೆ.

ಈ ಕೇಂದ್ರವು 2012ರಲ್ಲಿ ಆರಂಭದಿಂದ 1500ಕ್ಕೂ ಹೆಚ್ಚು ಯುವ ಜನತೆಯನ್ನು ಸುಶಿಕ್ಷಿತರನ್ನಾಗಿ ಮಾಡಿದೆ. ಈ ವರ್ಷವೊಂದರಲ್ಲೇ ಸುಮಾರು 120 ಯುವ ವಯಸ್ಕರು ಜೀವನ ಬದಲಿಸಬಲ್ಲ ತಾಂತ್ರಿಕ ಮತ್ತು ಕೌಶಲ್ಯಗಳನ್ನು ಕಲಿತು ಸಮುದಾಯಕ್ಕೆ ಅರ್ಥಪೂರ್ಣ ಕೊಡುಗೆಗಳನ್ನು ನೀಡುವಂತಹ ಸಾಮರ್ಥ್ಯ ಪಡೆದುಕೊಂಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಇಂದಿನಿಂದ ಕಲಾ ಕಾರ್ಯಾಗಾರ

ಮೈಸೂರು, ನ.19– ನಗರದ ಬನುಮಯ್ಯ ರಸ್ತೆಯಲ್ಲಿರುವ ವೈಜಯಂತಿ ಚಿತ್ರಕಲಾ ಮಹಾ ವಿದ್ಯಾಲಯದಲ್ಲಿ ನ.20ರಿಂದ 29ರವರೆಗೆ ವಾಟರ್ ಕಲರ್ ವರ್ಕ್‌ಶಾಪ್ ಆಯೋಜಿಸಲಾಗಿದೆ. ವಿದ್ಯಾಲಯದ ಮುಖ್ಯಸ್ಥರಾದ ವೈಜಯಂತಿ ಅವರ ನೇತೃತ್ವದಲ್ಲಿ ನಡೆಯಲಿರುವ ಕಾರ್ಯಾಗಾರದಲ್ಲಿ ವಿವಿಧ ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ ಎಂದು ಆಯೋಜಕ ಎಂ.ಎಸ್.ರಾಘವೇಂದ್ರ ತಿಳಿಸಿದ್ದಾರೆ.

ಸಾರಿಗೆ ಅದಾಲತ್‌ನಲ್ಲಿ ಸಾರ್ವಜನಿಕರ ಪ್ರಶ್ನೆಗೆ ತಬ್ಬಿಬ್ಬಾದ ಆರ್‌ಟಿಓ!

ಮೈಸೂರು, ನ.19– ಸಾರಿಗೆ ಅದಾಲತ್‌ನಲ್ಲಿ ಸಾರ್ವಜನಿಕರ ಪ್ರಶ್ನೆಗೆ ಉತ್ತರಿಸಲಾಗದೇ ಪ್ರಾದೇಶಿಕ ಸಾರಿಗೆ ಅಧಿಕಾರಿ ಕುಂಟುನೆಪ ಹೇಳಿ ನುಣುಚಿಕೊಂಡಿದ್ದಾರೆ ಎಂಬ ಆರೋಪ ಕೇಳಿಬಂದಿದೆ.

ಸಾರ್ವಜನಿಕರ ಕುಂದು ಕೊರತೆಯನ್ನು ಆಲಿಸಲು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಯಲ್ಲಿ ಸಾರಿಗೆ ಅದಾಲತ್ ಹಮ್ಮಿಕೊಳ್ಳಲಾಗಿತ್ತು. ಈ ವೇಳೆ ಸಾರ್ವಜನಿಕರು ತಮ್ಮ ಅಹವಾಲು ಸಲ್ಲಿಸಲು ಮುಂದಾದಾಗ ಪ್ರಾದೇಶಿಕ ಸಾರಿಗೆ ಅಧಿಕಾರಿ ದೇವಿಕಾ, ಇದು ಸಾರಿಗೆ ಅದಾಲತ್ ಅಲ್ಲ, ಆಟೋ ರಿಕ್ಷಾ ಯೂನಿಯನ್ ಅವರೊಂದಿಗೆ ಮಾತನಾಡುತ್ತಿದ್ದೇನೆ ಎಂದಿದ್ದಾರೆ. ಈ ಬಗ್ಗೆ ಸಾರ್ವಜನಿಕರು ಪ್ರಶ್ನಿಸಿದಾಗ ತನಗೆ ಬೇರೊಂದು ಮೀಟಿಂಗ್ ಇದೆ ಎಂಬ ನೆಪ ಹೇಳಿ ಅಲ್ಲಿಂದ ಹೊರಟು ಹೋದರು ಎನ್ನಲಾಗಿದೆ.

ಹೌತಿ ಬಂಡುಕೋರರಿಂದ ಭಾರತ ಮೂಲದ ಹಡಗಿನ ಅಪಹರಣ

ನವದೆಹಲಿ: ಟರ್ಕಿಯಿಂದ ಭಾರತಕ್ಕೆ ಹೊರಟಿದ್ದ ಸರಕು ಸಾಗಣೆ ಹಡಗನ್ನು ಯೆಮೆನ್‌ನ ಹೌತಿ ಬಂಡುಕೋರರು ಕೆಂಪು ಸಮುದ್ರದಲ್ಲಿ ಅಪಹರಿಸಿದ್ದಾರೆ ಎಂದು ಇಸ್ರೇಲ್ ಹೇಳಿದೆ.

ಟರ್ಕಿಯಿಂದ ಭಾರತಕ್ಕೆ ಹೊರಟಿದ್ದ ಸರಕು ಸಾಗಣೆ ಹಡಗನ್ನು ಯೆಮೆನ್‌ನ ಹೌತಿ ಬಂಡುಕೋರರು ಕೆಂಪು ಸಮುದ್ರದಲ್ಲಿ ಅಪಹರಿಸಿದ್ದು, ಹಡಗಿನಲ್ಲಿ ವಿವಿಧ ರಾಷ್ಟ್ರಗಳಿಗೆ ಸೇರಿದ ಸುಮಾರು 25 ಸಿಬ್ಬಂದಿ ಇದ್ದಾರೆ. ಇಸ್ರೇಲ್ ಹಡಗನ್ನು ಹೈಜಾಕ್ ಮಾಡಿರುವುದಾಗಿ ಹೌತಿಗಳು ಹೇಳಿದ್ದರು. ಆದರೆ ಹೌತಿಗಳ ಹೇಳಿಕೆಯನ್ನು ನಿರಾಕರಿಸಿರುವ ಇಸ್ರೇಲ್ ಸರ್ಕಾರ, ಅಪಹರಣಕ್ಕೊಳಗಾದ ಗ್ಯಾಲಕ್ಸಿ ಲೀಡರ್ ಹಡಗಿನಲ್ಲಿ ಯಾವುದೇ ಭಾರತೀಯರು ಇಲ್ಲ. ಅಲ್ಲದೆ ಅದು ಇಸ್ರೇಲ್‌ನ ಹಡಗಲ್ಲ ಎಂದು ಸ್ಪಷ್ಟಪಡಿಸಿದೆ.

ಅಪಹರಣವನ್ನು ದೃಢೀಕರಿಸಿದ ಇಸ್ರೇಲಿ ರಕ್ಷಣಾ ಪಡೆಗಳು ಈ ಕುರಿತು ಟ್ವಿಟರ್‌ನಲ್ಲಿ ಮಾಹಿತಿ ನೀಡಿದ್ದು, ದಕ್ಷಿಣ ಕೆಂಪು ಸಮುದ್ರದಲ್ಲಿ ಯೆಮೆನ್ ಬಳಿ ಹೌತಿಗಳು ಸರಕು ಹಡಗನ್ನು ಅಪಹರಿಸಿದ್ದಾರೆ. ಜಾಗತಿಕ ಪರಿಣಾಮದ ಅತ್ಯಂತ ಗಂಭೀರ ಘಟನೆಯಾಗಿದೆ. ಹಡಗು ಭಾರತಕ್ಕೆ ಟರ್ಕಿಯಿಂದ ಹೊರಟಿತ್ತು. ಹಡಗಿನಲ್ಲಿ ಇಸ್ರೇಲಿಗಳನ್ನು ಒಳಗೊಂಡಂತೆ ವಿವಿಧ ರಾಷ್ಟ್ರಗಳ ನಾಗರಿಕ ಸಿಬ್ಬಂದಿ ಇದ್ದಾರೆ. ಆದರೆ ಈ ಹಡುಗು ಇಸ್ರೇಲ್‌ಗೆ ಸೇರಿದ್ದಲ್ಲ ಎಂದು ಹೇಳಿದೆ.

ಹೌತಿಗಳು ಅಪಹರಿಸಿರುವ ಹಡಗು ಇಸ್ರೇಲ್‌ಗೆ ಸೇರಿದ್ದಲ್ಲ. ಬ್ರಿಟಿಷ್ ಕಂಪನಿಯ ಒಡೆತನದ ಮತ್ತು ಜಪಾನ್ ಸಂಸ್ಥೆಯು ನಿರ್ವಹಣೆ ಮಾಡುತ್ತಿರುವ ಹಡಗನ್ನು ಯೆಮೆನ್ ಹೌತಿ ಬಂಡುಕೋರರು ಇರಾನ್ ಮಾರ್ಗದರ್ಶನದಲ್ಲಿ ಅಪಹರಿಸಿದ್ದಾರೆ. ಇರಾನ್ ಮುಂದೆ ನಿಂತು ಅಂತಾರಾಷ್ಟ್ರೀಯ ಹಡಗು ಅಪರಹರಣಕ್ಕೆ ಸಹಕರಿಸಿರುವುದು ಖಂಡನಾರ್ಹವಾಗಿದೆ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಕಾರ್ಯಾಲಯವು ಟ್ವೀಟ್ ಮಾಡಿದೆ.

ಸಾರ್ವಜನಿಕ ಪ್ರಕಟಣೆ

ಈ ಮುಖಾಂತರ ಸಾರ್ವಜನಿಕರಿಗೆ ತಿಳಸುವುದೇನೆಂದರೇ ನಮ್ಮ ಕಕ್ಷಿದಾರರು ಇದೇ ಕೆಳಕಂಡ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನುಗಳಿಗೆ ಸಂಬಂಧಪಟ್ಟ ಹಾಗೆ ಅದರ ಹಾಲಿ ಮಾಲೀಕರಾದ ಮೈಸೂರು ಜಿಲ್ಲೆ, ಮೈಸೂರು ತಾಲೂಕು, ಜಯಪುರ ಹೋಬಳಿ, ದಾರಿಪುರ ಗ್ರಾಮದಲ್ಲಿ ವಾಸವಾಗಿರುವ ಶ್ರೀ ಬಸವರಾಜು ರವರ ಧರ್ಮಪತ್ನಿಯಾದ ಸುಮಾರು 47 ವರ್ಷದ ಶ್ರೀಮತಿ. ರಾಜಮ್ಮ ರವರಿಂದ ಖರೀದಿಸುವ ಉದ್ದೇಶದಿಂದ ಸದರಿಯವ ರಿಂದ ಕ್ರಯಪತ್ರವನ್ನು ನೊಂದಾಯಿಸಿಕೊಳ್ಳಲು ತಯಾರಿರುತ್ತೇವೆ. ಆದುದರಿಂದ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತುಗಳ ಸಂಬಂದಪಟ್ಟ ಹಾಗೆ ಬೇರೆ ಯಾರಿಗಾದರು ಯಾವುದೇ ರೀತಿಯಲ್ಲಾದರು ಹಕ್ಕು, ಬಾಧ್ಯತೆ, ಅಧಿಕಾರ, ಆಸಕ್ತಿ ಇದ್ದಲ್ಲಿ ಇಂದಿನಿಂದ 7 ದಿನಗಳ ಕಾಲಾವಧಿಯೊಳಗೆ ಸಂಬಂಧಪಟ್ಟ ಅಸಲಿ ದಾಖಲೆಗಳೊಂದಿಗೆ ಈ ಕೆಳಕಂಡ ವಕೀಲರನ್ನು ಅವರ ಕಛೇರಿಯಲ್ಲಿ (ಸೋಮವಾರದಿಂದ ಶನಿವಾರದೊಳಗೆ) ಸಂಜೆ 6 ರಿಂದ 8 ರೊಳಗೆ ಖುದ್ದಾಗಿ ಭೇಟಿ ಮಾಡತಕ್ಕದ್ದು. ಒಂದು ವೇಳೆ ಆ ರೀತಿಯಾಗಿ ಯಾರು ಭೇಟಿ ಮಾಡದಿದ್ದಲ್ಲಿ ಸದರಿ ಸ್ವತ್ತುಗಳ ಮಾರಾಟ ಸಂಬಂಧಪಟ್ಟ ಹಾಗೆ ಯಾರಿಗೂ ಯಾವುದೇ ರೀತಿಯಾದ ಅಭ್ಯಂತರವಿಲ್ಲವೆಂದು ಪರಿಗಣಿಸಿ ಕ್ರಯಪತ್ರವನ್ನು ನೋಂದಣಿ ಮಾಡಿಕೊಳ್ಳಲಾಗುವುದು. ಒಂದು ವೇಳೆ ಯಾರಾದರೂ ನಿಗಧಿತ ಕಾಲಾವಧಿ ಕಳೆದ ನಂತರ ಈ ಬಗ್ಗೆ ಪ್ರಶ್ನಿಸಿದ್ದಲ್ಲಿ ಅದಕ್ಕೆ ನಮ್ಮ ಕಕ್ಷಿದಾರರು ಯಾವುದೇ ರೀತಿಯಲ್ಲೂ ಹೊಣೆಯಾಗುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ಜಿಲ್ಲೆ, ಹೆಚ್.ಡಿ.ಕೋಟೆ ತಾಲೂಕು, ಹಂಪಾಪುರ ಹೋಬಳಿ, ಚಿಕ್ಕನಂದಿ ಗ್ರಾಮದ ಸರ್ವೆ ನಂ 39/1 ರಲ್ಲಿ ಒಟ್ಟು ವಿಸ್ತೀರ್ಣ 0–36.08 ಗುಂಟೆ ಖುಷ್ಕಿ ಜಮೀನು ಒಂದು ಮತ್ತು ಸರ್ವೆ ನಂ 39/2 ರಲ್ಲಿ ಒಟ್ಟು ವಿಸ್ತೀರ್ಣ 0–38 ಗುಂಟೆ ಖುಷ್ಕಿ ಜಮೀನು ಒಂದು ಮತ್ತು ಸರ್ವೆ ನಂ 39/3 ರಲ್ಲಿ ಒಟ್ಟು ವಿಸ್ತೀರ್ಣ 0–37 ಗುಂಟೆ ಖುಷ್ಕಿ ಜಮೀನು ಒಂದು ಮತ್ತು ಸರ್ವೆ ನಂ 39/6 ರಲ್ಲಿ ಒಟ್ಟು ವಿಸ್ತೀರ್ಣ 0–35.08 ಗುಂಟೆ ಖುಷ್ಕಿ ಜಮೀನು ಒಂದು ಜುಮ್ಲಾ ನಾಲ್ಕು ಐಟಂ ಸರ್ವೆ ನಂಬರ್ ಜಮೀನುಗಳ ಒಟ್ಟು ವಿಸ್ತೀರ್ಣ 3–27(ಮೂರು ಎಕರೆ ಇಪ್ಪತ್ತೇಳು ಗುಂಟೆ) ಖುಷ್ಕಿ ಜಮೀನಿಗೆ ಚಕ್ಕುಬಂದಿ:–
ಪೂರ್ವಕ್ಕೆ : ಕಾಳಸ್ವಾಮಪ್ಪ ಮತ್ತು ಮಹದೇವಪ್ಪ ರವರ ಜಮೀನು, ಪಶ್ಚಿಮಕ್ಕೆ: ಎಂ. ಪುಟ್ಟಸ್ವಾಮಪ್ಪರವರ ಜಮೀನು, ಉತ್ತರಕ್ಕೆ : ದೊರೆಸ್ವಾಮಿ ರವರ ಜಮೀನು, ದಕ್ಷಿಣಕ್ಕೆ : ಪ್ರಸಾದ್ ರವರ ಜಮೀನು.

ಸಹಿ/– ಮಿಲಾಷ್ ಅರೋಲ್ ನರೊಣಃ ವಕೀಲರು,
ನಂ.1197, 12/2, ಕೃಷ್ಣರಾಜ ಬುಲೆವಾರ್ಡ್ ರಸ್ತೆ,
ಮೈಸೂರು ಟೆನ್ನಿಸ್ ಕೋರ್ಟ್ ಮುಂಭಾಗ,
ಚಾಮರಾಜಪುರಂ,
ಮೈಸೂರು.(ಮೊ.9743985891)
ದಿನಾಂಕ: 20.11.2023, ಮೈಸೂರು

ಶ್ರೀ ಸುತ್ತೂರು ಮಠ
ಶ್ರೀ ಮಲೆ ಮಹದೇಶ್ವರ ಬೆಟ್ಟದ ಶಾಖೆ, ಹನೂರು ತಾಲ್ಲೂಕು

ಟೆಂಡರ್ ಪ್ರಕಟಣೆ

ಅತಿಥಿಗೃಹದ ಫಲಹಾರ ಮಂದಿರ ನಿರ್ವಹಣೆ

ಶ್ರೀ ಮಲೆ ಮಹದೇಶ್ವರ ಬೆಟ್ಟದಲ್ಲಿರುವ ಜೆಎಸ್‌ಎಸ್ ಅತಿಥಿಗೃಹದ ಕ್ಯಾಂಟೀನನ್ನು ನಿರ್ವಹಿಸಲು ಟೆಂಡರ್ ಕರೆಯಲಾಗಿದೆ. ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006ರ ಪ್ರಕಾರ ನೋಂದಾಯಿತ ಗುತ್ತಿಗೆದಾರರು ಭರ್ತಿ ಮಾಡಿದ ಅರ್ಜಿಯನ್ನು ನೋಂದಣಿ, ಪಾನ್ ಕಾರ್ಡ್, ಆಧಾರ್ ಕಾರ್ಡ್ ಹಾಗೂ ಅನುಭವದ ಬಗ್ಗೆ ದೃಢೀಕರಣ ಪತ್ರ ಮೊದಲಾದವುಗಳ ಜೆರಾಕ್ಸ್ ಪ್ರತಿಗಳೊಡನೆ ಮೊಹರು ಮಾಡಿದ ಲಕೋಟೆಯಲ್ಲಿ ದಿನಾಂಕ: 05-12-2023 ರೊಳಗೆ ಸಲ್ಲಿಸುವುದು. ಹೆಚ್ಚಿನ ಮಾಹಿತಿ ಅವಶ್ಯವಿದ್ದಲ್ಲಿ 08225-297162 ದೂರವಾಣಿ ಅಥವಾ 72599 75555 ಮೊಬೈಲ್‌ನ ಮೂಲಕ ಸಂಪರ್ಕಿಸುವುದು.

ಸಹಿ/– ಆಡಳಿತಾಧಿಕಾರಿ

ಕರ್ನಾಟಕ ಎಲಿವೇಟ್‌ನಲ್ಲಿ ನವೋದ್ಯಮಗಳಿಗೆ 20 ಕೋಟಿ ನೆರವು

ಐಟಿ-ಬಿಟಿ ಸಚಿವರೂ ಆದ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ ಖರ್ಗೆ ಮಾಹಿತಿ



ಬೆಂಗಳೂರು, ನ.19(ಕೆಎಂಶಿ) – ಕರ್ನಾಟಕ ಎಲಿವೇಟ್‌ನಲ್ಲಿ ನವೋದ್ಯಮಗಳಿಗೆ ಉತ್ತೇಜನ ನೀಡಲು 20 ಕೋಟಿ ರೂ ಒದಗಿಸಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ ಖರ್ಗೆ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನವೆಂಬರ್ 23ರಿಂದ ಡಿಸೆಂಬರ್ 23ರವರೆಗೆ ನವೋದ್ಯಮಗಳಿಂದ ಅರ್ಜಿ ಸಲ್ಲಿಕೆಗೆ ಅವಕಾಶ ನೀಡಲಾಗಿದೆ. ಸಲ್ಲಿಕೆಯಾದ ಅರ್ಜಿಗಳ ಪರಿಶೀಲನೆ ಎರಡನೇ ಹಂತದಲ್ಲಿ ನವೆಂಬರ್ 23ರಿಂದ ಡಿಸೆಂಬರ್ 23ರವರೆಗೆ ನಡೆಯಲಿದೆ ಎಂದರು.

ಇದೇ ಅವಧಿಯಲ್ಲಿ ಸಲ್ಲಿಕೆಯಾದ ಅರ್ಜಿಗಳ ಮೌಲ್ಯಮಾಪನ ಮಾಡಲಾಗುವುದು. ಅಲ್ಲದೆ, ವಿಭಾಗವಾರು ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ. ಆ.24ರಿಂದ ಫೆ.24ರವರೆಗೆ ಗ್ರ್ಯಾಂಡ್ ಫಿನಾಲೆ ನಡೆಯಲಿದ್ದು, ನವೋದ್ಯಮಗಳನ್ನು ಆಯ್ಕೆ ಮಾಡಲಾಗುತ್ತದೆ ಎಂದು ಅವರು ತಿಳಿಸಿದರು.

ವಿಶ್ವದಲ್ಲೇ ಕರ್ನಾಟಕ ಹಾಗೂ ಬೆಂಗಳೂರು ತಂತ್ರಜ್ಞಾನದಲ್ಲಿ 4ನೇ ಸ್ಥಾನ ಪಡೆದಿರುವುದಲ್ಲದೆ, ಆವಿಷ್ಕಾರ, ನವೋದ್ಯಮ ಕ್ಷೇತ್ರದಲ್ಲಿ ವಿಶ್ವದಲ್ಲೇ 8ನೇ ಸ್ಥಾನದಲ್ಲಿದ್ದೇವೆ. ಗ್ಲೋಬಲ್ ಎಕೋಸಿಸ್ಟಮ್ ಇಂಡೆಕ್ಸ್ ಪ್ರಕಾರ ಕರ್ನಾಟಕದ ನವೋದ್ಯಮ ಬಲಿಷ್ಠವಾಗಿದೆ. ರಾಜ್ಯದಲ್ಲಿ 15 ಸಾವಿರ ನೋಂದಾಯಿತ ಸ್ಟಾರ್ಟಪ್‌ಗಳಿವೆ. ನೀತಿ ಆಯೋಗದ ಆವಿಷ್ಕಾರ ಸೂಚ್ಯಂಕದಲ್ಲಿ ಕರ್ನಾಟಕ ನಂ.1 ಇದೆ. ನವೋದ್ಯಮದ ಎಕೋಸಿಸ್ಟಂ ನಲ್ಲಿ 1.90 ಬಿಲಿಯನ್ ಡಾಲರ್ ಮೌಲ್ಯವಿದೆ.

ಟಾಪ್ 5ರೊಳಗೆ ಎರಡ್ಮೂರು ವರ್ಷದಲ್ಲಿ ಬರಬೇಕು ಎಂಬ ಉದ್ದೇಶದಿಂದ ನವೋದ್ಯಮಕ್ಕೆ ಉತ್ತೇಜನ ನೀಡಲಾಗುತ್ತಿದೆ. ನೋಂದಣಿ ಮಾಡಿಕೊಂಡವರಿಗೆ ಉತ್ಪನ್ನ, ಸೇವೆಯ ಮೌಲ್ಯವರ್ಧನೆ, ಇನ್ಕ್ಯುಬೇಷನ್ ಸೌಲಭ್ಯ, ಪ್ರಾಯೋಗಿಕ ಕೆಲಸ ಮಾಡುವ ಅವಕಾಶ ಸ್ಟಾರ್ಟಪ್‌ಸೆಲ್‌ನಿಂದ ಸಿಗಲಿದೆ. ವಾತಾವರಣವನ್ನು ಸ್ಟಾರ್ಟಪ್ ಸ್ನೇಹಿಯಾಗಿಸಿ ಮಾರುಕಟ್ಟೆ ಒದಗಿಸಲಾಗುತ್ತದೆ ಎಂದರು. ಎಲಿವೇಟ್ ಕರ್ನಾಟಕ ಅಡಿ 50 ಲಕ್ಷ ರೂ. ನೆರವು ನೀಡುತ್ತಿದ್ದು, 2016–2023 ರವರೆಗೆ 874 ನವೋದ್ಯಮಗಳಿಗೆ 200 ಕೋಟಿ ರೂ. ಅನುದಾನ ನೀಡಲಾಗಿದೆ. ಬಿಯಾಂಡ್ ಬೆಂಗಳೂರಿಗೆ ಅವಕಾಶ ಕೊಟ್ಟಿದ್ದೇವೆ. ಕಲ್ಯಾಣ ಕರ್ನಾಟಕ ಭಾಗಕ್ಕೆ ಪ್ರತ್ಯೇಕ ಎಲಿವೇಟ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಶೇ.30 ರಷ್ಟು ಮಹಿಳಾ ನವೋದ್ಯಮಿಗಳಿದ್ದಾರೆ. ಐಟಿ–ಬಿಟಿ ಎಸ್ಸಿಪಿ ಟಿಎಸ್ಪಿ ಅನುದಾನವನ್ನು ಉನ್ನತಿ (ಎಲಿವೇಟ್) ಮೂಲಕ 91 ನವೋದ್ಯಮಗಳಿಗೆ ಉತ್ತೇಜನ ನೀಡಲಾಗಿದೆ. ಈ ಸಂಸ್ಥೆಗಳು ವಹಿವಾಟು ಹೆಚ್ಚಿಸುವುದರ ಜತೆಗೆ ಉದ್ಯೋಗ ಕೂಡ ಸೃಷ್ಟಿಸಿದ್ದಾರೆ. ಉದ್ಯೋಗದಾತರೂ ಆಗಿದ್ದಾರೆ. ಎಲಿವೇಟ್‌ನ ಸದುಪಯೋಗ ಮಾಡಿಕೊಳ್ಳಿ. ಎಲ್ಲರಿಗೂ ಹಣವೇ ಬೇಕು ಎಂದೇನಿಲ್ಲ. ಬೇರೆ ರಾಜ್ಯ, ರಾಷ್ಟ್ರಗಳಲ್ಲಿ ಮಾರುಕಟ್ಟೆ ಸಹಾಯ, ಸರ್ಕಾರದೊಂದಿಗೆ ಕೆಲಸ ಮಾಡುವ ಮನಸ್ಸು ಇರಲಿದೆ ಎಂದರು.